ಗ್ರಂಥಮಾಲಾ ೧.

ಕಾವ್ಯಗುಚ್ಛ.

ಕಂ॥ ಪೊಗರಿಂಪು ಗುಣ್ಪು ಪೆಂಪಿನ ।
ಸೊಗಸಿನ ರಸಭಾವ ಚಿತ್ತ ಸದಲಂಕಾರಾ ॥
ದಿಗೆ ಸಲ್ವ ಚೆಲ್ವ ಕಾವ್ಯದ ।
ಬಗೆಯರಿಯದ ಹುಚ್ಚುಗುಂನಿ ಕೂಗಿದೊಡಳ್ಕೇ ॥

ಕಾವ್ಯ ಕಲ್ಪಲತಾ

(೧)

ಕಾವ್ಯಗುಚ್ಛ.



ಕೋಡಿಯ ಸೀಮೆ ಚೆಲ್ವೊಗೆವ ತಾಣಮಲಂಪಿನ ಸಂತೆ ಪೆಂಪು ಸಾ।
ರ್ದಾಡುವ ಭೂಮಿ ಸೌಖ್ಯದೆಡೆ ಪುಣ್ಯದ ಗೊತ್ತು ವಿನೋದದಾಗರಂ॥
ಮೋಡಿಯ ಮಂಟಪಂ ಸಿರಿಯ ಪೆರ್ಚುಗೆಗೊಳ್ಮನೆ ಮುಕ್ತಿಕಾಂತೆ ಕೈ।
ಗೂಡುವ ಬೀಡು ಕನ್ನಡದ ನಾಡು ವಿರಾಜಿಪುದೆಂತು ಬಣ್ಣಿಪೆಂ॥

[ಚಿಕುಪಾಧ್ಯಾಯ]

ಸಂಪಾದಕ,
ಹಣಮಂತ ಬಳವಂತರಾವ ಕೊಣ್ಣೂರ
ಮುಖ್ಯಾಧ್ಯಾಪಕ ರಾಷ್ಟ್ರೀಯ ಶಾಲಾ
ವಿಜಾಪುರ.

ವಿಜಾಪುರ
೧೫-೧-೧೯೩೩

ಬೆಲೆ
೧ ರೂಪಾಯಿ.

ಮುನ್ನುಡಿ.

ನ ತಥಾಕಟು ಘೂತ್ಕೃತಾದ್ವ್ಯಥಾ ಮೇ। ಹೃದಿ ಜೀರ್ಣೋಪವನೇಷು ಘೂಕಲೋಕಾತ್ ॥

ಪರಿಶೀಲಿತಪಾರಶೀಕ ವಾಗ್ಭ್ಯೋ। ಯವನಾನಾಂ ಭವನೇ ಯಥಾ ಶುಕೇಭ್ಯಃ ॥

ಮಧುರಾ ವಿಜಯ. (ಗಂಗಾದೇವಿ)

[ಜೀರ್ಣವಾದ ಉದ್ಯಾನಗಳಲ್ಲಿ ಕೇಳಿ ಬರುವ ಗೂಬೆಗಳ ಕರ್ಣ ಕಠೋರವಾದ ಘೂತ್ಕಾರದಿಂದ ನನಗೆ ಅಷ್ಟೇನು ವ್ಯಥೆಯಾಗಿಲ್ಲ; ಆದರೆ ಯವನರ ಮನೆಯಲ್ಲಿ ಗಿಳಿಗಳೂ ಕೂಡ ಪಾರಶೀಭಾಷೆಯನ್ನಾಡುತ್ತಿರುವುದರಿಂದ ನನ್ನ ಅಂತಃಕರಣವು ಸಂತಾಪದಿಂದ ಬೆಂದು ಹೋಗಿದೆ.]

ಕಂಪರಾಯನು (ವಿಜಯನಗರದ ಬುಕ್ಕರಾಜನ ಮಗನು) ತೊಂಡಮಂಡಲದಿಂದ ಮಧುರೆಗೆ ಹೋಗುವಾಗ ತುರುಷ್ಕರಿಂದ ದೇಶಕ್ಕಾಗಿದ್ದ ಹಾನಿಯನ್ನು ವರ್ಣಿಸುವ ಸಂದರ್ಭದಲ್ಲಿ ಮೇಲಣ ಶ್ಲೋಕವು ಉಕ್ತವಾಗಿದೆ. ಯವನರಿಂದ ತೊಂಡಮಂಡಲವು ಪಾದಾಕ್ರಾಂತವಾಗಿ ಮಾಡಲ್ಪಟ್ಟಿರುವುದಕ್ಕಿಂತಲೂ, ಸಂಸ್ಕೃತಿ ಮೂಲವಾದ ದೇಶಭಾಷೆಯು ಹೀನ ಸ್ಥಿತಿಯನ್ನು ಹೊಂದಿರುವುದು ಗಂಗಾದೇವಿಯ ಮನಸ್ಸಿನಲ್ಲಿ ಅಸಹ್ಯವಾದ ವೇದನೆಯನ್ನುಂಟು ಮಾಡಿತೆಂಬುದು ಮೇಲಣ, ಅವಳ ನುಡಿಗಳಿಂದ ವ್ಯಕ್ತವಾಗುವುದು. ಮನುಷ್ಯರಂತೂ ಒತ್ತಟ್ಟಿಗಿರಲಿ; ಗಿಳಿಗಳೂ ಕೂಡ ಮಾತೃಭಾಷೆಯನ್ನು ಮರೆತು ಪರಭಾಷೆಯನ್ನು ನುಡಿಯಲ್ತೊಡಗಲು ಮಾಡಿದುವಲ್ಲ! " ಎಲೈ ಅರಸೇ ಭಾಷೆಯಳಿದ ಮೇಲೆ ನೀತಿಯ ಮಾತೇಕೆ? ಧರ್ಮದ ಕಥೆಯೇಕೆ? ಎಲ್ಲವೂ ಹಾಳಾಗಿ ಹೋಗುವುದು, " ಎಂದು ವ್ಯಾಘ್ರಪುರಿಯ ದೇವಿಯು ಒಳ್ಳೇ ಉದ್ರೇಕಕಾರಿಯಾದ ಮತ್ತು ಮರ್ಮಭೇದಕವಾದ ಶಬ್ದಗಳಿಂದ ಅರಸನನ್ನು ಹುರಿದುಂಬಿಸಿದ್ದಾಳೆ. ಆಗ ಅಂತಃಪುರದಲ್ಲಿ ವಾಸ ಮಾಡುವ ರಾಣಿಯ ಅಂತಃಕರಣದಲ್ಲಿ ಸ್ವದೇಶಾಭಿಮಾನದ ಜ್ಯೋತಿಯು ಉಜ್ವಲವಾಗಿ ಬೆಳಗುತ್ತಲಿದ್ದಿತಲ್ಲವೇ? ಕರ್ನಾಟಕಸ್ಥರೇ, ಕನ್ನಡ ಭಾಷೆಯ ಉದ್ಧಾರವಾದ ಹೊರತು ನಮ್ಮ ಪುರುಷಾರ್ಥವು ಸಾಧ್ಯವಾಗದು. ನಮ್ಮ ಅಂತಿಮ ಧ್ಯೇಯವಾದ ಮೋಕ್ಷವು ಲಭಿಸಬೇಕಾದರೂ ಸ್ವಭಾಷೆಯ ದ್ವಾರದಿಂದಲೇ. " ಹಿಂದುಸ್ತಾನವು ಬೇಕೋ? ಶೆಕ್ಸಪಿಯರನ ಕೃತಿಗಳು ಬೇಕೋ? " ಎಂಬ ಪ್ರಶ್ನೆಗೆ " ಹಿಂದುಸ್ತಾನವೆ ಇದ್ದರೇನು; ಬಿಟ್ಟರೇನು? ಶೆಕ್ಸಪಿಯರನ ಕೃತಿಗಳನ್ನು 'ಬಿಡಲು ಮಾತ್ರ ನಾವು

ಒಪ್ಪಲಾರೆವು" ಎಂದು ಕಾರ್ಲಾಯಿಲನೆಂಬ ಆಂಗ್ಲ ಕವಿಯು ನುಡಿದಿದ್ದಾನೆ. ಹಿಂದುಸ್ಥಾನದಂತಹ ಸುವರ್ಣಭೂಮಿಯೂ ಕೂಡ ಸ್ವಭಾಷೆಗಿಂತ ಕೀಳಾಯಿತು!! ಇಂಗ್ಲಿಷ್ ಜನರ ಭಾಷಾಭಿಮಾನವು ಎಷ್ಟು ಉಜ್ವಲವಾದುದಿರುತ್ತದೆ. ನೋಡಿರಿ! "ಇಂಗ್ಲಿಷ್ ವಾಙ್ಮಯವು ಪ್ರತಿಯೊಬ್ಬ ಆಂಗ್ಲೇಯನ ಸ್ವತ್ತು," ಎಂದು ಇನ್ನೊಬ್ಬ ಕವಿಯು ಹೇಳಿದ್ದಾನೆ. ಸೂಕ್ಷ್ಮವಾಗಿ ವಿಚಾರಿಸಲು ಇವರ ನುಡಿಗಳು ಯಥಾರ್ಥವಾದುವುಗಳೆಂದು ತೋರುತ್ತದೆ.

ಕವಿಗಳು ಪ್ರಪಂಚದಲ್ಲಿಯ ಅನುಭವಗಳನ್ನು ಕಾವ್ಯಗಳಲ್ಲಿ ಶಬ್ದರೂಪದಿಂದ ಲೋಕದ ಇದಿರಿಗಿಟ್ಟು, ನೀತಿಯನ್ನೂ, ಧರ್ಮವನ್ನೂ ಸುಲಭವಾಗಿ ಕಲಿಸಿ ದೇಶಬಾಂಧವರ ಉದ್ಧಾರವನ್ನು ಮಾಡುತ್ತಾರೆ; ಆದುದರಿಂದಲೇ "ಕಾವ್ಯವು ಕಾಂತೆಯರ ನುಡಿಗಳಂತೆ ಮನೋಹರವಾಗಿದ್ದು, ಅದು ಸಂಪತ್ತನ್ನೂ, ಯಶಸ್ಸನ್ನೂ, ವ್ಯವಹಾರ ಜ್ಞಾನವನ್ನೂ, ಅನಿಷ್ಟ ಪರಿಹಾರವನ್ನೂ, ಇಹದಲ್ಲಿ ಸೌಖ್ಯವನ್ನೂ ಪರದಲ್ಲಿ ಮೋಕ್ಷವನ್ನೂ ಉಂಟು ಮಾಡುತ್ತದೆ." ಎಂದು ಮಮ್ಮಟಾಚಾರ್ಯರು ತಮ್ಮ ಕಾವ್ಯಪ್ರಕಾಶದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಭೂಮಿಯ ಮೇಲೆ ಜನ್ಮವನ್ನೆತ್ತಿದೊಡನೆ ಆವ ಭಾಷೆಯಲ್ಲಿ ಪ್ರೇಮೋದ್ಗಾರಗಳನ್ನು ತೆಗೆದು ನಮ್ಮ ತಾಯಿಯು ನಮ್ಮನ್ನು ಅವಚಿಕೊಂಡಳೋ, ನಾವು ಅಳುವಾಗ "ನನ್ನ ಮುದ್ದೇ, ನನ್ನ ಕಂದಮ್ಮ, ಬಾ." ಎಂದು ಆವ ಭಾಷೆಯಲ್ಲಿ ನುಡಿದು ನಮ್ಮನ್ನು ಸಂತಯಿಸಿದಳೋ, ತೊಟ್ಟಿಲಲ್ಲಿ ಹಾಕಿ ತೂಗುವಾಗ "ಜೋ ಜೋ ಜೋ ಜೋ ಜೋ ಕೃಷ್ಣ ಪರಮಾ। ನಂದ ಗೋಪಿಯ ಕಂದ ಜೋ ಜೋ" ಎಂಬ ಶ್ರುತಿ ಮನೋಹರವಾದ ಜೋಗುಳ ಹಾಡುಗಳನ್ನು ಹೇಳಿ ನಮ್ಮನ್ನು ಮುದ್ದಾಡಿದಳೋ, ಆವ ಮಧುರವಾದ ಭಾಷೆಯಲ್ಲಿ "ಅವ್ವ! ಅಪ್ಪ! ಎಂದು ಮುದ್ದು ಮಕ್ಕಳು ಮುದ್ದಾದ ತೊದಲ್ನುಡಿಗಳಿಂದ ನಮ್ಮನ್ನು ಕರೆಯುತ್ತಲಿರುವವೋ ಅಂತಹ ಕನ್ನಡ ಭಾಷೆಯ ವಿಷಯಕ್ಕೆ ಬಿರುನುಡಿಗಳನ್ನಾಡಿ ಜೀಳುಗಳೆವುದು ಕೃತಘ್ನತೆಯಲ್ಲವೇ?

ಕರ್ನಾಟಕ ದೇಶವೇನು ಸಾಮಾನ್ಯವಾದುದೊ?

॥ ಲಲಿತರಗಳೆ ॥

ಕಣ್ಗೆ ಮಂಗಳಮಾದ ತೆಂಗುಗಳ ಸಾಲ್ಗಳಿಂ।
ತಣ್ಗಂಪಸೀವ ಪೂವಲ್ಲಿಗಳ ಮೇಲ್ಗಳಿಂ॥
ಫಳವಂಜರೀಭರವಿನಮಿತಪೂಗಂಗಳಿಂ।
ಪುಳಿನ ಕಾಹಳಾನೀಕಮನನರ್ದ ಪೂಗಂಗಳಿಂ॥

ಕೆಂಪುಂಡು ಸೊಕ್ಕಿ ಸಲೆ ಬೀಳ್ವ ಮತ್ತಾಳಿಯಿಂ ।
ಸೊಂಪಿನರಲ್ಗಳನಾಂತ ಸಂಪಗೆಗಳೋಳಿಯಿಂ ॥
ಸಲ್ಲಲಿತ ಪಲ್ಲವಾವಳಿಯ ಕಡುಸೊಂಪಿನಿಂ ।
ಮೆಲ್ಲೆಲರ್ಗೊಲೆವ ಸೆಳೆಗೊಂಬುಗಳಲಂಪಿನಿಂ ॥
ನಸುಗಾಳಿಗೊಡೆದೊಸರ್ವ ಮಂಜುಳ ಫಲಂಗಳಿಂ ॥
ದೆಸೆದೆಸೆಗೆ ನರುಗಂಪನೀವ ಕುಸುಮಂಗಳಿಂ ॥
ಕಡುಸೊಂಪುವಡೆದೆಸೆವ ನವ ರಸಾಲಂಗಳಿಂ ।
ಬಿಡದತಿಮನಂಬುಗುವ ಚಾರು ಪನಸಂಗಳಿಂ ॥
ದಾಳಿಂಬದೊಳ್ವಣ್ಣೊಡೆದು ಚೆಮ್ಮಾಗಿಟ್ಟು ।
ಹೇಳಲಳವಡದ ನಲ್ಲೀಲ್ಲೆಯೊಳಗಳವಟ್ಟು ॥
ತೊರೆದೆಚ್ಚ ಪಾಯ್ವ ತನಿರಸಮನುಂಡುರೆ ತಣಿದು ।
ಪೊರೆಯೇರಿ ಪೊಂಗಿ ತಚ್ಛಾಕಾಗ್ರದೊಳ್ ಕುಣಿದು ॥
ಗಳಮಮರಗಿಳಿಯುಚ್ಚ ಪೊಚ್ಚ ಮರುಳಿಗಳಿಂದೆ ।
ತಳಿರ್ಗೊಂಚಲಂ ಕದ್ದುಕೆಯುರ್ಬಿ ಸಂತೋಷದಿಂ ।
ಚೂತದೆಳಗೊಂಬನಡರ್ದುಲಿವ ಕೋಗಿಲೆಗಳಿಂ ॥

× × × ×

ಮಂಜು ಮಧುರೇಕ್ಷುವಾಟಿಗಳ ಪೊಸಲಂಪಿನಿಂ ।
ರಂಜಿಸುವ ಪುಷ್ಪವಾಟಿಗಳ ಕಡುಸೊಂಪಿನಿಂ ॥

× × × ×

ರಂಜಿಸಿದುದುರುಪುಣ್ಯ ದೊಬ್ಬುಳಿಯಲಂಪಿನಿಂ ।
ಮಂಜುಳಾವೃತ ತುಂಗಭದ್ರೆ ಕಡು ಸೊಂಪಿನಿಂ ॥

(ಉದ್ಭಟ ಕಾವ್ಯ.)

ಇಂತಹ ಪುಣ್ಯ ನದೀನದಗಳಿಂದಲೂ, ವೃಕ್ಷರಾಜಗಳಿಂದಲೂ ಸಸ್ಯಾದಿ ಸಂಪತ್ತುಗಳಿಂದಲೂ ಶೋಭಿಸುವ ಕರ್ಣಾಟಕ ದೇಶದ ವಿಷಯದಲ್ಲಿ ಅವನಿಗೆ ತಾನೆ ಆದರವಿರಲಿಕ್ಕಿಲ್ಲ? ಅವನಲ್ಲಿ ಭಕ್ತಿರಸವು ತುಂಬಿ ತುಳುಕಲಿಕ್ಕಿಲ್ಲ? ಅವನ ಮೈಮೇಲೆ ಹರ್ಷಪುಳಕಗಳು ಮೂಡಲಿಕ್ಕಿಲ್ಲ?

ಈ ತೆರದಿಂದ ಕರ್ನಾಟಕದ ಔಜ್ವಲ್ಯವನ್ನೂ, ಆದರ ಸತ್ವವನ್ನೂ ನಮಗಾಗಿ ಕಾವ್ಯಗಳಲ್ಲಿ ಕಾದಿಟ್ಟ ಕವಿಗಳ ಉಪಕಾರವನ್ನು ಎಳ್ಳಷ್ಟಾದರೂ ತೀರಿಸುವುದು ನಮ್ಮ ಕರ್ತವ್ಯವಲ್ಲವೇ? ಈಗ ಆಂಗ್ಲ ಶಿಕ್ಷಣದಿಂದ ತಾಯ್ನುಡಿ-ತಾಯ್ನಾಡು ಗಳ ಅಭಿಮಾನವು ಅಳಿದು ಹೋಗಿದೆ. ನಾವು ಕನ್ನಡ ಕಾವ್ಯಗಳ ಸ್ವಾರಸ್ಯ ವನ್ನು ಕನ್ನಡಿಗರಿಗೆ ತೋರಿಸಿಕೊಟ್ಟು, ಅವುಗಳಲ್ಲಿ ಅಭಿರುಚಿಯನ್ನುಂಟು ಮಾಡಲು ಪ್ರಯತ್ನಿಸುವವರಲ್ಲೊಬ್ಬರಾಗಿದ್ದೇವೆ. ಇದುವೆ ನಮ್ಮ ಧ್ಯೇಯವು. ಈಸಲ ಕರ್ನಾಟ-ಕಾವ್ಯ-ಕ್ಷೇತ್ರದಲ್ಲಿದ್ದ ಕೆಲವು ರಸಭರಿತವಾದ ತೆನೆಗಳನ್ನಾಯ್ದು ಕನ್ನಡಿಗರಿಗೆ ಅರ್ಪಿಸಿದ್ದೇವೆ. ನಾವು ನಮ್ಮ ನ್ಯೂನತೆಗಳನ್ನರಿತವ ರಾದರೂ, ಕರ್ತವ್ಯ ವಿಮುಖರಾಗಬಾರದೆಂದು ಈ ಕಾರ್ಯದಲ್ಲಿ ಕೈಹಾಕಿ ರುವೆವೇ ಹೊರತು ನಮ್ಮ ಪಾಂಡಿತ್ಯ ಪ್ರದರ್ಶನೆಗಲ್ಲ. ಈ ತೆನೆಗಳ ಹಾಲನ್ನು ಸವಿದ ಕರ್ನಾಟಕಸ್ತರಲ್ಲಿ ಭಾಷಾಸೇವೆಯನ್ನು ಮಾಡಬೇಕೆಂಬ ಬುದ್ಧಿಯು ತ್ಪನ್ನವಾಗಿ, ಅವರು ತಾಯ್ನುಡಿಯ ಏಳ್ಗೆಗಾಗಿ ಅವಿಶ್ರಾಂತ ಶ್ರಮ ತೆಗೆದು ಕೊಳ್ಳಲು ಪ್ರವೃತ್ತರಾದರೆ ನಮ್ಮ ಶ್ರಮಕ್ಕೆ ತಕ್ಕ ಫಲ ಸಿಕ್ಕಂತಾಗುವುದು. ಈ ಕಲ್ಪಲತೆಯನ್ನು ಬೆಳೆಯಿಸುವ ಭಾರವು ಉದಾರರಾದ ಕನ್ನಡಿಗರನ್ನೇ ಕೂಡಿದೆ. ಇನ್ನು ಸುಶಿಕ್ಷಿತವರ್ಗಕ್ಕೆ ಹೇಳುವುದೆಂದರೆ ಒಂದೇಮಾತು:—

॥ ಭಾಮಿನೀ ಷಟ್ಪದಿ ॥

" ಕಳೆದು ಹೋಯಿತು. ಹಗಲು" ಎನ್ನುತೆ।
ಕಳೆಯದಿರು ಕಣ್ಣೀರ ಕಪ್ಪದಿ।
ಅಳಲಿದರೆ ತಾ ಮರಳಿ ಬರ್ಪುದೆ ಕಳೆದ ದಿವಸವದು? ॥
ಕಳೆದುಕೊಳ್ಳುವೆ ಮತ್ತೆ ರಾತ್ರಿಯ।
ಬೆಳಗುತಿಹ ನಕ್ಷತ್ರ ಪುಂಜದ।
ಬೆಳಕು ಸಹ ನೀನಿದನು ತಿಳಿದಿರು ಮಾನವೋತ್ತಮನೇ ॥

—ಶ್ರೀ ರವೀಂದ್ರನಾಥ ಠಾಕೂರ.

" ಸಾಹಿತ್ಯ ಸೇವಕ "

ಹಣಮಂತ ಬಳವಂತರಾವ್ ಕೊಣ್ಣೂರ.

....

ಪ್ರಾರ್ಥನೆ.

॥ ವಾರ್ಧಿಕ ಷಟ್ಪದಿ ॥

ಗಿರಿಜೆಯ ಮೊಗಂ ನೀಲಕುಟ್ಟಿಮದೊಳಂ ಪೊಳೆಯೆ ।
ಸರಸಿಯೊಳ್ ಮೆರೆವ ತಾವರೆಯೆಂದು ಕೈನೀಡೆ ।
ಶಿರವೆತ್ತಿ ಸಿಂಹಾಸ್ಯಗಣವರನ ಕಂಡೋಡಿವರ್ಪ ತನ್ಮನ ನವಿಲಿಗೆ ॥

ಉರಗನಳ್ಕುತೆ ಸರಿಯೆ ಕಟ್ಟಳಿದು ಪೊಡೆಯೊಡೆದು ।
ಸುರಿಯಲುಂಡಲಿಗೆ ಬಂದಪ್ಪಿ ಹೊಟ್ಟೆಯ ಕಟ್ಟ।
ಕರಿಮುಖನ ಮುದ್ದು ಬೇಡಲ್ಕೆ ಸುಂಡಲನೀಡೆ ನಗುವಶಿವರಕ್ಷಿಸೆಮ್ಮಂ॥

" ಭಾವಚಿಂತಾರತ್ನ ಸಂಧಿ-೪. ಪ-೨. "

ಇಂದ್ರನೀಲಗಳಿಂದನಿರ್ಮಿತವಾದಕೈಲಾಸಭವನದಲ್ಲಿ ಪಾರ್ವತೀದೇವಿಯ ಮುಖದ ಪಡಿನೆಳಲು ಶೋಭಿಸುತ್ತಿರಲು, ಆನೆಯ ಮೋರೆಯ ಗಣಪಣ್ಣನು ಅನನ್ನು ಸರೋವರದಲ್ಲಿರುವ ಕಮಲವೆಂದು ಭಾವಿಸಿ ತೆಗೆದುಕೊಳ್ಳಲಿಕ್ಕೆಂದು ತನ್ನ ಸುಂಡಲವನ್ನು ಚಾಚಿದನು. [ಸರೋವರದ ನೀರು ಆಕಾಶದ ಮೂಲಕ ನೀಲವರ್ಣದಿಂದೊಪ್ಪುವಂತೆ ಇಲ್ಲಿ ನೀಲಮಣಿಮಂದಿರದ ಕಾಂತಿಯು ನೀಲ ವರ್ಣವಾಗಿರುವುದರಿಂದಲೂ, ಪಾರ್ವತೀ ದೇವಿಯ ಶುಭ್ರಕಾಂತಿಯುಳ್ಳ ಮುಖದ ಪ್ರತಿಬಿಂಬವು ಆ ನೀಲ ಕಾಂತಿಯಲ್ಲಿ ಕಮಲದಂತೆ ಕಾಣಿಸಿದುದ ರಿಂದಲೂ ಗಣಪತಿಯು ಅದನ್ನು ತೆಗೆದುಕೊಳ್ಳಲಿಕ್ಕೆ ತನ್ನ ಸುಂಡಲವನ್ನು ಮುಂದಕ್ಕೆ ಚಾಚಿದನು. ಏಕೆಂದರೆ ಕಮಲಗಳನ್ನು ಉಲ್ಲಾಸದಿಂದ ಕಿತ್ತು ಹಾಕುವುದು ಆನೆಯ ಸ್ವಭಾವವು- [" ಬೆಳ್ದಿಂಗಳ ಬೆಳತಿಗೆಯಂ ... ... ಬಿಸ-ಭ್ರಾಂತಿಯಿಂದಂ ಕರ್ದುಕಲ್ ಕೈಗೆಯ್ಯೊಳಾರಯ್ದುಪುದಿಭಕಳಭಂ "— ಲೀಲಾವತಿ ಆಶ್ವಾಸ ೩. ಪದ್ಯ ೨೩; ಮತ್ತು " ವನಜಮನೊರ್ಕ್ಕಲಿಕ್ಕಿ ...... ಕಾನನ ಕರಿಯಂತೆ ಬಂದುದೆಲರ್ " — ನೇಮಿನಾಥ ಪುರಾಣ. ಆಶ್ವಾಸ ೫ ಪದ್ಯ ೯೮] ಆಗ ಷಣ್ಮುಖನ ವಾಹನವಾದ ನವಿಲು, ಮೋರೆಯನ್ನೆತ್ತರಿಸಿದ ಈ ಗಣಪತಿಯ ಸುಂಡಲವನ್ನು ನೋಡಿ, ಹಾವೆಂದು ತಿಳಿದು ಓಡಿ ಬಂದಿತು. [ಏತಕ್ಕೆಂದರೆ, ಹಾವಿಗೂ, ನವಿಲಿಗೂ ಬದ್ಧ ದ್ವೇಷವು.) ಈ ನವಿಲಿನ ಬರುವಿಕೆಯನ್ನು ನೋಡಿದೊಡನೆ ಗಣಪತಿಯ ಹೊಟ್ಟೆಗೆ ಬಿಗಿದಿದ್ದ ಹಾವು ಅಂಜಿ ಒತ್ತಟ್ಟಿಗೆ ಸರಿ

ಯಿತು. ಆಗಲೆ ಅವನ ಹೊಟ್ಟೆಯು ಮುಂದೆ ಬಂದು ಬಿದ್ದು ಒಡೆಯಲು, ಮೋದಕಗಳೆಲ್ಲ ಹೊರಬಿದ್ದವು. ಇದನ್ನು ನೋಡಿ ಧಾವಿಸಿಬಂದು ಮಗನನ್ನು ಬಿಗಿದಪ್ಪಿ, ಅವನ ಹೊಟ್ಟೆಯನ್ನು ಕಟ್ಟಿ ಸರಿಪಡಿಸಿ "ಮಗೂ, ಒಂದು ಮುದ್ದು ಕೊಡು" ಎಂದೊಡನೆ ಮುಖದ ವರೆಗೆ ಚಾಚಿದ ಅವನ ನೀಳವಾದ ಸುಂಡಲವನ್ನು ನೋಡಿ [ಘೊಳ್ಳೆಂದು] ನಕ್ಕ ಪರಮಾತ್ಮನೇ, ನಮ್ಮನ್ನು ರಕ್ಷಿಸು — ಈ ಪ್ರಾರ್ಥನಾಪದ್ಯವನ್ನೋದಿದೊಡನೆ ಭವಭೂತಿಯ ಮಾಲತೀ ಮಾಧವದೊಳಗಿನ 'ಮಹಾದೇವನ ತಾಂಡವ ಕಾಲದಲ್ಲಿ ನಂದಿಯು ಆನಂದ ಪರವಶನಾಗಿ ಮೃದಂಗವನ್ನು ಬಾರಿಸಲು, ಅದರ ಸಾಂದ್ರವೂ ಗಂಭೀರವೂ ಆದ ನಾದವು ಎಲ್ಲೆಲ್ಲಿಯೂ ಪಸರಿಸಲು, ಕುಮಾರನ ವಾಹನವಾದ ನವಿಲು ಅದನ್ನು ಮೇಘಗರ್ಜನೆಯೆಂದು ಭಾವಿಸಿ ಬಂದಿತು (ಗಣವದನ)ಹಾವು ನವಿಲನ್ನು ನೋಡಿ ಅಂಜಿ ಅವನ ಮೂಗಿನ ಸೊಳ್ಳೆಯಲ್ಲಿ ಸೇರಲು ಚಿಃ ಚಿಃ ಚಿಃ ಎಂದು ಚೀತ್ಕಾರವನ್ನೆಬ್ಬಿಸಿ ಅಲ್ಲಾಡುವ ಗಣಪತಿಯ ಮುಖವು ನಿಮ್ಮನ್ನು ರಕ್ಷಿಸಲಿ" ಎಂಬ ಚಮತ್ಕಾರವಾದ ನಾಂದೀ ಪದ್ಯವು ನಮ್ಮ ನೆನಪಿಗೆ ಬರುತ್ತದೆ.

ಪ್ರಾರ್ಥನೆ.

(ಲೇಖಕ:- ಹ. ಬ. ಕೊಣ್ಣೂರ)

॥ ಮತ್ತೇಭವಿಕ್ರೀಡಿತ ॥

ಜನಸಮ್ಮೋಹನವಿದ್ಯೆ ತನ್ನ ಮಧುವಿಂ ಪುಟ್ಟಿತ್ತು ಪುಷ್ಪಂಗಳುಂ ।
ಳ್ಳನಿತುಂ ನೋಂತವೆ ತನ್ನ ಕಿಳೆಸಳ ಸೌಭಾಗ್ಯಕ್ಕೆನಿಪ್ಪಗ್ಗದೀ ॥
ವನದೇವೀಸಖಿಗೀ ವಸಂತ ವಿಜಯಶ್ರೀದೇವಿಗೀ ಚೂತರಾ ।
ಜನ ಮಹಾದೇವಿಗೆ ಮಲ್ಲಿಕಾ ರಮಣಿಗಂ ಭದ್ರಂ ಶುಭಂ ಮಂಗಳಂ ॥

(ಅಭಿನವ ಪಂಪನ ಮಲ್ಲಿನಾಥ ಪುರಾಣ ೭-೫೧)

[ಜನಸಮ್ಮೋಹನ ವಿದ್ಯೆಯು (ಜನರನ್ನು ಮೋಹಿಸುವ ಕಲೆಯು) ತನ್ನ ಕುಸುಮರಸದಿಂದ ಹುಟ್ಟಿತು. ಉಳಿದ ಪುಷ್ಪಗಳು ಎಣಿಕೆಯುಳ್ಳವಷ್ಟು ಇದ್ದರೂ ತನ್ನ ಒಂದು ಸಣ್ಣ ಎಸಳಿನ ಸೌಭಾಗ್ಯವನ್ನು ಪಡೆಯುವಷ್ಟು ಪುಣ್ಯ ಪುಳ್ಳುಗಳಾಗಿರುವವೇ? (ಇಲ್ಲ) ಎಂಬಂತೆ ಶೋಭಿಸುವ ಈ ಶ್ರೀಸ್ತ್ರವಂದ ವನದೇವೀ ಸಖಿಯೂ, ವಸಂತ ವಿಜಯ ಲಕ್ಷ್ಮಿಯೂ, ಚೂತರಾಜನ ಸೌಭಾಗ್ಯಶ್ರೀಯೂ ಆದ ಮಲ್ಲಿಕಾಕೋಮಲೆಗೆ ಸೌಖ್ಯವೂ ಕಲ್ಯಾಣವೂ, ಮಾಂಗಲ್ಯವೂ ಸ್ಥಿರವಾಗಲಿ!!]

ವಸಂತಸಮಯದಲ್ಲಿ ವನಲಕ್ಷ್ಮಿಯ ಸೊಬಗನ್ನು ನೋಡಲೆಳಸಿ, ಒರ್ವ ರಾಜನು ಲೀಲೋದ್ಯಾನಕ್ಕೆ, ಮಂಗಳ ಪಾಠಕರ ಗಡಣದೊಡನೆ ಬರಲು, ಒಬ್ಬ ಮಂಗಲ ಪಾಠಕನು ಮಲ್ಲಿಕಾಲತೆಯಾದ (ಭ್ರಮರಕುಲವೇ ಕೇಶಪಾಶವಾಗಿದ್ದ) ಮಲ್ಲಿಕಾನಲ್ಲೆಗೆ ಅಭಿಮುಖನಾಗಿ, "ಮಲ್ಲಿಗೆಯ ಮನೋಹರವಾದ ಗಂಧವನ್ನು ಧರಿಸಿ ತೆಂಕಣಗಾಳಿಯು ಗಂಧವಹನಾದುದು. ಮಲ್ಲಿಕಾ ಮಧುವಿನಿಂದಲೇ ವಸಂತವು ಮಧುಮಾಸವಾಯ್ತು. ಶರಪ್ರಯೋಗಕ್ಕೆ ಸಿದ್ಧವಾಗಿರುವ ಮಲ್ಲಿಕಾ ಕುಸುಮಗಳಿಂದಲೇ ಮನ್ಮಥನು ಕುಸುಮಾಯುಧನಾದನು. ಮಲ್ಲಿಕಾಮುಕುಳವೆಂಬ ಮಣಿಕಲಶದಲ್ಲಿದ್ದ ಗಂಧೋದಕದಿಂದ ಮನೋಭವನಿಗೆ (ಕಾಮದೇವನಿಗೆ) ಸಾಮ್ರಾಜ್ಯಾಭಿಷೇಕವಾಯ್ತು. ಅಂದ ಮೇಲೆ ತೆಂಕಣಗಾಳಿಯೂ, ವಸಂತಮಾಸವೂ, ಕುಸುಮಾಯುಧನೂ ಜನರನ್ನು ಮೋಹಿಸುವ ವಿದ್ಯೆಯನ್ನು ತನ್ನಿಂದ ಕಲಿತರೆಂದೂ, ತನ್ನ ಒಂದು ಸಣ್ಣ ಎಸಳಿನ ಸೌಭಾಗ್ಯವು ಕೂಡ ಉಳಿದ ಪುಷ್ಪಗಳಿಗೆ ಬರಲಾರದೆಂದೂ ಮಲ್ಲಿಕಾಲತೆಯು ಹೆಂಪಿನಿಂದ ಬೀಗುವದರಲ್ಲೇನಾಶ್ಚರ್ಯ! ಈ ಮಲ್ಲಿಕಾರಮಣಿಯು ವನದೇವಿಯ ಸಖಿಯು; ವಸಂತನ ವಿಜಯಲಕ್ಷ್ಮಿಯು; ಸಹಕಾರರಾಜನ ಸೌಭಾಗ್ಯ ಲಕ್ಷ್ಮಿಯು. ಇವಳಿಗೆ ಕಲ್ಯಾಣವಾಗಲಿ" ಎಂದು ಮಲ್ಲಿಗೆಯ ಲತೆಯನ್ನು ಹೃದಯಂಗಮವಾಗಿ ವರ್ಣಿಸಿದ್ದಾನೆ.

“ಕಾವ್ಯಕ್ಕೆ ಮುಖ್ಯವಾಗಿ ಎರಡು ಪ್ರಯೋಜನಗಳುಂಟು. ವಿಷಯವನ್ನು ಸ್ಪಷ್ಟವಾಗಿ ತಿಳಿಸುವದೊಂದು ಪ್ರಯೋಜನ; ಆಹ್ಲಾದವನ್ನುಂಟುಮಾಡುವದು ಮತ್ತೊಂದು. ಕವಿಸಂಕೇತವನ್ನು ಅಂಗೀಕರಿಸದಿದ್ದರೆ ಈ ಎರಡೂ ಪ್ರಯೋಜನವೂ ಏಕತ್ರ ಸಿದ್ಧವಾಗಲಾರದು. ಆದುದರಿಂದಲೇ ಕವಿಗಳು ಕೋಪ, ತಾಪ, ಕೀರ್ತ್ಯಕೀರ್ತಿ, ದ್ವೇಷಾನುರಾಗಾದಿಗಳಿಗೆ ಬಣ್ಣವನ್ನು ಕೊಡುವದು. ನದಿ, ಲತೆ, ವನಗಳನ್ನು ಸ್ತ್ರೀಯಂತೆ ವರ್ಣಿಸುವದು; ಋತು, ಕಾಲ, ಅಗ್ನಿಗಳನ್ನು ಪುರುಷರಂತೆ ವರ್ಣಿಸುವದು; ಕೆಲವು ವೇಳೆ ಅಗೋಚರವಾದ ಪದಾರ್ಥಗಳ ವ್ಯಾಪಾರವನ್ನು ವಿಶದವಾಗಿ ತಿಳಿಸಬೇಕಾಗುವದು. ಆಗ ಕವಿಗಳು ಸಾಮಾನ್ಯರಂತೆ ನೀರಸವಾಗಿ ತಿಳಿಸದೆ ಸರಸವಾಗಿ ತಿಳಿಸುವರು. ಋತುಧರ್ಮಗಳನ್ನು ತಿಳಿಸುವಾಗ ರಾಜನ ಹೋಲಿಕೆಯನ್ನು ಕೊಟ್ಟು ವರ್ಣಿಸುವರು. ಚೇತನತ್ವಾದ್ಯಾರೋಪಗಳನ್ನು ಮಾಡದೆಯೇ ಸ್ಪಷ್ಟಪಡಿಸುವದಕ್ಕೂ ಸಾಧ್ಯವಾಗಿದ್ದ ಪಕ್ಷದಲ್ಲಿ “ರವಿಕಾಣದ ಕವಿಕಂಡ” ಎಂಬ ಕವಿಗಳು ಹೀಗೆ ಮಾಡುತ್ತಲೆ ಇರಲಿಲ್ಲ”

(ಕವಿ ಸಮಯ)

ಮೇಲಿನ ಪದ್ಯದಲ್ಲಿ ಮಾವಿನ ಮರವನ್ನು ಪತಿಯಾಗಿಯೂ, ಮಲ್ಲಿಕೆಯನ್ನು ವಧುವಾಗಿಯೂ ಕವಿಯು ವರ್ಣಿಸಿದ್ದಾನೆ. ಈ ಪದ್ಯವನ್ನು ಓದಿದೊಡನೆ ಕವಿಕುಲ ತಿಲಕನಾದ ಕಾಲಿದಾಸನು ಶಾಕುಂತಲ ನಾಟಕದಲ್ಲಿ ಎಳಮಾವಿನ ಮರಕ್ಕೆ ನವಮಾಲಿಕಾಲತೆಯನ್ನು ಸ್ವಯಂವರವಧುವನ್ನಾಗಿಯೂ ರಘುವಂಶದಲ್ಲಿ ಸಹಕಾರವೃಕ್ಷವನ್ನು ವರನಾಗಿಯೂ ಫಲಿನೀಲತೆಯನ್ನು ವಧುವಾಗಿಯೂ ವರ್ಣಿಸಿರುವದು ನಮ್ಮ ಸ್ಮರಣೆಗೆ ಬರುತ್ತದೆ. “ರಮಣಿಯೊಲ್ ತೋರೆ ಮಾಧವೀ ರಮಣನಾಮ್ರ ,, ಎಂದು ಕೀರ್ತಿಶೇಷರಾದ ವಾಸುದೇವಾಚಾರ್ಯ ಕೆರೂರ ಇವರು ವರ್ಣಿಸಿದ್ದಾರೆ.

[ಕಾವ್ಯದಲ್ಲಿ ಇಂಥ ವರ್ಣನೆಗಳು ಅನೇಕ ಸಲ ಬರುತ್ತವಾದಕಾರಣ, ಅವುಗಳ ಸ್ವಾರಸ್ಯವು ಸಂಪೂರ್ಣವಾಗಿ ತಿಳಿಯಬೇಕೆಂದು ಕವಿಸಮಯದಲ್ಲಿಯ ಅವತರಣಿಕೆಯನ್ನು ಕೊಟ್ಟಿದ್ದೇವೆ.]

॥ ಮತ್ತೇಭವಿಕ್ರೀಡಿತ ॥

ಸುಮನೋಮಾರ್ಗಣನಿಲ್ಲಿ ನಿರ್ಮಿಸಿದ ಭೃಂಗೀ ಜ್ಯಾ ಲ ಸತ್ಪುಷ್ಪಚಾ।
ಪಮಿದೆಂಬಂತುರೆ ನೀಳ್ದ ಸತ್ಕುಸುಮ ಮಲ್ಲೀವಲ್ಲಿ ಪರ್ಬಿರ್ಪ ವಿ॥
ಭ್ರಮದಿಂದಾಮ್ರಮಹೀರುಹಂ ಲತಿಕೆಯೆಂಬಾಕಾಂತೆಯೊಳ್ ಕೂಡಿದ।
ದನುನಾಂತಿರ್ದುದು ತಾಂ ಲತಾವೃತಕನೆಂಬಾಳಿಂಗನ ಪ್ರೌಢಿಯಿಂ॥

(ಶಾಂತೀಶ್ವರ ಪುರಾಣ-೧೦-೧೧೫)

[ಇಲ್ಲಿ ಪುಷ್ಪಬಾಣನು (ಕಾಮನು) ರಚಿಸಿದ ಪೆಣ್ದುಂಬಿಗಳೆಂಬ ಮೌರ್ವಿಯಿಂದೆಸೆಯುವ ಪುಷ್ಪಚಾಪವೋ (ಹೂಬಿಲ್ಲೋ) ಎಂಬಂತೆ ಬಲು ವಿಸ್ತಾರವಾಗಿ ಶೋಭಿಸುವ ಮಲ್ಲಿಗೆಯ ಬಳ್ಳಿಯು ಮಾವಿನಮರವನ್ನು ತಳ್ಕೈಸಿ ಹಬ್ಬಿರುವದರಿಂದ ಆ ಮಾವು ಕೋಮಲಲತೆಯೆಂಬ ಆ ಕಾಂತೆಯಲ್ಲಿ ಲತಾ

ವೃತಕವೆಂಬ ಆಲಿಂಗನಪ್ರೌಢಿಯಲ್ಲಿ ಕೂಡಿದಂತೆ ವಿಲಾಸವನ್ನು (ರಾಮಣೀಯಕತೆಯನ್ನು) ಹೊಂದಿರುವದು]

ಇಲ್ಲಿ ನಾಯಕನು 'ವನಕೇಳೀಯೋಗ್ಯಜನಾವಳಿಯಿಂ ಬೆರಸು'ವನಶ್ರೀಯ ವಿಲಾಸವನ್ನು ನೋಡಿಕೊಂಡು ವನವಿಹಾರ ಮಾಡಲು ಬಂದವನು. ಆ ಚೂತ ವೃಕ್ಷದ ಮತ್ತು ಮಲ್ಲಿಕಾಲತೆಯ ಸಂಗಮವನ್ನು ನೋಡಿದೊಡನೆ ಅವನಿಗೆ ಕಾಮಶಾಸ್ತ್ರದೊಳಗಿನ "ಲತಾವೃತಕ" ವೆಂಬ ಆಲಿಂಗನದ ಭೇದವು ನೆನಪಿಗೆ ಬರುವದು ಸ್ವಾಭಾವಿಕವು. ಇಲ್ಲಿ ಸಹಕಾರಕ್ಕೆ ಪುಂಸ್ತ್ವಾರೋಪಣ ಮಲ್ಲಿಕಾಲತೆಗೆ ಸ್ತ್ರೀತ್ವಾರೋಪಣ ಮಾಡಿ ಕವಿಯು ಅವೆರಡೂ ಪ್ರೌಢಿಯಿಂದ ಆಲಿಂಗನ ಸುಖವನ್ನನುಭವಿಸುತ್ತಿದ್ದವೆಂದು ವರ್ಣಿಸಿರುದು ಎಷ್ಟು ಮನೋಹರವಾಗಿದೆ! ಚೇತನತ್ವದ್ಯಾರೋಪಗಳನ್ನು ಮಾಡುವದು ಆಹ್ಲಾದ ಹುಟ್ಟಿಸುವದಕ್ಕೆಂಬುದು ಸ್ಪಷ್ಟವು.

ವಸಂತವಾಸವಲ್ಲಿ ರತಿದ್ವಿತೀಯನಾದ ಮದನನು ತನ್ನ ಚಾಪಕ್ಕೆ ಪುಷ್ಪಬಾಣಗಳನ್ನು ತೊಡಿಸಿ ಸಿದ್ಧವಾಗಿರಲು ಸ್ಥಾವರ ಜಂಗಮ ಭಾವಗಳು ಸ್ನೇಹರಸಪೂರ್ಣವಾದವುಗಳಾಗಿ ಪರಸ್ಪರಾನುರಾಗವನ್ನು ಕ್ರಿಯೆಗಳಿಂದ ವ್ಯಕ್ತಪಡಿಸಿದುವೆಂಬುವೇ ತಾತ್ಪರ್ಯವು. ಇದೇ ಆಶಯವನ್ನು ಕಾಲಿದಾಸಕವಿಯು ಕೆಳಗಣ ಶ್ಲೋಕದಲ್ಲಿ ಬಹಳ ಚೆನ್ನಾಗಿ ವ್ಯಕ್ತಗೊಳಿಸಿದ್ದಾನೆ.

पर्याप्तपुष्पस्तबकस्तनाभ्यः
स्फुरत्प्रवालोष्ठमनोहराभ्यः ।
लतावधूभ्यस्तरवोऽप्यवापु
र्विनम्रशाखाभुजबंधनानि ॥

(ಕುಮಾರಸಂಭವ ೩-೩೯-)

(ಸ್ಥಾವರಾತ್ಮಕವಾದ ವೃಕ್ಷಗಳು ಕೂಡ ಲತಾವಧುಗಳ ಶಾಖಾ ಭುಜಾಲಿಂಗನವನ್ನು ಪಡೆದುವು. ಚೇತನಾತ್ಮಕ ಪ್ರಾಣಿಗಳು ವಿಕಾರ ವಶರಾಗುವದರಲ್ಲೇನಾಶ್ಚರ್ಯ?)

॥ ಚಂಪಕಮಾಲೆ ॥

ಕುಸುಮಕುಲಕ್ಕೆ ನಿನ್ನರಸೆ ನಿನ್ನ ವಿಳಾಸಮೆ ನಿನ್ನ ಚೆಲ್ವೆ ನಿ ।
ನ್ನೆಸಕವೆ ನಿನ್ನ ಸಲ್ಗೆ ಮಧುಲಕ್ಷ್ಮಿಯೊಳಾ ಮಲಯಾನಿಲೇಂದುಗಳ್ ॥
ಪೊಸಯಿಸೆ ನಿನ್ನ ಸೌರಭಮನೆಂದಭಿಷೇಕಪುರಸ್ಸರಂ ಸ್ಮರಂ ।
ನಸುವಿರಿದಿರ್ದ ಮಲ್ಲಿಗೆಗೆ ಕಟ್ಟಿದನಂಕದ ರಾಜ್ಯಪಟ್ಟಮಂ ॥

(ಹೊನ್ನನ ಶಾಂತಿಪುರಾಣ-ಕವಿಚರಿತೆ)

[ಹೂಗಳಲ್ಲಿ ನಿನ್ನ ಸಾಮ್ರಾಜ್ಯವೇ ಸಾಮ್ರಾಜ್ಯವು. ನಿನ್ನ ವಿಲಾಸವೇ ವಿಲಾಸವು. ನಿನ್ನ ಸೌಂದರ್ಯವೇ ಸೌಂದರ್ಯವು. ನಿನ್ನ ಕಾಂತಿಯೇ ಕಾಂತಿಯು. ನಿನ್ನ ಸೊಬಗೇ ಸೊಬಗು. ಸೌಭಾಗ್ಯ ಲಕ್ಷ್ಮಿಯಿಂದ ಕೂಡಿದ ವಸಂತ ಸಮಯದಲ್ಲಿ ಮಲಯಮಾರುತನೂ ಚಂದ್ರನೂ ನಿನ್ನ ಸುಗಂಧವನ್ನು ಎಲ್ಲೆಡೆಯಲ್ಲಿಯೂ ಹರವಿದರೆಂದು ವಿಚಾರಿಸಿ ಕಾಮನು ಅಭಿಷೇಕಪೂರ್ವಕವಾಗಿ ಸ್ವಲ್ಪ ಅರಳಿದ ಮಲ್ಲಿಗೆಗೆ ಶೃಂಗಾರದ ರಾಜ್ಯಪಟ್ಟವನ್ನು ಕಟ್ಟಿದನು.]

ಮಲ್ಲಿಗೆಯು ನಿಸರ್ಗತಃ ರಮಣೀಯವಾದ ಪುಷ್ಪವು. ಅದರ ಸೌರಭವು ಅಪ್ರತಿಮವಾದುದು. ಮೇಲಾಗಿ ವಸಂತ ಮಾಸವು. ಅದರಲ್ಲಿಯೂ ಬೆಳ್ದಿಂಗಳದ ಶಾಂತವಾದ ರಾತ್ರಿಯ ಸಮಯವು. ಕೇಳುವದೇನು? ಮಂದಮಾರುತನು ಆಹ್ಲಾದಕರವಾದ ಸಾಂದ್ರಚಂದ್ರಿಕಾತಪದಲ್ಲಿ ಮಲ್ಲಿಗೆಯ ಪರಿಮಳವನ್ನು ನಾಲ್ಕೂ ದಿಕ್ಕುಗಳಲ್ಲಿಯೂ ಹರಡಿ, ಜನರಲ್ಲಿ ಆನಂದವನ್ನು ಬೀರಿ, ಅದರ ಕೀರ್ತಿಯನ್ನು ಉಜ್ವಲವಾಗಿ ಮಾಡಿದನು. ಆಮೇಲೆ ಕಾಮನು ತನ್ನ ಬಂಧುವಾದ ವಸಂತನೂ, ತನ್ನ ದೂತನಾದ ಮಾರುತನೂ ತನಗೆ ಪ್ರಿಯವಾದ ಮಲ್ಲಿಗೆಯ ಸೌರಭಕೀರ್ತಿಯನ್ನು ಪ್ರಸರಿಸಿದುದನ್ನು ನೋಡಿ ಹರ್ಷವುಳ್ಳವನಾಗಿ, ಅವಳಿಗೆ ಶೃಂಗಾರಸಾಮ್ರಾಜ್ಯಪದವನ್ನು ಕೊಟ್ಟುಬಿಟ್ಟನೆಂದು ಕವಿಯು ಆಹ್ಲಾದಕರವಾಗಿ ವರ್ಣಿಸಿದ್ದಾನೆ. ಮದನನು ಪಸುರ್ನನೆ (ಹಸುರುಮೊಗ್ಗೆ), ತುದಿ ಬೆಳ್ಳಗಾದ ಮೊಗ್ಗೆ, ಪೂರ್ಣಬೆಳ್ಳಗಾದ ಮುಗುಳು, ಪೊರೆವೋದ ಕುಟ್ಮಲವು, ಅರಳಿದ ಹೂವು ಈ ಶರಪಂಚಕಗಳನ್ನು ಮಲ್ಲಿಗೆಯಲ್ಲಿ ತಿರಿದುಕೊಂಡು ಪಂಚಬಾಣನಾದನೆಂದು ಒಬ್ಬ ಕವಿಯು ವರ್ಣಿಸಿದ್ದಾನೆ. ಅಂದಮೇಲೆ ಮಲ್ಲಿಗೆಯು ಕಾಮನ ಜೀವಿತಸರ್ವಸ್ವವು. ಮದನನು ಅದಕ್ಕೆ ಪಟ್ಟಗಟ್ಟಿದುದು ಉಚಿತವೇ. ಪಟ್ಟಗಟ್ಟುವಾಗ ತೀರ್ಥಜಲದಿಂದ ಅಭಿಷೇಕ ಮಾಡುವಂತೆ ಮದನನು ಸೌರಭನೆಂಬ ಮಂಗಳಜಲದಿಂದ ಮಲ್ಲಿಗೆಗೆ ಅಭಿಷೇಕಮಾಡಿದನು

ಇಲ್ಲಿ ಕವಿಯು ಅನಿಲಶಬ್ದಕ್ಕೆ ಮಲಯಶಬ್ದವನ್ನು ಹೇತುಪೂರ್ವಕವಾಗಿ ಜೋಡಿಸಿದ್ದಾನೆ. "ಮಲಯಾದ್ರಿಯೆ ಬಂಧಿಸುವಚ್ಚಂದನ ಮಹಿರುಹ ಸಮಿತಿಗೆ ಕುಲಗೇಹಮಿತರದೊಳ್ ಪುಟ್ಟುಪ್ರೊಡಂ" (ಉಳಿದೆಡೆಯಲ್ಲಿ ಹುಟ್ಟಿದರೂ ಮಲಯಪರ್ವತವೇ ಚಂದನವೃಕ್ಷಗಳಿಗೆ ಕುಲಗೃಹವು) ಎಂಬ ಕವಿಸಮಯಕ್ಕನುಸರಿಸಿ ಮಲಯಪರ್ವತವು ಚಂದನವೃಕ್ಷಗಳಿಗೆ ತವರೂರು. ಆದುದರಿಂದ ಅಲ್ಲಿಂದ ಬರುವ ಮಾರುತನು 'ಚಂದನಪರಿಮಳವಾಹಿ" ಇರಲಿಕ್ಕೆಬೇಕು.

ಮಲ್ಲಿಗೆಯ ಪರಿಮಳದ ಅಪೂರ್ವವಾದ ಅನುಭವವು ಬಂದೊಡನೆ ಮಾರುತನಿಗೆ ಚಂದನಪರಿಮಳವು ಕೀಳೆನಿಸಿ, ಅದನ್ನು ಬಿಟ್ಟುಕೊಟ್ಟು ಮಲ್ಲಿಗೆಯ ಪರಿಮಳವನ್ನು ತೆಗೆದುಕೊಂಡು, ಅವನು ಬೀಸಹತ್ತಿದನೆಂದು ಹೇಳುವದೇ ಕವಿಯ ಹೇತುವು.

॥ ಚಂಪಕ ಮಾಲೆ ॥

ಮಗಮಗಿಸಲ್ಕೆ ಮಂದಯಿಸಿ ದಿಕ್ತಟಮಂ ಬಳಸಲ್ಕೆ ಪೀರ್ವ ತುಂ।
ಬಿಗೆ ತಣಿಪಲ್ಕೆ ನಮ್ಮ ಜಸಮಂ ಬೆಳಗಲ್ಕಿವೆ ಸಾಲ್ಗುಮೆಂದು ತ ॥
ಳ್ತಗಲದಲಂಪಿನಿಂ ಮಧುಮನೋಭವರಿರ್ವರುಮಿತ್ತವಟ್ಟ ಮ।
ಲ್ಲಿಗೆಗೆ ಬಸಂತದೊಳ್ ಬಯಸಿ ಮಾಡಿದರಲ್ಲರೆ ಪಟ್ಟಬಂಧಮಂ ॥

(ಆದಿಪುರಾಣ ಆ. ೧೧)

[ಸಾಂದ್ರವಾಗಿ (ದಟ್ಟವಾಗಿ) ಪರಿಮಳವನ್ನು ಧರಿಸಲಿಕ್ಕೂ, ಸುಗಂಧದಿಂದ ಎಲ್ಲ ದಿಕ್ಕುಗಳನ್ನು ಬಳಸಲಿಕ್ಕೂ (ವ್ಯಾಪಿಸಲಿಕ್ಕೂ,) ಕುಸುಮರಸವನ್ನು ಹೀರುವ ತುಂಬಿಗೆ ತೃಪ್ತಿಯನ್ನುಂಟು ಮಾಡಲಿಕ್ಕೂ ನಮ್ಮ ಕೀರ್ತಿಯನ್ನು ಬೆಳಗಲಿಕ್ಕೂ (ಉಜ್ವಲವಾಗಿ ಮಾಡಲಿಕ್ಕೂ) ಇವು ಸಾಲುವವು. [ಉಳಿದ ಪುಷ್ಪಗಳ ಸಹಾಯವು ಬೇಡ] ಎಂದು ಐಶ್ವರ್ಯದ ಏರಿಕೆಯಿಂದ ವಿಲಾಸವುಳ್ಳವರಾಗಿ ವಸಂತನೂ, ಕಾಮನೂ ಪ್ರೀತಿಯಿಂದ ಮಧುಮಾಸದಲ್ಲಿ ಬಯಸಿ ಬಯಸಿ ಮಲ್ಲಿಗೆಗೆ ಪಟ್ಟಗಟ್ಟಿದರಲ್ಲವೇ ?]

ಚಂಪಕ ಮಾಲಾ

ಬನದ ವಿಭೂತಿ ತಂಬೆಲರ ಮೈಸಿರಿ ತುಂಬಿಯ ಗೀತಶಾಲೆ ಚೈ।
ತ್ರನತೊಡವೋತಗಲ್ದರೆದೆದಲ್ಲಣಮೋಪರ ಸೈಪು ಕಾಮನಂ ॥
ಬಿನ ಕಣಿ ಪುಷ್ಪಸಾಯಕನ ಕೀರ್ತಿಯ ಬಿತ್ತು ಮೊದಲ್ಮಡಾರಿವೀ।
ರನ ಜಯಶಕ್ತಿಯೆಂದಲರ್ದ ಮಲ್ಲಿಗೆಯಂ ಹರಿ ಮೆಚ್ಚಿ ನೋಡಿದಂ ॥

[ಜಗನ್ನಾಥ ವಿಜಯ ೧೪-೬೯]

[ಈ ಮಲ್ಲಿಗೆಯು ವನಕ್ಕೆ ಐಶ್ವರ್ಯವು. ತಂಪಾದ ಗಾಳಿಯಮೈಗೆ ಸಿರಿಯು. ತುಂಬಿಗೆ ಗಾಯನ ಶಾಲೆಯು; ವಸಂತನಿಗೆ ಅಲಂಕಾರವು. ವಿರಹಿಗಳ ಎದೆಗೆ ಬಾಣವು (ದುಃಖವನ್ನು ಕೊಡತಕ್ಕದು) ಪ್ರಣಯಿಯುಗ್ಮಕ್ಕೆ ಸೌಖ್ಯ ಕರವು. ಕಾಮನ ಆಯುಧಶಾಲೆಯು; ಪುಷ್ಪಬಾಣನ ಕೀರ್ತಿಯ ಬೀಜವು; ಈಶ್ವರ ಶತ್ರುವಾದ ಮದನನ ಶ್ರೇಷ್ಠವಾದ ಜಯಶಕ್ತಿಯು. ಎಂದು ಕೌತುಕವುಳ್ಳವನಾಗಿ ಅರಳಿದ ಮಲ್ಲಿಗೆಯನ್ನು ಶ್ರೀಕೃಷ್ಣನು ಮೆಚ್ಚಿ ನೋಡಿದನು.]

ನ್ಯ ಡ್ತಾರಿ-ವೀರಸ ಜಯಶಕ್ತಿಃ-ಮೃಡ+ಅರಿ [ಕಾಮ] ಇವನ ಸಮ್ಮೋಹನ-ನೆಂಬ ಜಯಶಾಲಿಯಾದ ಅಸ್ತ್ರವು ಇವರ ವಿಷಯದಲ್ಲಿ ಕೆಳಗಿನ ಕಥಾಭಾಗವನ್ನು ನೋಡತಕ್ಕದ್ದು:—

ಪೂರ್ವದಲ್ಲಿ ತಾರಕಾಸುರನೆಂಬ ರಾಕ್ಷಸನು ಬ್ರಹ್ಮದೇವನನ್ನು ಸಂತೋಷಗೊಳಿಸಿ ಏಳು ದಿವಸದ ಕೂಸಿನ ಹೊರತು ಮತ್ತಾರೂ ತನ್ನನ್ನು ಕೊಲ್ಲಲಿಕ್ಕೆ ಸಮರ್ಥರಾಗಬಾರದೆಂದು ವರವನ್ನು ಪಡಕೊಂಡು ಆ ಮೇಲೆ ಅವನು ನಿರ್ಭೀತನಾಗಿ ದೇವತೆಗಳಿಗೆ ತೊಂದರೆಯನ್ನುಂಟು ಮಾಡಹತ್ತಿದನು. ಅವನ ಪ್ರತಾಪವು ದೇವತೆಗಳಿಗೆ ಅಸಹ್ಯವಾಗಲು ಇಂದ್ರನನ್ನು ಮುಂದೆ ಮಾಡಿ ಅವರು ಬ್ರಹ್ಮದೇವನಿಗೆ ಮೊರೆ ಹೊಕ್ಕರು. ಅವನು ಹೇಳಿದುದೇನೆಂದರೆ.. ಷಣ್ಮುಖನ ಜನ್ಮವಾದ ಹೊರತು ತಾರಕನು ನಾಶಹೊಂದಲಾರನು; ಮತ್ತು ಷಣ್ಮುಖನ ಉತ್ಪತ್ತಿಗಾಗಿ ಕಾಮನ ಸಹಾಯ ತೆಗೆದುಕೊಂಡು ಕೈಲಾಸ ಪರ್ವತದಲ್ಲಿ ಸಮಾಧಿಸ್ಥನಾದ ಈಶ್ವರನಿಗೂ ಪಾರ್ವತಿಗೂ ವಿವಾಹವಾಗುವಂತೆ ಮಾಡತಕ್ಕದ್ದು.'' ಆ ಮೇಲೆ ಇಂದ್ರನು ಕಾಮನನ್ನು ಸ್ಮರಿಸಿದನು ಕೂಡಲೆ ಅವನು ಬಂದನು. ಇಂದ್ರನು ಅವನನ್ನು ಬಹಳ ಸತ್ಕರಿಸಲು, ಕಾಮನು ತನ್ನನ್ನು ಬರಮಾಡಿಕೊಂಡಿರುವುದರ ಉದ್ದೇಶವನ್ನು ಅವನಿಗೆ ಕೇಳಿದನು. ,, ದಕ್ಷಬ್ರಹ್ಮನ ಯಜ್ಞದಲ್ಲಿ ಸತಿಯು ಯಜ್ಞಕುಂಡಕ್ಕೆ ಆಹುತಿಯಾದಂದಿನಿಂದ ಈಶ್ವರನು ಸಮಾಧಿಯಲ್ಲಿ ಮಗ್ನನಾಗಿದ್ದಾನೆ. ಸತಿಯು ಇತ್ತ ಪರ್ವತರಾಜನ ಮಗಳಾಗಿ ಹುಟ್ಟಿ ಅವನನ್ನು ವರಿಸುವದಕ್ಕಾಗಿ ತಪೋನಿರತಳಾಗಿದ್ದಾಳೆ. ಈಶ್ವರನು ಅವಳಲ್ಲಿ ಅನುರಕ್ತನಾಗುವಂತೆ ನೀನು ಮಾಡಬೇಕು'' ಎಂದು ಇಂದ್ರನು ಕಾಮನಿಗೆ ಹೇಳಿದನು ಒಂದು ದಿವಸ ಆ ಕಾಮನು ವಸಂತನ ಸಹಾಯದಿಂದ ಪಾರ್ವತಿಯು ಈಶ್ವರನಿಗೆ ಆಕಾಶಗಂಗೆಯ ಕಮಲಬೀಜ ಮಾಲೆಯನ್ನು ಅರ್ಪಿಸುವಾಗ ಅವನ ಮೇಲೆ ಸಮ್ಮೋಹನಾಸ್ತ್ರವನ್ನೆಸೆದನು. ಅದರಿಂದ ಈಶ್ವರನ ಚಿತ್ತವು ಚಂಚಲವಾಯಿತು; ಕಾಮನಿಗೆ ಸಮ್ಮೋಹನಾಸ್ತ್ರ (ಮಲ್ಲಿಗೆಯಬಾಣ) ದಿಂದ ಜಯದೊರೆಯಿತು.

ಯೋಗಿಗಳಿಂದಲೂ ಕೂಡ ಅಂತರಂಗದಲ್ಲಿ ಹುಡುಕಲ್ಪಟ್ಟ ಈಶ್ವರನು ಕಾಮನಬಾಣಗಳಿಂದ ವಿಕಾರವಶವಾದನು. ಉಳಿದವರ ಪಾಡೇನು? ಮಲ್ಲಿಗೆಯೇ, ನಿನ್ನ ಸಾಮರ್ಥ್ಯವು ಅಸಾಧಾರಣವಾದುದೆಂದು ಹರಿಯು ಕೌತುಕದಿಂದ ಅವನ್ನು ನೋಡಿದನು

॥ ಕಂದ ॥

ಜಗಮಂ ಗೆಲ್ವೆಡೆಯೊಳ್ ಕಂ ।
ತುಗೆತಾಂ ಸಹಕಾರವೆಂದು ನೆನೆದೀ ಚೂತ ।
ದ್ರುಗೆ ಸಹಕಾರಾಖ್ಯೆಯನಾ ।
ವಗಮಿತ್ತನವೇಂ ಪ್ರಗಲ್ಭನೋ ಕಮಲಭವಂ ॥

[ಶಾಂತೀಶ್ವರ ೩—೧೦-೧೦೬]

[ಜಗತ್ತನ್ನು ಗೆಲ್ಲುವದರಲ್ಲಿ ಕಾಮನಿಗೆ ಮಾವಿನಮರವು ಸಹಾಯಕವೆಂದು ನೆನೆದು, ಬ್ರಹ್ಮದೇವನು ಅದಕ್ಕೆ ಯಾವಾಗಲೂ “ ಸಹಕಾರ”ವೆಂಬ ಹೆಸರನ್ನು ಕೊಟ್ಟುಬಿಟ್ಟನು. ಬ್ರಹ್ಮದೇವನು ಎಷ್ಟು ಪ್ರೌಢನು!]

ಮಾವಿನ ಮರಕ್ಕೆ 'ಸಹಕಾರ'ವೆಂಬ ಹೆಸರಿರುತ್ತದೆ (आम्रश्चूतो रसालो सौ सहकारो तिसौरभः)' सहकारयति मेलयति स्त्रीपुंसौ सहकारः] ಸ್ತ್ರೀಪುರುಷರನ್ನು ಕೂಡಿಸುವದು ಸಹಕಾರವು) ಎಂದು ಕ್ಷೀರಸ್ವಾಮಿಯವರು ಬರೆದಿದ್ದಾರೆ. ಸಹಕಾರವು ಕಾಮನ ಅಂಗವಾದಂತಾಯಿತು- ಮಾವಿನ ಮರವು ಸ್ಮರಸಮ್ಮೋಹನ ದೇವತೆಯ ಆವಾಸಸ್ಥಾನವು; ಮನ್ಮಥರಾಜ್ಯಲಕ್ಷ್ಮಿಯ ನಿವಾಸಗೃಹವು; ಅನಂಗನ ಮಂಗಲಗೃಹವು; ಮದನನ ಅಸ್ತ್ರಶಾಲೆಯು, ಪಂಚಬಾಣನ ವಿಲಾಸಸ್ಥಾನವು ಕಾಮನ ಮಂತ್ರಶಾಲೆಯು, ಎಂದು ಕವಿಗಳು ವರ್ಣಿಸಿರುತ್ತಾರೆ. ಈ ವರ್ಣನೆಯು ಬಹಳೇ ಹೃದಯಂಗಮವಾದುದು ಇದರ ಸ್ವಾರಸ್ಯವು ಸ್ವಾನುಭವದಿಂದಲೇ ತಿಳಿಯತಕ್ಕುದು. ಪುಷ್ಪ ಫಲ ಪಲ್ಲವಗಳಿಂದ ತುಂಬಿ ಶೋಭಿಸುವ ಮಾವಿನ ಮರವು. ಪುಷ್ಪಮಕರಂದವನ್ನು ಸವಿಯಲು ಮುತ್ತಿದ ಷಟ್ಪದಗಳು. ಪಕ್ವ ಫಲಗಳನ್ನು ಕರ್ದುಂಕಲು ಕೂಡಿದ ಗಿಳಿವಿಂಡುಗಳು ಕೊನರನ್ನು ಕಚ್ಚಲೈತಂದ ಕೋಕಿಲ ಕುಲವು ದಟ್ಟವಾದ ಎಲೆಗಳ ಇರುಂಬಿನೊಳಗಿಂದ ಸುಳಿಯುವ ಮಸುಗಾಳಿಯು ಇವೆಲ್ಲವುಗಳನ್ನು ನೋಡಿ ಪ್ರೇಕ್ಷಕರ ಮನಸ್ಸಿನಲ್ಲಿ ಒಂದು ಪ್ರಕಾರದ ಆನಂದವು ಜನಿಸಿ ಉತ್ಕಂಠೆಯು ಉತ್ಪನ್ನವಾಗುತ್ತದೆ. ಈ ಉತ್ಕಂಠಾ ಭಾವದಿಂದಲೇ ಪ್ರೇಮವಿಕಾರವು ಜನಿಸುತ್ತದೆ. ಈ ವಿಕಾರಕ್ಕೆ ನಾವು " ಕಾಮ " ನೆಂದು ಕರೆಯುತ್ತೇವೆ. ರಮಣೀಯಸ್ಥಾನಗಳೆಲ್ಲ ಕಾಮದೇವನವಿಲಾಸಸ್ಥಾನಗಳು ರಮ್ಯವಾದ ಉಪವನವು ಅವನ ಸಾಮ್ರಾಜ್ಯಸ್ಥಾನವು ಮಾಮರವೇ ಓಲಗವು " ಮಧುರಾಲಾಪ ನಿಸರ್ಗಪಂಡಿತರಾದ ಕೋಕಿಲಗಳು ಅವನ ದೂತರು. ಅವುಗಳಿಗೆ ಮಾವಿನ ವೃಕ್ಷವು ಕೊನರನ್ನು ಕೊಟ್ಟು, ಕಲರವವನ್ನುಂಟು ಮಾಡುತ್ತದೆ, ಗಿಳಿಯು ಅವನ ವಾಹನವು, ಅದಕ್ಕೆ ಸವಿಯಾದ ಹಣ್ಣುಗಳ ರಸವನ್ನು ಕೊಟ್ಟು ಅವುಗಳಿಗೆ ಮಂಜುಳ ಮಧುರೋಕ್ತಿಯನ್ನು ಕಲಿಸುತ್ತದೆ; ಪಲ್ಲವ ಬಾಣಗಳನ್ನು ಅವನಿಗೆ ಕೊಡುತ್ತದೆ; ಚಾಪದ ಹಗ್ಗಗಳಾದ ಷಟ್ಪದಗಳಿಗೆ ಕುಸುಮರಸವನ್ನು ಸಲ್ಲಿಸುತ್ತದೆ. ಮದನನಿಗೆ ಇಷ್ಟೆಲ್ಲ ರೀತಿಯಿಂದ ಮಾವಿನ ಮರವು ಸಹಾಯ ಮಾಡುತ್ತದೆ. ಅಂದ ಮೇಲೆ ಮಾವಿನ ಮರಕ್ಕೆ ಸಹಕಾರ ವೆಂಬ ಹೆಸರನ್ನು ಕೊಟ್ಟು ಬ್ರಹ್ಮದೇವನು ತನ್ನ ರಸಿಕತೆಯನ್ನು ವ್ಯಕ್ತಪಡಿಸಿ ದಂತಾಗಲಿಲ್ಲವೇ?

" ಅಜನು ಜಡನು„ ಎಂದು ಕವಿಗಳು ವರ್ಣಿಸಿದ್ದಾರೆ. ಆದರೆ ವೇದಾಭ್ಯಾಸದಿಂದ ಜಡನಾದ ಈ ಪುರಾಣ ಮುನಿಯು ಈ ಯೆಡೆಯಲ್ಲಿ ರಸಸ್ಫೂರ್ತಿಯಿಂದ ಪ್ರೌಢಿಯನ್ನು ತೋರಿಸಿದ್ದಾನೆ.

ಕಮಲಭವ—ಇದು ಈ ಕಾವ್ಯವನ್ನು ರಚಿಸಿದ ಕವಿಯ ಹೆಸರು " ಅ ಜಡನಾದ ಕಮಲಭವನಿಗೆ (ಬ್ರಹ್ಮನಿಗೆ) ಸಹಕಾರವೆಂಬ ಹೆಸರನ್ನು ಕೊಡು

ವೆಷು ರಸಿಕತೆಯು ಎಲ್ಲಿಂದ ಬಂದೀತು. ನಾನೀ ಕಮಲಭವನು; ಅವನೂ ಕಮಲಭವನು. ಅವನು ಜಡನಾದರೆ ನನಗೂ ಜಡತ್ವವು [ಅರಸಿಕತೆಯು] ಪ್ರಾಪ್ತವಾಗುವದು. ಅವನ ಜಡತ್ವವನ್ನೇ ತೆಗೆದು ಬಿಟ್ಟರೆ ನನಗೆಂದಿಗೂ ಕುಂದು ಬಾರದು." ಎಂದು ಕವಿಯು ಕಮಲಭವ [ಬ್ರಹ್ಮ] ನನ್ನು ಪ್ರೌಢನನ್ನಾಗಿ ವರ್ಣಿಸಿದ್ದಾನೆಂದು ಧ್ವನಿತವಾಗುತ್ತದೆ. ಈ ಚಮತ್ಕಾರಮಂ ಕವಿಗಳ್ ಬಲ್ಲ ಪೂಲನ್ಯರೆತ್ತರಿವರಂತಾ ಬ್ರಹ್ಮನುಂ ಬಲ್ಲನೇ."

मौर्वी रोलम्बमाला धनुरथ विशिखाः कौसुमाः पुष्पकेतोः

[ಸಾಹಿತ್ಯದರ್ಪಣ]

(ಭ್ರಮರಶ್ರೇಣಿಯೇ ಕಾಮನಮೌರ್ವಿಯೆಂದೂ, ಕುಸುಮಗಳೇ ಅವನ ಬಾಣಗಳೆಂದೂ ಕವಿಗಳು ವರ್ಣಿಸುವುದು ಸಾಂಪ್ರದಾಯ ಸಿದ್ಧವಾದುದು).

॥ ಕಂದ ॥

ತನಗೆ ತಳಿರಂಬ ಮೌರ್ಣ್ ಶಿಂ।
ಜಿನಿಯಾದಳಿಗಲರರಸವನೇರುವ ಗಿಳಿಗಂ ॥
ತನಿವಣ್ಣಂ ಕುಡಲಿನಿವಿ।
ಲ್ಲನಿನಾದುದು ಗಡ ಮಿದಕ್ಕೆ ಸಹಕಾರಾಖ್ಯಂ ॥

[ದಮಯಂತೀಸ್ವಯಂವರ ೧-೮೩]

[ತನಗೆ ಪಲ್ಲವ ಬಾಣಗಳನ್ನೂ, ಶಿಂಜನಿಯಾದ ತುಂಬಿಗೆ ಹೂವಿನ ಬಂಡನ್ನೂ, ಏರುವ ಗಿಳಿಗಳಿಗೆ ಮಧುರವಾದ ಹಣ್ಣನ್ನೂ ಕೊಡಲು, ಕಾಮನು [ಇನಿವಿಲ್ಲಂ] ನಿಜವಾಗಿ ಇದಕ್ಕೆ ಸಹಕಾರವೆಂಬ ಹೆಸರನ್ನು ಕೊಟ್ಟನು] ಈ ಪದ್ಯದಲ್ಲಿ "ಸಹಕಾರ" ವೆಂಬ ಹೆಸರನ್ನು ಕಾಮನು ಮಾಮರಕ್ಕೆ ಯಾಕೆ ಕೊಟ್ಟನೆಂಬದರ ಕಾರಣವು ಸ್ಪಷ್ಟವಾಗಿ ಉಕ್ತವಾಗಿದೆ.

॥ ಮತ್ತೇಭ ವಿಕ್ರೀಡಿತಂ ॥

ತುದಿಗೇರಿದೋರ್ದಂಡು ಕೀರಂ ಮರಕತಕಲಶಂ ಸತ್ಫಲಂದರ್ಪಣಂ ಪ।
ಲ್ಲಿರ್ವ ಮಲ್ಲಿೀವಲ್ಲಿಯೇ ಬಲ್ಸೂರಜಿ ನಿಚಿತಭೃಂಗವ್ರಜಂ ನೀಲಶೋಭಾ॥
ಸ್ಪದವಾಲ್ಯಂ ಪುಷ್ಪಗುಚ್ಛಂ ಚಮರಮುರುಪಟು ಪಲ್ಲವಂ ಕೋಕಿಲವಾ।
ತವನಾದಂ ವಾದ್ಯವಾಗಲ್ಕುಸುಮಶರನ ತೇರಂತೆ ಚೆಲ್ವಾಯ್ತು ಚೂತಂ ॥

ರಾಜಶೇಖರ ವಿಲಾಸ ೭-೪೪

[ತುದಿಗೆ ಏರಿದ ಗಿಳಿಯೇ ಮರಕತಮಣಿಯ ಮಂಗಲಕಲಶವು ಉತ್ಕೃಷ್ಟವಾದ ಮಾವಿನ ಫಲವೇ ಕನ್ನಡಿಯು; ಹಬ್ಬಿದ ಮಲ್ಲಿಕಾಲತೆಯೇ ಬಲವಾದ ಹಗ್ಗವು; ದಟ್ಟಾಗಿ ಮುತ್ತಿದ ಭ್ರಮರಪಂಕ್ತಿಯೇ ನೀಲಮಣಿಯ ಮಾಲೆಯು; ಪುಷ್ಪಗುಚ್ಛವೇ ಚಾಮರವು; ಪಲ್ಲವ ತತಿಯೇ ಶ್ರೇಷ್ಠವಾದ ಧ್ವಜವು; ಕೋಕಿಲಗಳ ಮಧುರ ಧ್ವನಿಯೇ ಮಂಗಳವಾದ್ಯದ ಧ್ವನಿಯಾಗಲಾಗಿ ಚೂತ ವೃಕ್ಷವು ಮನ್ಮಥನ (ಜೈತ್ರಯಾತ್ರೆಯ) ತೇರಿನಂತೆ ಒಪ್ಪಿತು.]

ರಥೋತ್ಸವ ಕಾಲದಲ್ಲಿ, ರಥವು ಮಂಗಳ ಕಲಶದಿಂದಲೂ, ಪವಿತ್ರವಾದ ಕನ್ನಡಿಯಿಂದಲೂ, ಹೂದಳಿರುಗಳಿಂದಲೂ, ಧ್ವಜಚಾಮರಗಳಿಂದಲೂ, ನಗಾರಿ ಮೊದಲಾದ ವಾದ್ಯಗಳಿಂದಲೂ ಅಲಂಕೃತವಾಗಿ ಒಪ್ಪುವಂತೆ, ಆಮ್ರವೃಕ್ಷವೆಂಬ ಮನ್ಮಥನ ರಥವು ಕೀರವೆಂಬ ಮಂಗಳಕಲಶದಿಂದಲೂ, ಸತ್ಫಲವೆಂಬ ಮಾಂಗಲ್ಯದರ್ಪಣದಿಂದಲೂ, ಮಲ್ಲಿಕಾ ಲತೆಯೆಂಬ ರಜ್ಜುವಿನಿಂದಲೂ, ಭ್ರಮರ ರಾಜಿಯೆಂಬ ನೀಲಮಣಿಮಾಲೆಯಿಂದಲೂ, ಪುಷ್ಪಪಟಲವೆಂಬ ಚಾಮರದಿಂದಲೂ ಪಲ್ಲವ ಚಯವೆಂಬ ಧ್ವಜದಿಂದಲೂ, ಕೋಕಿಲಾಲಾಪವೆಂಬ ಮಂಗಳವಾದ್ಯ ದಿಂದಲೂ ಶೋಭಿಸಿತೆಂದು ಕವಿಯು ವರ್ಣಿಸಿದ್ದಾನೆ. ವಸಂತಮಾಸದಲ್ಲಿ ಮಾವಿನ ಮರವು ಪುಷ್ಪಫಲಪಲ್ಲವಗಳಿಂದ ತುಂಬಿಕೊಂಡು ನಯನರಮಣೀಯ ವಾಗಿ ಕಂಗೊಳಿಸುವದು. ಭ್ರಮರಗಳು ಪುಷ್ಪಮಧುವನ್ನು ಕುಡಿಯಲಿಕ್ಕೂ, ಗಿಳಿಗಳು ತನಿವಣ್ಣನ್ನು ಸವಿಯಲಿಕ್ಕೂ, ಕೋಗಿಲೆಗಳು ಆಮ್ರಕಳಿಕೆಗಳನ್ನು ಕಚ್ಚಲಿಕ್ಕೂ ತಂಡತಂಡವಾಗಿ ಆ ವೃಕ್ಷವನ್ನು ಮುತ್ತುವವು. ನವಪಲ್ಲವ ರಾಗವು ಜನರ ಲೋಚನಗಳನ್ನು ಆಕರ್ಷಿಸುತ್ತದೆ. ಷಟ್ಪದ ಝೇಂಕಾರವು ಯುವಕರ ಮನಸ್ಸನ್ನು ಮೋಹಿಸುತ್ತದೆ; ಕೋಕಿಲದ ಮಧುರವಾದ ಕೂಜಿತದಿಂದ ತರುಣರ ಅಂತಃಕರಣವು ವಿಕಾರಪರವಶವಾಗುತ್ತದೆ. ಇಷ್ಟೇಕೆ; ವಿಲಾಸದಿಂದ ಆಮ್ರ ವೃಕ್ಷವನ್ನು ತಳ್ಕೈಸಿದ ನವಮಲ್ಲಿಕೆಯ ಪುಷ್ಪಹಾಸದಿಂದ ವಿಯೋಗಿಗಳ ಚಿತ್ತವು ಕೂಡ ಚಂಚಲವಾಗುತ್ತದೆ. ಹೀಗಿದ್ದಲ್ಲಿ ಮಾವಿನ ಮರವು ಕಾಮನ ಜೈತ್ರ ಯಾತ್ರಾರಥವೆಂದು ವರ್ಣಿಸಿದುದು ಕವಿಯ ಔಚಿತ್ಯಜ್ಞಾನಕ್ಕೆ ನಿದರ್ಶಕವಲ್ಲವೇ?

॥ ಕಂದ ॥

ಪೊಂಬಾಳೆ ಚಾಮರಂ ಚಂ।
ದ್ರಂ ಬೆಳ್ಗೊಡೆ ಕೇಳಿಶಿಖರಿ ಸಿಂಹಾಸನಮಾ ॥
ಯ್ತೆಂಬಿನೆಗಮಂಗಜಂ ಮಾ।
ವೆಂಬ ಕುಮಾರಂಗೆ ಪಟ್ಟಮಂ ಕಟ್ಟಿಸಿದಂ ॥

(ಜನ್ನನ ಯಶೋಧರಚರಿತೆ ೪-೬)

[ಪೊಂಬಾಳೆಯೇ ಚಾಮರವು; ಚಂದ್ರನೇ ಶ್ವೇತಚ್ಛತ್ರವು; ಕ್ರೀಡಾಪರ್ವತವೇ ಸಿಂಹಾಸನವಾಗಿರಲಾಗಿ ಕಾಮದೇವನು ಮಾವಿನಮರವೆಂಬ ತನ್ನ ಕುಮಾರನಿಗೆ ಪಟ್ಟವನ್ನು ಕಟ್ಟಿಸಿದನು]

ಧವಲಾತಪತ್ರವೂ, ಧ್ವಜಚಾಮರಂಗಳೂ, ಸಿಂಹಾಸನವೂ ರಾಜ್ಯಲಕ್ಷ್ಮಿಯ ಚಿಹ್ನಗಳು. ಪೊಂಬಾಳೆ, ಚಂದ್ರ, ಕ್ರೀಡಾಪರ್ವತ ಮೊದಲಾದವುಗಳು ರಾಜ್ಯಚಿಹ್ನಗಳಾಗಲು ಮಾವಿನ ಮರವೆಂಬ ಕುಮಾರನಿಗೆ ಕಾಮನು ಪಟ್ಟಗಟ್ಟಿದನೆಂದು ಕವಿಯು ವರ್ಣಿಸಿದ್ದಾನೆ.

ಈ ಪ್ರಸಕ್ತಿಯಲ್ಲಿ “ ಪಡೆ ಮರವಟ್ಟ ಮಾವು ಗಡ! ಬೆಳ್ಗೊಡೆಯಾಗಸಕೆಳ್ದ ಚಂದ್ರನಂ ” ಎಂಬ ಕಬ್ಬಿಗರಕಾವದಲ್ಲಿಯ ಪದ್ಯವು ನಮ್ಮ ನೆನಪಿಗೆ ಬರುತ್ತದೆ.

॥ ಚಂಪಕ ಮಾಲಾ ॥

ಪದೆದಧಿರಾಜನಾದೆನಗೆ ಮಾಮರನಂ ಯುವರಾಜನಾಗೆ ಮಾ।
ಳ್ಪುದು ಪದನೆಂದು ಮನ್ಮಥನೃಪಂ ಸಹಕಾರಮಹೀರುಹಕ್ಕೆ ಕ॥
ಟ್ಟಿದ ಯುವರಾಜಕಂಠಿಕೆವೊಲಾಯ್ತೆಡೆಗೊಟ್ಟಿಡೆಗೊಟ್ಟು ನಿಂದ ಷ।
ಟ್ಪದಗುಣಮುಂ ಪ್ರಸೂನಭರಮುಂ ಮಕರಂದಗುಣಾಭಿಶೋಭಿತಂ ॥

(ಅಜಿತ ತೀರ್ಥಕರ ಪುರಾಣ ಆ. ೫ ಪ. ೨೫)

[ತಾನು ಅಧಿರಾಜನು, ತನಗೆ ಮಾವಿನ ಮರವನ್ನು ಯುವರಾಜನನ್ನಾಗಿ ಮಾಡುವುದುಚಿತವೆಂದು ಮನ್ಮಥನು, ಎಡೆಗೊಟ್ಟಿಡೆಗೊಟ್ಟು ನಿಂದ ಭ್ರಮರಮಾಲೆಯೂ, ಹೂಗಳ ಸಮುದಾಯವೂ ಮಕರಂದ ಸೂತ್ರದಿಂದ ಶೋಭಿತವಾಗಿರಲು ಮಾವಿನ ಗಿಡಕ್ಕೆ ಕಟ್ಟಿದ ಯುವರಾಜ ಕಂಠಿಕೆ (ಕೊರಳಿನ ಆಭರಣ) ಯಂತೆ (ಅವು) ಶೋಭಿಸಿದುವು]

॥ ಕಂದ ॥

ಅರಳೆಲೆ ಮೇಲಾಡುತ್ತಿರೆ।
ಭರದಿಂ ಮಾಂಗಾಯ್ಗಳೊಲೆಯೆ ಕೆಲಬಲದೊಳ್ ನಿಂ॥
ದರಗಿಳಿಯ ತೊದಳ್ನುಡಿ ಬಿ।
ತ್ತರಿಸೆ ವಸಂತನ ಕುಮಾರನೆನಿಸಿತ್ತಾಮ್ರಂ॥

(ಗಿರಿಜಾಕಲ್ಯಾಣ-೨-೪೧)

[ವಿಕಸಿತವಾದ ಪಲ್ಲವಗಳು ಅರಳೆಲೆಯಂತೆ (ತಲೆಯ ಆಭರಣ) ಮೇಲ್ಭಾಗದಲ್ಲಿ ಅಲ್ಲಾಡುತ್ತಿರಲು, ಮಾವಿನ ಕಾಯಿಗಳು ಮಾಂಗಾಯ್ಗಳಂತೆ (ಕಿವಿಯ ಆಭರಣಗಳು) ಎರಡೂ ಕಡೆಯಲ್ಲಿ ಭರದಿಂದ ಒಲೆದಾಡುತ್ತಿರಲು ಅರಗಿಳಿಯ ದನಿಯು ಕಂದನಾಡುವ ತೊದಲ್ನುಡಿಯಂತೊಪ್ಪಲು ಆಮ್ರವೃಕ್ಷವು ವಸಂತನ ಕುಮಾರನಂತೆ ಶೋಭಿಸಿತು]

ತಲೆಯ ಮೇಲೆ ಅರಳೆಲೆಯನ್ನೂ ಎರಡೂ ಕೆಲದಲ್ಲಿ ಮಾಂಗಾಯ್ಗಳನ್ನೂ ಇಟ್ಟು ಚಿಕ್ಕ ಮಕ್ಕಳನ್ನು ಅಲಂಕರಿಸುವದುಂಟು. ಇಲ್ಲಿ ಚೂತ ವೃಕ್ಷವು ಚಿಕ್ಕ ಮಗುವಿನಂತೆ ಅಲಂಕರಿಸಲ್ಪಟ್ಟಿದೆಯೆಂದು ಕವಿಯು ವರ್ಣಿಸಿದ್ದಾನೆ. ವಿಕಾಸ ಹೊಂದಿದ ಎಲೆಗಳೇ ಅರಳೆಲೆಗಳು, ಎರಡೂ ಕಡೆಯಲ್ಲಿ ಒಲೆದಾಡುವ ಮಾವಿನ ಕಾಯಿಗಳೇ ಮಾಂಗಾಯ್ಗಳು, ಶುಕದ ದನಿಯೇ ತೊದಲ್ನುಡಿಯು, ಆದುದರಿಂದ ಅದು ವಸಂತನ ಮುದ್ದುಮಗುವಿನಂತೆ ಕಣ್ಗೆಸೆದಿತ್ತು.

ಮಾವಿನ ಎಲೆಗಳು ಅಲ್ಲಾಡುವದನ್ನೂ, ಕಾಯಿಗಳು ಇರ್ಕೆಲದಲ್ಲಿ ತೂಗಾಡುವದನ್ನೂ, ಗಿಳಿಗಳ ಹಿಂಡು ಆಮ್ರಫಲದ ಮಧುರರಸವನ್ನು ಕುಡಿದು "ದನಿ ನಿಮಿರೆ" ಆಲಾಪ ಮಾಡುವದನ್ನೂ ನಾವು ಅನೇಕಾವರ್ತಿ ಅನುಭವಿಸದೆ ಇಲ್ಲ. ಆದರೂ ಮೇಲಿನ ಪದ್ಯವನ್ನು ಓದಿದೊಡನೆ ಆದಷ್ಟು ಆನಂದಾನುಭವವು ಸಾಕ್ಷಾತ್ತಾಗಿ ಮಾವಿನ ಮರದ ಎಡೆಯಲ್ಲಿ ನಿಂತಾಗ ಉಂಟಾಗಲಿಲ್ಲೆಂಬುದು ನಿಜವು.

ಗಿಳಿಯ ದನಿಯು ಅಸ್ಪಷ್ಟ ಮಧುರವಾಗಿರುವದು; ಮಗುವಿನ ಮುದ್ದಾದ ತೊದಲ್ನುಡಿಯಾದರೂ ಅಸ್ಪಷ್ಟವಿರುವದು. (ಅರಳೆಲೆಗಳೊಲೆಯೆ ಕಿವಿಯೊಳಗಿರ್ಪ ಮಾಗಾಯ್ಗಳುರುತರದಿ ನಲುಗೆ...ಪಾಲ್ಕುರಿಕೆ ಸೋಮೇಶ್ವರ ಪುರಾಣ)

ರಾಜಶೇಖರ ವಿಲಾಸದಲ್ಲಿಯ ಕುಮಾರ ರಾಜಶೇಖರನ ಬಾಲ್ಯ ವರ್ಣನೆಯನ್ನು ಇದೇ ಪ್ರಸಕ್ತಿಯಲ್ಲಿ ವಾಚಕರು ಓದಿ ನೋಡತಕ್ಕುದು.

|| ಕಂದ ||

"ಅರಳೆಲೆ ನೊಸಲೊಳ್ ಚಲಿಸು।
ತ್ತಿರೆ ಮಣಿಮಾಗಾಯ್ಗಳೊಲೆಯೆ ಕಿರುಗೆಜ್ಜೆಗಳಾ॥
ವರಿಸಿ ದನಿಗುಡೆ ಮೃದು ಸ್ಮಿತ।
ಮಿರೆ ಮೊಗದೊಳ್ ಮುದ್ದುವೀರಿ ಕುಣಿವಂ ಕುವರಂ॥

(ಆಶ್ವಾಸ ೪-ಪದ್ಯ-೭೪)

ಆದಿಪಂಪನು "ತಳಿರೊಳ್ ನೀನೆ ಬೆಡಂಗನೈ, ನನೆಗಳೊಳ್ ನೀಂ ನೀರನೈ, ಪುಷ್ಪ ಸಂಕುಳದೊಳ್ ನೀನೆ ವಿಳಾಸಿಯೈ... ನೀನೆ ಭುವನೈಕಾರಾಧ್ಯನೈ, ಭೃಂಗ ಕೋಕಿಳಕೀರ ಪ್ರಿಯಚೂತರಾಜ, ತರುಗಳ್ ನಿನ್ನಂತೆ ಚೆನ್ನಂಗಳೇ" ಎಂದು ಮಾವಿನ ಮರವನ್ನು ವರ್ಣಿಸಿದ್ದಾನೆ. ಅಂದ ಮೇಲೆ ಶೃಂಗಾರ ಶೇಖರನಾದ ಕಾಮದೇವನು ಮಾವನ್ನು ತನ್ನ ಮಗನಾಗಿಯೂ, ಯುವರಾಜನಾಗಿಯೂ ಮಾಡಿಕೊಂಡದ್ದರಲ್ಲೇನಾಶ್ಚರ್ಯ!

॥ ಕಂದ ॥

ಉರಿಯಂ ಕೆಂದಳಿರ್ಗಳ್ ಧೂ ।
ಮರಾಜಿಯಂ ಭೃಂಗರಾಜಿ ಕಿಡಿಯಂ ಪಣ್ ಪೋ ॥
ಲ್ತಿರೆ ಕಾಮಿಗೆ ಕಾಮಾಗ್ನಿಯ ।
ಪರವರಿಯೆನಿಸಿದುವು ಬಂದ ಮಾವಿನ ಮರಗಳ್ ॥

(ಅಜಿತನಾಥ—ಆ ೬ ಪ. ೧೬)

[ಕೆಂಪಾದ ತಳಿರುಗಳು ಉರಿಯನ್ನು, ತುಂಬಿಗಳ ಸಮೂಹವು ಹೊಗೆಯ ರಾಶಿಯನ್ನೂ, ಹಣ್ಣುಗಳು ಅಗ್ನಿಯ ಕಿಡಿಗಳನ್ನೂ ಪೋಲ್ತಿರೆ ಫಲಿತವಾದ ಮಾವಿನ ಮರಗಳು ವಿರಹಿಗೆ ಕಾಮಾಗ್ನಿಯ ವಿಸ್ತಾರದಂತೆ ಶೋಭಿಸಿದುವು.] ಮಾವಿನ ಮರದಲ್ಲಿ ಕಾಮೋದ್ದೀಪನ ಗುಣವಿರುತ್ತದೆ. ಮಾವಿನ ಮರವನ್ನೂ ಅವರ ಪಲ್ಲವಗಳನ್ನೂ ಕಾಮನ ಬಾಣಗಳಾದ ಹೂಗಳನ್ನೂ ನೋಡಿದೊಡನೆ ವಿರಹಿಗಳ ಅಂತಃಕರಣದಲ್ಲಿ ಕಾಮಾಗ್ನಿಯು ಉತ್ಪನ್ನವಾಗುತ್ತದೆ. ಅವರ ಚಿತ್ತವು ಕಾಮಮಯವಾದುದರಿಂದ ಮಾವಿನ ಮರವು ಪದ್ಯದಲ್ಲಿ ಉಕ್ತವಾದ ವಿಶಿಷ್ಟ ಗುಣಗಳಿಂದ ಕೂಡಿರುವುದರಿಂದ ಕಾಮಾಗ್ನಿಯಂತೆ ಕಂಡು ಬರುತ್ತದೆ. ಒಬ್ಬ ಸಂಸ್ಕೃತ ಕವಿಯು ವಿರಹಾವಸ್ಥೆಯಲ್ಲಿದ್ದ ಪುರುಷನ ಮೇಲೆ ಚೂತ ಮುಕುಲ ದರ್ಶನದಿಂದಾಗುವ ಪರಿಣಾಮವನ್ನು ಈ ಪ್ರಕಾರ ವರ್ಣಿಸಿದ್ದಾನೆ:-

ವ್ಯಾಧಿಗ್ರಸ್ತನಾಗಿದ್ದರೆ ದೇಹದಲ್ಲಿ ಕೃಶತೆಯು ಕಂಡುಬರುತ್ತಿತ್ತು. ಗಾಯವಾಗಿದ್ದರೆ ರಕ್ತದ ಪ್ರವಾಹವು ಕಂಡು ಬರುತ್ತಲಿದ್ದಿತು. ಹಾವು ಕಡಿದಿದ್ದರೆ ಬಾಯಿಯಿಂದ ಬುರುಗು ಬರಬಹುದಾಗಿದ್ದಿತು. ಆದರೆ ಇವುಗಳಲ್ಲಿ ಒಂದೂ ಕಂಡು ಬರುವದಿಲ್ಲ. ಹಾಗಾದರೆ ಈ ಬಡದಾರಿಕಾರನು ಹೇಗೆ ಮೃತಪಟ್ಟನು? ಆ! ತಿಳಿಯಿತು. ಮಧುಪಾನದಲ್ಲಿ ಆಸಕ್ತವಾಗಿರುವ ಈ ಭ್ರಮರಗಳು ಕೋಲಾಹಲವನ್ನೆಬ್ಬಿಸಿರುತ್ತವೆ. ಈ ಸಾಹಸಿಗನು ನಿಶ್ಚಯವಾಗಿ ಮಾವಿನ ಹೂವಿನಲ್ಲಿ ದೃಷ್ಟಿಯನ್ನು ಚಲ್ಲಿದನು. (ಆದುದರಿಂದಲೇ ಸತ್ತನು)

॥ ಕಂದ ॥

ತಳಿರ್ಗಳಿವೆಳ್ಳುರಿ ಮುಸುಕಿ ।
ದಳಿಗಳೆ ಪೊಸಮುಸಿಗಳಾಗೆ ಮದನನ ಬಾಣಾ ॥
ವಳಿಯುಂ ಕಾಸಲ್ ಚೈತ್ರೋ ।
ಜ್ಜ್ವಳ ಕಾಮುಕನಿಟ್ಟ ಕುಮ್ಮುಟಂಬೊಲದೆಸೆಗುಂ ॥

(ರಾಜಶೇಖರ ವಿಲಾಸ ೨-೫೫)

[ತಳಿರುಗಳೇ ಘನ ಜ್ವಾಲೆಗಳು, ಮುತ್ತಿದ ಭ್ರಮರಗಳೇ ಹೊಸ ಇದ್ದಲಿ ಗಳು, ಮನ್ಮಥನ ಬಾಣಗಳನ್ನು ಕಾಸಿ ಸಿದ್ಧಪಡಿಸಲಿಕ್ಕೆಂದು ಚೈತ್ರನೆಂಬ ಜಾಣನಾದ ಕಮ್ಮಾರನು ಇಟ್ಟ ಅಗ್ಗಿಷ್ಟಿಗೆಯಂತೆ (ಅಶೋಕ ವೃಕ್ಷವು) ಶೋಭಿಸಿತು.]

ಈ ಪದ್ಯದ ಅರ್ಥವನ್ನು ತಿಳಿಯಬೇಕಾದರೆ ಮದನನು ಪುಷ್ಪಾಯುಧನೆಂಬ ಮಾತು ಗೊತ್ತಿರಲಿಕ್ಕೆಬೇಕು. ಅರವಿಂದ, ಅಶೋಕ, ಚೂತ, ನವಮಲ್ಲಿಕಾ, ನೀಲೋತ್ಪಲ ಎಂಬ ಹೂಗಳೇ ಆವನ ಆಯುಧಗಳು. ವಸಂತಮಾಸದಲ್ಲಿ ಅಶೋಕ ವೃಕ್ಷಕ್ಕೆ ಎಳೆದಳಿರುಗಳುಂಟಾಗುತ್ತವೆ. ಇವು ಕೆಂಡದಂತೆ ಕೆಂಪು ಇರುವುದರಿಂದ ಕವಿಯು ಇವುಗಳನ್ನು ಪ್ರಜ್ವಲಿತವಾದ ಅಗ್ನಿಜ್ವಾಲೆಗಳಿಗೆ ಹೋಲಿಸಿದ್ದಾನೆ. ಪುಷ್ಪ ಮಕರಂದವನ್ನು ಸವಿಯಲು ತಂಡುತಂಡಾಗಿ ಬಂದು ಕೆಂದಳಿರುಗಳನ್ನು ಮುಸುಕಿದ ಭ್ರಮರಗಳೇ ಇದ್ದಲಿಗಳು. ವಸಂತನೇ ಕಮ್ಮಾರನು. ಕಮ್ಮಾರನು ಇದ್ದಲಿಗಳನ್ನು ಹಾಕಿ ಅಗ್ಗಿಷ್ಟಿಗೆಯನ್ನು ಹೊತ್ತಿಸಿ ಆಯುಧ ಗಳನ್ನು ಸಿದ್ಧಪಡಿಸುವಂತೆ ಚೈತ್ರನೆಂಬ ಕಮ್ಮಾರನು ಅಶೋಕವೆಂಬ ಅಗ್ಗಿಷ್ಟಿ ಗೆಯನ್ನಿರಿಸಿ, ಭ್ರಮರಗಳೆಂಬ ಇದ್ದಲಿಗಳನ್ನು ಹಾಕಿ ಪುಷ್ಪಗಳನ್ನು ಅದರಲ್ಲಿ ಕಾಸಿ ಮದನನ ಸಲುವಾಗಿ ಬಾಣಗಳನ್ನು ಸಜ್ಜುಗೊಳಿಸುತ್ತಿದ್ದನೆಂದು ಕವಿಯು ವರ್ಣಿಸಿದ್ದಾನೆ. ಷಡಕ್ಷರಿಯು ಕೊಟ್ಟ ಮೇಲಿನ ಉಪಮಾನದಿಂದ ಆವನ ವಸ್ತುಗ್ರಹಣಶಕ್ತಿಯು ಅಪೂರ್ವವಾದುದೆಂದು ವ್ಯಕ್ತವಾಗುತ್ತದೆ. ' ಪ್ರಪಂಚ ದಲ್ಲಿ ನಡೆಯುವ ಕಾರ್ಯಗಳನ್ನೂ, ಪ್ರಕೃತಿವ್ಯಾಪಾರಗಳನ್ನೂ ಚೆನ್ನಾಗಿ ಗ್ರಹಿಸಿ ಅವುಗಳನ್ನು ತನ್ನ ಉಗ್ರಾಣದ ಸಾಮುಗ್ರಿಗಳಂತೆ ಬೇಕುಬೇಕಾದಾಗ ವಿನಿ ಯೋಗಿಸಿ ಔತಣದುಣಿಸುಗಳನ್ನು ಉಪಭೋಗಿಸಲು ಕೊಡುವಾತನೇ ಮಹಾ ಪ್ರತಿಭಾಶಾಲಿಯು "

॥ ಉತ್ಪಲ ಮಾಲಾ ॥

ಭ್ರಾಜಿತ ಧೂಮಮಾಳೆ ಮಧುಪಾವಳಿ ಕೇಸುರಿ ಕೆಂದಳಿರ್ಗತದು ।
ರ್ವೀಜಮುದಗ್ರ ವಹ್ನಿಯೆನೆ ಯಾತ್ರೆಯೊಳಂಗಜ ನಿಕ್ಷುಚಾಪಮಂ ॥
ಪೂಜಿಸಿ ಮಿಾನ ಕೇತನ ಮನರ್ಚಿಸಿ ವಾಜಿಯನಾಜಿಗೆಂದು ನೀ ।
ರಾಜಿಸಲಂದು ಹೊತ್ತಿಸಿದ ದೀಪ್ಯಮೆನಿಪ್ಪುವು ತಳ್ತಶೋಕೆಗಳ್ ॥

(ಶಾಂತಿ ಪುರಾಣ-ಕವಿಚರಿತೆ ೧)

[ಭ್ರಮರಗಳ ಸಮೂಹವು ಎಸೆಯುವ ಧೂಮರಾಶಿಯು (ಹೊಗೆಯ ಸಮುದಾಯವು.) ಕೆಂಪಾದ ಚಿಗುರುಗಳು ಉರಿಯುವ ಜ್ವಾಲೆಗಳು. ಆ ವೃಕ್ಷವೇ ಪ್ರಚಂಡವಾದ ಅಗ್ನಿಯೆಂಬಂತಿರಲಾಗಿ ಕಾಮನು ವಿಜಯಯಾತ್ರೆಯ ಸಮಯ

ದಲ್ಲಿ ಇಕ್ಷುಚಾಪವನ್ನು (ಕಬ್ಬಿನ ಬಿಲ್ಲನ್ನು) ಪೂಜಿಸಿ ಮಕರಧ್ವಜಕ್ಕೆ ಅರ್ಚನೆಯನ್ನು ಮಾಡಿ ಯುದ್ಧಕ್ಕೆ (ಸಿದ್ಧವಾದ) ವಾಹನಕ್ಕೆ ಆರತಿಯನ್ನು ಮಾಡಲು ಹೊತ್ತಿಸಿದ ದೀಪಮಾಲೆಗಳಂತೆ ಕೂಡಿ ಬೆಳೆದ ಅಶೋಕ ವೃಕ್ಷಗಳು ತೋರಿದುವು]

ಕಬ್ಬು ಕಾಮನ ಬಿಲ್ಲು. ಮಕರವೆ ಅವನ ಧ್ವಜವು (ಪದ್ಯದಲ್ಲಿ ಮೀನಕೇತನವೆಂಬ ಶಬ್ದವಿರುತ್ತದೆ. "ಮತ್ಸ್ಯ ಜಾತಿತ್ವಾತ್ ಮಕರಃ ಏವ ಮೀನಃ ಸ ಏವ ಕೇತನಂ ಯಸ್ಯ" ಎಂದು ಅಮರಕೋಶದಟೀಕಾಕಾರರು ಬರೆದಿರುವದರಿಂದ ಮೀನ ಮತ್ತು ಮಕರಶಬ್ದಗಳು ಪರ್ಯಾಯ ಶಬ್ದಗಳಾದವು) ಆದುದರಿಂದಲೇ ಕಾಮನಿಗೆ "ಕರ್ವುವಿಲ್" "ಮೀನಕೇತನ" ಎಂಬ ಹೆಸರುಗಳುಂಟಾಗಿರುತ್ತವೆ. ರಾಜನು ದಿಗ್ವಿಜಯಕ್ಕೆಹೊರಟನೆಂದರೆ ಅವನ ಶಸ್ತ್ರಾಸ್ತ್ರಗಳನ್ನು ಪೂಜಿಸುವದುಂಟು. ಭದ್ರವಾಹನವು ಸಿದ್ಧವಾಗಲು ಮಾಂಗಲ್ಯಕೆಂದು ಅದಕ್ಕೆ ಆರತಿಯನ್ನೆತ್ತುವದುಂಟು ಇಲ್ಲಿ ಮನ್ಮಥನೃಪಾಲನು ತ್ರಿಲೋಕವನ್ನು ಜಯಿಸುವದಕ್ಕಾಗಿ ಹೊರಟು ನಿಂತಿರುವನು ತನ್ನ ವಾಹನಕ್ಕೆ ಮಂಗಳಾರುತಿಯನ್ನು ಮಾಡಬೇಕೆಂದು ಅವನು ಕೆಂದಳಿರುಗಳೆಂಬ ಉರಿಯಿಂದ ಶೋಭಿಸುವ ಅಶೋಕ ವೃಕ್ಷಗಳನ್ನೇ ದೀಪಮಾಲೆಗಳನ್ನಾಗಿ ಮಾಡಿಕೊಂಡನೆಂದು ಕವಿಯು ಉತ್ಪ್ರೇಕ್ಷಿಸಿದ್ದಾನೆ.

॥ ಕಂದ ॥

ವನದೇವತೆಯನುರಾಗಮೊ ।
ನನೆವಿಲ್ಲನ ವಿಕ್ರಮಾನಲಜ್ವಾಲೆಯೊ ಚೈ ॥
ತ್ರನ ಮಣಿಮಾಡವೊ ತಾನೆಂ ।
ದೆನೆ ಮಿಗೆ ಪಲ್ಲವಿತಮಾದಶೋಕಮದೆಸೆಗುಂ ॥

(ಉದ್ಭಟಕಾವ್ಯ-ಆ-೯-ಪ-೧೮)

[ವನದೇವತೆಯ ಅನುರಾಗವೋ ಮನ್ಮಥನ (ಪುಷ್ಪಬಾಣದ) ಪ್ರತಾಪಾಗ್ನಿಯ ಜ್ವಾಲೆಯೊ ವಸಂತನ ಮಣಿಮಯವಾದ ಉಪ್ಪರಿಗೆಯೊ ಎಂಬಂತೆ ಪಲ್ಲವಗಳಿಂದ ಕೂಡಿದ ಅಶೋಕವು ಚೆನ್ನಾಗಿ ಶೋಭಿಸುವದು]

[ಅಶೋಕ ವೃಕ್ಷವು ವನದೇವತೆಯ ಅನುರಾಗದಂತೆ ಕಂಡಿತು. ಪುಷ್ಪಬಾಣನ ಪ್ರತಾಪಾಗ್ನಿಯ ಜ್ವಾಲೆಯಂತೆ ಕಂಡಿತು. ವಸಂತನ ಪದ್ಮರಾಗಮಣಿ ಖಚಿತವಾದ ಉಪ್ಪರಿಗೆಯಂತೆ ಕಂಡಿತೆಂದು ಕವಿಯು ಉತ್ಪ್ರೇಕ್ಷಿಸಿದ್ದಾನೆ. ಈ ಉತ್ಪ್ರೇಕ್ಷೆಗೆ "ಕೋಪರಾಗಪ್ರಸರದೊಳಾರಕ್ತ ವರ್ಣಮಭಿವರ್ಣಿಸು ಗುಂ" (ಕೋಪ, ರಾಗ ಮೊದಲಾದವುಗಳ ವರ್ಣ ಕೆಂಪು ಎಂಬ ಕವಿಸಮಯವೇ ಆಧಾರವು.

॥ ವಾರ್ಧಿಕಷಟ್ಪದಿ ॥

ನುತಪಲ್ಲವನೆ ದೋತ್ರಮುಂ ಬಹಿರ್ವಾಸನುಂ ।
ತತಪಿಕಸ್ವರನೆ ವೇದಸ್ವರಂ ಮೆರೆವ ಪಂ ॥
ಡಿತವಕ್ಕಿಯೊಳ್ನುಡಿ ಪುರಾಣಪಠನಂ ಭ್ರಮದ್ಭ್ರಮರೀವಿಲಾಸವಿರುತಿ ॥
ಹಿತವಾದ ಮಂಗಲಾಶೀರ್ವಾದಮಂತ್ರಂ ಪ ।
ತಿತನುಷ್ಪ ಕುಸುಮಕೇಸರನೆ ಮಂತ್ರಾಕ್ಷತೆಯ ।
ತತಿಯಾಗೆ ಮಧುವಿನ ಪುರೋಹಿತನೊ ಎನೆಯೊಂದಶೋಕವೃಕ್ಷಂ ಮೆರೆದುದೂ ॥

(ಪದ್ಮರಾಜಪುರಾಣ ಸಂಧಿ ೮-ಪ-೨೮)

[ರಮಣೀಯವಾದ ಪಲ್ಲವಗಳೇ ದೋತ್ರವು. ಕೋಗಿಲೆಗಳ ವಿಸ್ತಾರವಾದ ದನಿಯೇ ವೇದಘೋಷವು; ಶೋಭಿಸುವ ಗಿಳಿಗಳ ಸವಿನುಡಿಯೇ ಪುರಾಣ ಪಠನವು; ಎಲ್ಲ ಕಡಯಲ್ಲಿಯೂ ಸುಳಿದಾಡುವ ಪೆಣ್ದುಂಬಿಗಳ ವಿಲಾಸಮಯವಾದ ಝೇಂಕಾರರವವು ಹಿತಕರವಾದ ಮಂಗಲಾಶೀರ್ವಾದ ಮಂತ್ರವು. ಭೂಮಿಯ ಮೇಲೆ ವಿಸ್ತೃತವಾಗಿ ಬಿದ್ದ ಹೂಗಳ ಬೀಜಗಳೇ ಮಂತ್ರಾಕ್ಷತೆಗಳ ಸಮೂಹವಾಗಲಾಗಿ, ಮಧುಮಾಸದ ಪುರೋಹಿತನೋ ಎಂಬಂತೆ ಅಶೋಕ ವೃಕ್ಷವು ಮೆರೆದುದು]

ಪುರೋಹಿತನು ಹೆಗಲ ಮೇಲೆ ದೋತ್ರ ಹಾಕಿಕೊಂಡು, ವೇದೋಕ್ತ ಮಂತ್ರಗಳನ್ನುಚ್ಚರಿಸಿ, "ಪುಷ್ಟಿರಸ್ತು; ತುಷ್ಟಿರಸ್ತು; ಆಯುರಸ್ತು;" ಎಂದು ಆಶೀರ್ವಾದ ಪೂರ್ವಕವಾಗಿ ಯಜಮಾನನ ಮೇಲೆ ಮಂತ್ರಾಕ್ಷತೆಗಳನ್ನು ಉದರಿಸುವಂತೆ, ಅಶೋಕ ವೃಕ್ಷವೆಂಬ ಪುರೋಹಿತನು ಪಲ್ಲವವೆಂಬ ದೋತ್ರವನ್ನು ಧರಿಸಿ, ಕೋಕಿಲನುಡಿಯೆಂಬ ವೇದಘೋಷವನ್ನು ಮಾಡಿ, ಪೆಣ್ದುಂಬಿಗಳ ಝೇಂಕಾರವೆಂಬ ಮಂಗಲಾಶೀರ್ವಾದ ಮಂತ್ರಪೂರ್ವಕವಾಗಿ ವಸಂತಮಾಸವೆಂಬ ಯಜಮಾನನ ಮೇಲೆ ಹೂಗಳ ಬೀಜಗಳೆಂಬ ಮಂತ್ರಾಕ್ಷತೆಗಳನ್ನು ಚೆಲ್ಲಿದನೆಂದು ಕವಿಯು ಅಶೋಕವನ್ನು ವರ್ಣಿಸಿದ್ದಾನೆ.

॥ ಮತ್ತೇಭ ವಿಕ್ರೀಡಿತ ॥

ಸ್ಮರನಾರೂಢ ಶರಾಸನಂ ಮಧುಕರ ಜ್ಯಾರಾವಮಂ ಮಾಡಿ ತೊ ।
ಟ್ಟರಲಂಬಂ ನೆರೆದಿರ್ಪನೋಪರನಗಲ್ಪೇಕಾಂತದೊಳ್ ಕಾಂತೆಯರ್ ॥
ಬರವೇಡಿಲ್ಲಿಗೆ ಪೋಗಿಮುತ್ತಲೆನುತಂ ಕೈಸನ್ನೆಯಿಂ ಪೇಳ್ವವೊಲ್ ।
ತರುಣಾಶೋಕ ನವ ಪ್ರವಾಳಮೆಸೆಗುಂ ಮಂದಾನಿಲಾಂದೋಳಿತಂ ॥

(ಮಲ್ಲಿನಾಥ ಪುರಾಣ-೭-೧೭)

[ಮನ್ಮಥನು ಬಿಲ್ಲಿಗೆ ಹೆದೆಯೇರಿಸಿ ಷಟ್ಪದವೆಂಬ ಹಗ್ಗದಿಂದ ಟೇಂಕಾರ ವನ್ನು ಮಾಡಿ, ಹೂವಿನ ಬಾಣವನ್ನು ಜೋಡಿಸಿ ಸಿದ್ಧನಾಗಿರುವನು. ಎಲೈ ಕಾಂತೆಯರಿರ, ನಿಮ್ಮ ಪ್ರಿಯರನ್ನಗಲಿ ಒಬ್ಬರೇ ಇಲ್ಲಿಗೆ ಬರಬೇಡಿರಿ. ಆತ್ತ ಕಡೆಗೆ ಹೋಗಿರಿ. " ಎಂದು ಕೈ ಸನ್ನೆಯಿಂದ ಹೇಳುವಂತೆ ಮಂದಮಾರುತನಿಂದ ಆಂದೋಲಿತವಾದ ಎಳೆಯದಾದ ಅಶೋಕ ವೃಕ್ಷದ ಹೊಸದಳಿರುಗಳು ಶೋಭಿಸಿದುವು.] ವಸಂತಮಾಸದಲ್ಲಿ ಅಶೋಕ ವೃಕ್ಷದ ಕುಸುಮಗಳಷ್ಟೇ ಸ್ಮರ ದೀಪನಗಳಲ್ಲ. ನೂತನವಾದ ಚಿಗುರೆಲೆಗಳಾದರೂ ವಿಲಾಸಿಗಳನ್ನು ವಿಕಾರ ಪರವಶರನ್ನಾಗಿ ಮಾಡಿ ಬಿಡುತ್ತವೆಂಬುದೇ ಭಾವವು. (ಸಮ್ಮೋಹನ, ಉನ್ಮಾದನ, ತಾಪನ, ಶೋಷಣ, ಸ್ತಂಭನ ಇವೇ ಮದನನ ಐದು ಬಾಣಗಳು .)

ಸ್ಮರ=ಕಾಮ [ಸ್ಮರಯತಿ=ಪ್ರಿಯರನ್ನು ಸ್ಮರಣೆಗೆ ತಂದುಕೊಡುತ್ತಾನೆ. ಇತಿ=ಎಂದು, ಸ್ಮರಃ]

॥ ಮತ್ತೇಭವಿಕ್ರೀಡಿತ ॥

ಇದೆದಲ್ ಚೈತ್ರ, ಸುವರ್ಣಕಾರನತುಲಾಶ್ಚರ್ಯಕ್ಕೆ ಪಕ್ಕಾಗಿ ಮಾ।
ಡಿದನುದ್ಭಾಸಿಯ ಪುಷ್ಯರಾಗ ಮಣಿಮಾಲಾಕೀರ್ಣ ಕೋಟೀರಮಂ ॥
ಪದೆಪಿಂದಾ ವನ ಲಕ್ಷ್ಮಿಗೆಂಬ ತೆರದಿಂದಂ ಚಂಪಕಂ ಚೆಲ್ವನಾ ।
ಳ್ದುದಣಂ ಕುಟ್ಮಲ ಕೋಟಿಯಿಂ ತಿರುಗಿ ದಿವ್ಯಾಮೋದಮಂ ಬೀರುತುಂ॥

[ಕಮಲಭವನ ಶಾಂತೀಶ್ವರ ಪುರಾಣ ಆಶ್ವಾಸ ೧೦ ಪದ್ಯ ೮೪]

[ಇಕೋ! ಚೈತ್ರ (ವಸಂತ) ನೆಂಬ ಸುವರ್ಣಕಾರ (ಅಕ್ಕಸಾಲಿಗ) ನು ಬಹಳ ಕೌತುಕವುಳ್ಳವನಾಗಿ ಭಾಸುರವಾದ ಪುಷ್ಯರಾಗಗಳ ಸಮೂಹದಿಂದ ಕೂಡಿದ ಮುಕುಟ (ಕಿರೀಟ)ವನ್ನು ವನಲಕ್ಷ್ಮಿಯ ಸಲುವಾಗಿ ಒಳ್ಳೇ ವಿಲಾಸ ವುಳ್ಳವನಾಗಿ ಮಾಡಿದನೆಂಬಂತೆ ಚಂಪಕ ವೃಕ್ಷವು ಮೊನೆಮೊಗ್ಗೆಗಳಿಂದ ತುಂಬಿ ಸ್ವರ್ಗೀಯ ಸೌರಭ್ಯ (ಸುಗಂಧ) ವನ್ನು ಸೂಸುತ್ತ ಶೋಭಿಸಿತು.] ಕವಿಯು ವಸಂತನನ್ನು ಅಕ್ಕಸಾಲಿಗನನ್ನಾಗಿಯೂ, ವನವನ್ನು ಲಕ್ಷ್ಮಿಯನ್ನಾಗಿಯೂ ಚಂಪಕವನ್ನು ಕಿರೀಟವನ್ನಾಗಿಯೂ, ಚಂಪಕ ಮುಕುಲಗಳನ್ನು ಪುಷ್ಯರಾಗ ಮಣಿಗಳನ್ನಾಗಿಯೂ ಕಲ್ಪಿಸಿ ರಸಿಕರ ಅಂತಃಕರಣವನ್ನು ಚೆನ್ನಾಗಿ ಸೆಳೆದಿದ್ದಾನೆ

'ದಲ್' ಎಂಬುದು ನಿಶ್ಚಯಾರ್ಥದಲ್ಲಿ

" ಏಗಂ ದಲಂ ದೆರೆಂದಲ್।
ತಾಗುಗುಮತಿ ನಿಶ್ಚಯಾರ್ಥ ಮಂ ತಾಂ "

[ಶಬ್ದಮಣಿದರ್ಪಣ ಸೂತ್ರ ೩೦೭]

॥ ಕಂದ ॥

ಸದಮಳ ಚರಿತ್ರರಾವಾ ।
ಸದವೊಲ್ ಮಧುಪಾವಳೀ ವಿನಿರ್ಜಿತವಾಗಿ ॥
ರ್ದುದು ಮಧುಮಯ ಪ್ರಸೂನಾ ।
ಸ್ಪದವಾಗಿಯು ಮಿ ನವೀನ ಚಂಪಕ ವೃಕ್ಷಂ ॥

(ಶಾಂತೀಶ್ವರ ಪುರಾಣ ೮೧೧೦; ಪದ್ಯ ೮೫.)

[ಈ ನವೀನ ಚಂಪಕ ವೃಕ್ಷವು " ಮಧುಮಯ-ಪ್ರಸೂನಾಸ್ಪದವಾಗಿಯುಂ " (೧ ಮಕರಂದದಿಂದ ಪೂರ್ಣವಾಗಿ ತುಂಬಿದ ಪುಷ್ಪಗಳಿಂದ ತುಂಬಿದುದಾಗಿದ್ದರೂ ೨ ಅಮೃತಮಯವಾದ ಸತ್ಕೃತಿಫಲಗಳುಳ್ಳವರಾಗಿದ್ದರೂ) ನಿರ್ಮಲ ಚಾರಿತ್ರ್ಯವುಳ್ಳವರ ವಸತಿಸ್ಥಾನದಂತೆ " ಮಧುಪಾವಳೀ ವಿನಿರ್ಜಿತವಾಗಿರ್ದುದು." (೧ ಭೃಂಗಕುಲದಿಂದ ರಹಿತವಾದುದಾಗಿಯೂ, ೨ ಮದ್ಯಪಾನಿಗಳೇ ಮೊದಲಾದ ವ್ಯಸನಿಗಳಿಂದ ರಹಿತವಾದುದಾಗಿಯೂ ಇದ್ದಿತು.) ಚಂಪಕ ಪುಷ್ಪದಲ್ಲಿ ಭ್ರಮರಗಳಿಗೆ ಮಾರಕತ್ವವೆಂಬ ಕವಿಸಮಯವನ್ನು ಅನುಲಕ್ಷಿಸಿ ಅದನ್ನು ಸಚ್ಚರಿತ್ರರ ವಸತಿಸ್ಥಾನಕ್ಕೆ ಹೋಲಿಸಿ, " ಮಧುಮಯ ಪ್ರಸೂನವಾಗಿಯುಂ ಮಧುಪಾವಳೀ ವಿನಿರ್ಜಿತವಾದುದು " ಎಂಬ ಶ್ಲಿಷ್ಟ ಪದಗಳನ್ನು ಉಪಯೋಗಿಸಿ ರಸಿಕರನ್ನು ಆನಂದಗೊಳಿಸಿದ್ದಾನೆ. ಇದು ವಿರೋಧಾಭಾಸದ ಉದಾಹರಣೆಯು. ಇನ್ನು ನಾವು ಚಂಪಕ ಶಬ್ದದ ವ್ಯುತ್ಪತ್ತಿಯನ್ನು ಸ್ವಲ್ಪ ನೋಡೋಣ. " ಚಮ್ಯತೆ (ಅದ್ಯತೆ, ಆಸ್ವಾದಿಸಲ್ಪಡುತ್ತದೆ) ಅಲಿಭಿಃ (ಭ್ರಮರಗಳಿಂದ) ಇತಿ (ಎಂದು) ಚಂಪಕಃ ;

ಚಂಪಕಸ್ತು ಕುಮಾರಶ್ಚ ಸುರಭಿಃಶೀತಲಶ್ಚ ಸಃ ।
ಚಾಂಪೇಯೋ ಹೇಮಪುಷ್ಪಶ್ಚ ಕಾಂಚನಃ ಷಟ್ಪದಾತಿಥಿಃ ॥

ಚಂಪಕವು ಭ್ರಮರವೇ ಅತಿಥಿಯಾಗಿ ಉಳ್ಳುದೆಂದು ಮೇಲಿನ ವಿವರಣೆಯಿಂದ ಸ್ಪಷ್ಟವಾಗುತ್ತದೆ. ಹೀಗಿದ್ದರೂ ಕವಿಗಳು ಭ್ರಮರಗಳಿಗೆ ಚಂಪಕದಲ್ಲಿ ಮಾರಕತ್ವವನ್ನು ಹೇಳುವುದು ನಮಗೆ ಆಹ್ಲಾದವನ್ನುಂಟು ಮಾಡುವುದಿಲ್ಲವೇ ? ಕೆಲವರೆನ್ನುವುದೇನೆಂದರೆ ಚಂಪಕದ ವಾಸನೆಯು ಅತ್ಯುಗ್ರವಿದ್ದುದರಿಂದ ನಿಜವಾಗಿಯೇ ಭ್ರಮರಗಳು ಚಂಪಕದ ಸಮೀಪಕ್ಕೆ ಹೋಗುವುದಿಲ್ಲ.

ಇದರ ನಿರ್ಣಯವು ಪಂಡಿತರನ್ನು ಕೂಡಿದೆ.

॥ ಕಂದ ॥

ಬನಗಳ್ತಲೆಯುಂ ಕಮಲಾ ।
ಪ್ತನ ಕದಿರುಂ ಕಾದಿಮಡಿಯುತಳಿಯುಂ ಚಾಂಪೇ ॥
ಯನಿಕಾಯ ಮಾಮವಲ್ಲನೊ ।
ಡೆನಸುಂ ತದ್ದ್ವಯಕೆ ಪಗೆತನಂ ಸಮನಿಪುದೇ ॥

(ರಾಜಶೇಖರ ವಿಲಾಸ ೩।೩೬)

[ವನದಲ್ಲಿಯ ದಟ್ಟವಾದ ಕತ್ತಲೆಯೂ, ಕಮಲಗಳಿಗೆ ಆಪ್ತನಾದ ಸೂರ್ಯನ ಕಿರಣಗಳೂ ಕಾದಿ ಮಡಿಯಲು ಕತ್ತಲೆಯಿಂದ ಭ್ರಮರ ಸಮೂಹವೂ, ಸೂರ್ಯನ ಕಿರಣಗಳಿಂದ ಸಂಪಿಗೆಯ ಹೂಗಳೂ ಉತ್ಪನ್ನವಾದವು. ಹೀಗಲ್ಲದಿದ್ದರೆ ಭ್ರಮರಗಳಿಗೂ ಸಂಪಿಗೆಯ ಹೂಗಳಿಗೂ ಹಗೆತನವುಂಟಾಗಬಹುದಾಗಿದ್ದಿತೇ?]

ಇದು ವನದ ವರ್ಣನೆಯು. ವನಗಲ್ಲಿ ಗಿಡಗಳು ದಟ್ಟವಾಗಿ ಬೆಳೆದಿದ್ದವು. ವೃಕ್ಷರಾಜಿಯು ಪಲ್ಲವ ಪ್ರಸರದಿಂದ ತುಂಬಿದ್ದಿತು. ಆ ವನ ಪ್ರದೇಶದಲ್ಲೆಲ್ಲ ನಿಬಿಡವಾಗಿ ಬೆಳೆದ ಗಿಡಗಳ ನೆರಳು ದಟ್ಟಾಗಿ ಹಬ್ಬಿದ್ದಿತು. ಸೂರ್ಯನ ಕಿರಣಗಳಿಗೆ ಪ್ರವೇಶವಿರಲಿಲ್ಲ. ಇಷ್ಟೇ ಕವಿಯ ಆಶಯವು. ಆದರೆ ಇದನ್ನೇ ಒಳ್ಳೇ ಚಮತ್ಕಾರವಾದ ರೀತಿಯಿಂದ ಹೇಳಿದ್ದಾನೆ. ಸೂರ್ಯನು ಕತ್ತಲೆಗೆ ವೈರಿಯು. ವನದಲ್ಲಿಯ ಕತ್ತಲೆಯನ್ನು ನೋಡಿದೊಡನೆ ಅದನ್ನೋಡಿಸುವುದಕ್ಕಾಗಿ ಅವನು ತನ್ನ ಕಿರಣಗಳನ್ನು ಕಳುಹಿದನು. ಕತ್ತಲೆಯಾದರೂ ಬಹಳ ಪ್ರಬಲವಿದ್ದುದರಿಂದ ಕತ್ತಲೆ ಮತ್ತು ಕಿರಣಗಳೆರಡೂ ಹೋರಾಡಿ ಮಡಿದುವು. ಕತ್ತಲೆಯಿಂದ ಭ್ರಮರಗಳುತ್ಪನ್ನವಾದುವು; ಮತ್ತು ಹೊಂಬಣ್ಣದ ಕಿರಣಗಳಿಂದ ಚಂಪಕ ಪುಷ್ಪಗಳುಂಟಾದುವು. ಹುಟ್ಟುವಾಗ ಅವುಗಳು ತಮ್ಮ ಮೊದಲಿನ ನಿತ್ಯವಿರೋಧವನ್ನು ಕಟ್ಟಿಕೊಂಡೇ ಬಂದುವು. ಆದುದರಿಂದಲೇ ಚಂಪಕಕ್ಕೂ ಭ್ರಮರಕ್ಕೂ ವೈರವು. ಹೀಗಿರದಿದ್ದರೆ ಇವೆರಡಕ್ಕೂ ವೈರಭಾವವಿರಲು ಕಾರಣವೇನು? ಎಂದು ಕವಿಯು ಕೇಳಿದ್ದಾನೆ.

॥ ಉತ್ಪಲ ಮಾಲಾ ॥

ಪೂಜಿಸಿ ಮಂತ್ರದೇವತೆಯರಂ ಮಧುವಂ ವನಲಕ್ಷ್ಮಿ ಪೀರ್ವ ಪೊಂ ।
ಗಾಜಿನಬಟ್ಟಲಂತೆ ರತಿನರ್ತನ ಕಾಂಚನ ತಾಳಮಂತೆ ರಾ ॥
ರಾಜಿಪ ಕರ್ಣಿಕಾರ ಕುಸುಮಾಗ್ರದೊಳಿರ್ದ್ದಳಿಮಾಳೆ ಕಂತು ನೀ ।
ರಾಜನ ದೀಪಮಾಳಿಕೆಯ ಚೂಳಿಕೆಯಂತೆ ಕರಂ ಮನೋಹರಂ ॥

(ಮಲ್ಲಿನಾಥ ಪುರಾಣ ೫।೨೧.)

[ಮಂತ್ರಾಧಿದೇವತೆಯರನ್ನು ಪೂಜಿಸಿ, ವನಲಕ್ಷ್ಮಿಯು ಮಧು (ಮಕರಂದ) ವನ್ನು ಕುಡಿಯುವ ಬಂಗಾರ ಬಣ್ಣದ ಕಾಜಿನ ಬಟ್ಟಲಂತೆಯೂ, ರತಿದೇವಿಯ ನರ್ತನ ಕಾಲದಲ್ಲಿಯು ಕಾಂಚನ ತಾಳದಂತೆಯೂ ಶೋಭಿಸುವ ಕರ್ಣಿಕಾರ ಪುಷ್ಪದ ಅಗ್ರಭಾಗದಲ್ಲಿದ್ದ ಭ್ರಮರಗಳ ಸಮೂಹವು ಮನ್ಮಥನಿಗೆ ಎತ್ತಿದ ನೀರಾಜನ ದೀಪ ಮಾಲಿಕೆಯ ಕುಡಿಯಂತೆ ಬಹಳ ಮನೋಹರವಾಗಿ ಶೋಭಿಸಿತು]

ಇದು ಕರ್ಣಿಕಾರ (ಬೆಟ್ಟದಾವರೆ) ಪುಷ್ಪದ ವರ್ಣನೆಯು. ವನವು ಮನ್ಮಥನ ಸಾಮ್ರಾಜ್ಯಸ್ಥಾನವು; ಮತ್ತು ರತಿಯು ' ಮೃದುಮಧುರಲಿ ಲಾಸ್ಯ ಶಾಲೆಯು " ವನಲಕ್ಷ್ಮಿಯ ನಿವಾಸ ಸ್ಥಾನವು. ಕರ್ಣಿಕಾರವು ಹೊಂಬಣ್ಣದ್ದಿದ್ದು ಅರಳಿದಾಗ ಅವರ ದಲಗಳು ಒಂದಕ್ಕೊಂದು ಹೊಂದಿಕೆಯಾಗಿರುವುದರಿಂದ ವನಲಕ್ಷ್ಮಿಯು ಮಧು ಪಾನ ಪಾತ್ರೆಯಂತೆ ಕಂಡಿತು. ರತಿದೇವಿಯು ಕುಣಿಯುವಾಗ ಕೈಯಲ್ಲಿ ಬಾರಿಸುವ ಹೊಂದಾಳದಂತೆ ಕಂಡಿತು. ಮತ್ತು ಮನ್ಮಥನಿಗೆತ್ತಿದ ನೀರಾಜನದ ದೀಪಮಾಲೆ ಯಂತೆ ಕಂಡಿತು. ಪುಷ್ಪರಸವನ್ನು ಸವಿಯಲು ಬಂದು, ದಲಗಳ ಮೇಲೆ ಕುಳಿತ ಭ್ರಮರಗಳು ದೀವಿಗೆಯ ಕುಡಿಯಂತೆ ಕಾಣಿಸಿದುವು. ಇವರ ಸ್ವಾರಸ್ಯವನ್ನು ಶಬ್ದ ಗಳಿಂದ ವರ್ಣಿಸುವುದು ಅಸದಳವು

॥ ಕಂದ ॥

ನೆಗಳ್ದ ವಸಂತನ ಮುಂದಾ ।
ಶುಗ–ನಟನಾಡಿಪೆ ಲತಾ-ನಟಿನಿಯಂ ಬನವೆ ॥
ಣ್ಮಗೆಯೊತ್ತುವ ಪೊಂದಾಳದ ।
ಬಗೆಯಂ ಪೋಲ್ದಲರ್ದ ಕರ್ಣಿಕಾರಮೆಸೆಗುಂ ॥

(ಉದ್ಭಟ ಕಾವ್ಯ ೯–೨೨)

[ಉಜ್ವಲ ಕೀರ್ತಿಯುತನಾದ ವಸಂತನೆಂಬ (ಸೊಬಗುಗಾರನ) ಇದಿರಿಗೆ ಮಾರುತನೆಂಬ (ಕುಶಲ) ನಟಾಚಾರ್ಯನು ಲತೆಯೆಂಬ ನರ್ತಕಿಯನ್ನು ಆಡಿಸಲಾಗಿ ವನವೆಂಬ ವಧುವು (ಹರ್ಷವುಳ್ಳವಳಾಗಿ) ಚೆನ್ನಾಗಿ ಬಾರಿಸುವ ಬಂಗಾರದ ತಾಳದ ರೀತಿಯನ್ನು ಹೊಂದಿ ಕರ್ಣಿಕಾರ ಪುಷ್ಪವು ಶೋಭಿಸಿತು.] ಮಂದಮಾರುತನು ಲತೆಯನ್ನಲ್ಲಾಡಿಸಲು. ಅದು ನರ್ತಕಿಯಂತೆ ಕಂಡಿತು.

* ॥ ವಾರ್ಧಿಕ ಷಟ್ಪದಿ ॥

ಹಂಗ ಮುಗುಚುವೆನೆಂದು ಭೂಮಿ ಕೈನೀಡಿ ಮೇ ।
ಘಂಗಳಿಗೆ ಕೊಡುವಮೃತ ಕಳಶ ಸಂಕುಳವೊಗಗ ।
ನಾಂಗಣದೊಳಿರೆ ಸುಳಿವ ವಿದ್ಯಾಧರಾಳಿಗೆ ವಸಂತ
ನಿಟ್ಟರವಟಗೆಯೋ ॥

ಇಂಗಡಲ ಕಡೆವ ಕಡೆಯಿಂದ ಹು[illegible] ಪದಾ।
ರ್ಥಂಗಳಂ ತಮತಮಗೆ ಕೊಂ[illegible]ರೆ ಭೂಲ।
ತಾಂಗಿ ತೆಗೆದೆತ್ತಿಟ್ಟ ರಸ ಕಳಶವುಂ ಎನಿಸಿ ಪಣ್ತ ಚೆಂದೆಂಗೆಸೆದುದು॥

(ಸೋಮನಾಥ ಚರಿತೆ ೨=೧೦೩)

[ಭೂದೇವಿಯು ಪ್ರತ್ಯುಪಕಾರ ಮಾಡುವೆನೆಂದು ಮೋಡಗಳಿಗೆ ಕೈಯೆತ್ತಿ ಕೊಡುವ ಅಮೃತದಿಂದ ತುಂಬಿದ ಪಾತ್ರೆಗಳ ಸಮೂಹವೋ, ಆಕಾಶದಲ್ಲಿ ಸಂಚರಿಸುವ ವಿದ್ಯಾಧರರಿಗಾಗಿ (ದೇವತೆಗಳಿಗಾಗಿ) ವಸಂತದೇವನಿಟ್ಟ ಅರವಟ್ಟಿಗೆಯೋ, ಕ್ಷೀರಸಾಗರವನ್ನು ಕಡೆಯುವಾಗ ಹೊರಟ ಪದಾರ್ಥಗಳನ್ನು (ವಿಷ್ಣು, ಇಂದ್ರ ಮೊದಲಾದ ದೇವತೆಗಳು) ತಮತಮಗೆಂದು ತೆಗೆದುಕೊಂಡು ಹೋಗುತ್ತಿರಲು ಭೂದೇವಿಯು (ತನಗೆಂದು) ತೆಗೆದಿಟ್ಟ ರಸ (ದಿಂದ ತುಂಬಿದ) ಪಾತ್ರೆಯೋ ಎಂದೆನ್ನುವಂತೆ ಬಲಿತ (ಪಕ್ವವಾದ) ಮತ್ತು (ಬಣ್ಣಬಂದ ತೆಂಗುಗಳುಳ್ಳ) ಚೆಂದೆಂಗಿನ ಗಿಡವು ಶೋಭಿಸಿತು.] ತನಗೆ ನೀರನ್ನು ಕೊಟ್ಟ ಮೋಡಗಳ ಉಪಕಾರವನ್ನು ತೀರಿಸುವೆನೆಂದು ಅಮೃತ ತುಲ್ಯವಾದ ರುಚಿಕರ ಜಲವನ್ನು ಪಾತ್ರೆಗಳಲ್ಲಿ ತುಂಬಿ ಭೂದೇವಿಯು (ತೆಂಗಿನ ಗಿಡವೆಂಬ) ತೋಳನೆತ್ತಿ ಹಳೋ ಏನೋ ಎಂಬಂತೆ ಕಾಣಿಸಿತು. ಭೂಮಿಯಮೇಲೆ ಪ್ರವಾಸ ಮಾಡುವವರಿಗೆ ಎಷ್ಟೋ ಅರವಟ್ಟಿಗೆಗಳು ಅಲ್ಲಲ್ಲಿ ಇರುತ್ತವೆ; ಆದರೆ ಆಕಾಶ ಸಂಚಾರಿಗಳಾದ ದೇವತೆಗಳಿಗೆ ಆ ಅನುಕೂಲತೆಯು ಎಲ್ಲಿಂದ ತಾನೆ ಬಂದೀತು? ಎಂದು ಆಲೋಚಿಸಿ ವಸಂತದೇವನು ಆಕಾಶದಲ್ಲಿ (ತೆಂಗುಗಳೆಂಬ ಪಾತ್ರೆಗಳಿಂದ ಕೂಡಿದ) ಅರವಟ್ಟಿಗೆಯನ್ನಿಟ್ಟನೆಂಬಂತೆ ಕಂಡಿತು. ಕ್ಷೀರಸಾಗರ ಮಥನ ಕಾಲದಲ್ಲಿ (ಈ ಕಥೆಯು ಬೇರೊಂದೆಡೆಗೆ ಬಂದಿದೆ.) ವಿಷ್ಣುವೇ ಮೊದಲಾದವರು ಅಲ್ಲಿ ಹೊರಟ ರತ್ನಗಳನ್ನು ತೆಗೆದುಕೊಂಡು ಹೋಗುತ್ತಿದ್ದರು. ಆಗ ಭೂದೇವಿಯು ತಾನೇನು [illegible]ಗೆದುಕೊಳ್ಳಬೇಕೋ ಎಂದು ಯೋಚಿಸಿ ಅಮೃತವನ್ನು ತೆಗೆದುಕೊಂಡಳೋ ಏನೋ ಎಂದೆನ್ನುವಂತೆ ರಸಕಲಶಗಳಂತೊಪ್ಪುವ ಚೆಂದೆಂಗುಗಳಿಂದ ತುಂಬಿದ ತೆಂಗಿನಮರವು ಶೋಭಿಸಿತು.

॥ ಮಹಾಸ್ರಗ್ಧರಾ ॥

ಸಲವಿಂದಂ ಕಾಮನೆಂತೆಂಬತುಳ ಮಹಿವರಂಗೆಂದು ಸನ್ಮೋಹನ ಶ್ರೀ।
ವಿಲತ್ಸಾಮ್ರಾಜ್ಯ ಪಟ್ಟಾಭಿಷವಮೊಸೆದೊಡಚೇಲ್ ಬಸಂತಂ ಕರಂ ನಿ॥
ರ್ಮಲ ಪೀಯೂಷಾಂಬುಪೂರ್ಣಂ ಕನಕ ಕಳಶಮುಂ ತಾಳ್ದವೋಲ್
ಶೋಭಿಕುಂ ಮಂ।
ಜುಳ ರುಚ್ಯಾಢ್ಯಘ್ನ ವಾಃ ಪೂರಿತನಿಜಫಲಭಾರಂ ಚೆಲನ್ನಾಳಿಕೇರಂ॥

(ಉದ್ಭಟ ಕಾವ್ಯ ೯-೧೪.)

[ಕಾಮನೆಂಬ ನಿರುಪಮಸಾದ ನೃಪತಿ ಶ್ರೇಷ್ಠನಿಗೆ ಆ ಹೊತ್ತು ಮೋಹನವಾದ ಕಾಂತಿ ಸೌಭಾಗ್ಯವೆಂಬ ಐಶ್ವರ್ಯ ಯುಕ್ತವಾದ ಸಾಮ್ರಾಜ್ಯ ಪಟ್ಟಾಭಿಷೇಕವನ್ನು ಉಲ್ಲಾಸದಿಂದಲೂ, ಪ್ರೇಮದಿಂದಲೂ ಮಾಡಲು (ಉದ್ಯುಕ್ತನಾಗಿ) ವಸಂತನು ನಿರ್ಮಲವಾದ ಅಮೃತರಸದಿಂದ ತುಂಬಿದ ಪೊಂಗಲಶವನ್ನು ಧರಿಸಿದಂತೆ ಮಂಜುಲ ಮಾಧುರ್ಯದಿಂದ ಕೂಡಿದ ನೀರಿನಿಂದ ತುಂಬಿದ ಫಲ ಸಮುದಾಯವುಳ್ಳದಾಗಿ ಒಲೆದಾಡುವ ತೆಂಗಿನ ಮರವು ಶೋಭಿಸಿತು.] ಸರ್ವೌಷಧಿಗಳಿಂದ ಕೂಡಿದ ಪವಿತ್ರವಾದ ತೀರ್ಥ ಜಲದಿಂದ ರಾಜನಿಗೆ ರಾಜ್ಯ ಪಟ್ಟಾಭಿಷೇಕವನು ಮಾಡುವುದುಂಟು. ಇಲ್ಲಿ ವಸಂತನು ಅಮೃತರಸದಿಂದ ಕೂಡಿದ ತೆಂಗಿನಕಾಯಿಗಳೆಂಬ ಕಲಶಗಳಲ್ಲಿಯ ಮಧುರ ಜಲದಿಂದ ಕಾಮನಿಗೆ ಶೃಂಗಾರ ಸಾಮ್ರಾಜ್ಯ ಪಟ್ಟಾಭಿಷೇಕವನ್ನು ಮಾಡಲುದ್ಯುಕ್ತನಾಗಿರುವನೆಂದು ಕವಿಯು ಸರಸವಾಗಿ ವರ್ಣಿಸಿದ್ದಾನೆ.

॥ ಚಂಪಕಮಾಲಾ ॥

ತರು ತತಿಯೊಳ್ ತ್ರಿಲೋಚನನಿದೆಂದರವಿಂದ ನಿವಾಸನಳ್ತಿಯಿಂ ।
ಸರಲ ಕರಾಂಗುಲಿ ತ್ರಿತಯದಿಂ ಫಲವಕ್ತ್ರದೊಳಾಂಕೆಗೆಯ್ದು ತ ॥
ತ್ಸರಕ ಸುಧಾಂಬುವಂ ಪುದಿದನೆಂಬುದನುರ್ವಿಗೆ ತೋರುತಿರ್ಪವೊಲ್ ।
ಸುರಿವುದು ನಾಳಿಕೇರ ಕುಜಮೊಲ್ದೆಳನೀರನೆ ತೋರಗಾಯ್ಗಳಿಂ ॥

(ಶಾಂತೀಶ್ವರ ಪುರಾಣ ೧೦-೯೦.)

[ವೃಕ್ಷಗಳ ಸಮೂಹದಲ್ಲಿ ಇದುವೆ ತ್ರಿಲೋಚನನು. (೧ ಶ್ರೇಷ್ಠನು, ೨ ಮೂರುಕಣ್ಣುಳ್ಳವನು.) ಎಂದು ಬ್ರಹ್ಮನು ಪ್ರೀತಿಯಿಂದ (ತನ್ನ) ಸರಳವಾದ ಮೂರು ಬೆರಳುಗಳನ್ನು ಫಲಮುಖದಲ್ಲಿ ಇರಿಸಿ, ಅದರ ಚಿಪ್ಪಿನಲ್ಲಿ ಅಮೃತ ರಸವನ್ನು ತುಂಬಿದನು. ಎಂಬುದನ್ನು ಜಗತ್ತಿಗೆ ತೋರಿಸುವಂತೆ ತೆಂಗಿನ ಮರವು ಭರದಿಂದ ದೊಡ್ಡ ಕಾಯಿಗಳಿಂದ ಮಧುರವಾದ ಎಳನೀರನ್ನೇ ಸುರಿಯುತ್ತಿರುವುದು.]

ಈಶ್ವರನಿಗೆ ಮೂರು ಕಣ್ಣುಗಳಿರುವಂತೆ ತೆಂಗಿನ ಚಿಪ್ಪಿಗೆ ಮೂರು ಕಣ್ಣುಗಳಿರುತ್ತವೆ. ಆದುದರಿಂದಲೇ ಕವಿಯು ಅದನ್ನು ತ್ರಿಲೋಚನನೆಂದು ಹೇಳಿದ್ದಾನೆ. ದೇವತೆಗಳಲ್ಲಿ ತ್ರಿನಯನನು (ಮಹಾದೇವನು) ಹೇಗೆ ಶ್ರೇಷ್ಠನೋ ಹಾಗೆಯೇ ಈ ತ್ರಿಲೋಚನನು (ತೆಂಗು) ಗಿಡಗಳಲ್ಲೆಲ್ಲ ಶ್ರೇಷ್ಠ.

॥ ಕಂದ ॥

ಅಮರ್ದಿನಿದನಿದರಿನಿದನೆಲೆ ।
ಯಮರರೆ ಸವಿನೋಳ್ಪುದೆಂದು ನಿಜರಸಮನಿಳಾ ॥

ರಮೆ ಮರಕತ ಕಳಶದೆ ತುಂ।
ಬಿ ಮೇಲೆ ನೀಡಿದಪಳೆಂಬವೋಲ್ ತೆಂಗೆಸೆಗುಂ ॥

(ರಾಜಶೇಖರ ವಿಲಾಸ ೨-೪೮.)

[ಎಲೆ ದೇವತೆಗಳಿರ, ಅಮೃತದ ರುಚಿಯನ್ನೂ, ಈ (ಎಳನೀರಿನ) ಮಾಧುರ್ಯವನ್ನೂ ಸರಿನೋಡುವುವೆಂದು ಇಳಾ ರಮೆಯು (ಭೂದೇವಿಯು) ತನ್ನ ರಸವನ್ನು ಮರಕತ ಕಲಶದಲ್ಲಿ ತುಂಬಿ ಮೇಲೆ ನೀಡಿದಂತೆ ತೆಂಗು ಶೋಭಿಸಿದುವು.] ಎರಡು ವಸ್ತುಗಳ ತುಲನೆ ಮಾಡುವವರಿಗೆ ಅವೆರಡರ ಗುಣದೋಷಗಳು ತಿಳಿದಿರುವುದು ಅತ್ಯಾವಶ್ಯಕವು. ಇಲ್ಲಿ ಅಮೃತ ಮತ್ತು (ತೆಂಗಿನೊಳಗಿನ) ಎಳನೀರು ಇವೆರಡರ ತುಲನೆಯಾಗಬೇಕಾಗಿದೆ. "ದೇವತೆಗಳೇ, ನೀವು ಅಮೃತ ಪಾನವನ್ನಂತೂ ಮಾಡಿಯೇ ಮಾಡಿರುವಿರಿ. ಈ ಎಳನೀರಿನ ಮಾಧುರ್ಯವನ್ನಿಷ್ಟು ನೋಡಬಾರದೇ? ಭೂಲೋಕದಲ್ಲಿಯ ಜನರು ಅಮೃತಪಾನ ಮಾಡದಿದ್ದರೂ ನಿಜವಾಗಿಯೇ ಭಾಗ್ಯಶಾಲಿಗಳು. ಈ ಎಳನೀರಿನ ಸವಿಯು ತಿಳಿದ ಮೇಲೆ ನಿಮಗೆ ಈ ಮಾತಿನ ರಹಸ್ಯವು ತಿಳಿಯುವುದು. " ಎಂದೆನ್ನುತ್ತ ಭೂದೇವಿಯು ಮರಕತ ಕಲಶದಲ್ಲಿ ರಸವನ್ನು ತುಂಬಿ ದೇವತೆಗಳಿಗಾಗಿ ಕೈಮಾಡಿ ಹಿಡಿದಿರುವಳೋ ಏನೋ ಎಂದೆನ್ನುವಂತೆ ತೆಂಗು ಶೋಭಿಸಿತು. (ಅಮರ್ದು + ಇನಿದಂ + ಇದರ + ಇನಿದಂ + ಎಲೆ + ಅಮರರ್.)

॥ ವಾರ್ಧಿಕಷಟ್ಪದಿ ॥

ಪಿಂಗದೆ ವಿಬುಧರೆನಿಸಿ, ಗುರುಪತ್ನಿಗಳುಪಿ ಲೋ।
ಕಂಗಳೊಳ್ ಕ್ಷಯರೋಗಿಯಾದನಂಗದ ರುಚಿಯ।
ನಂಗವಿಪರೇ? ನಿರ್ಜರತ್ವಮೆಂತೊಪ್ಪುದೆಂದವನಿ ಸತಿ ತಾನೆಸಲವಿನಿಂ ॥
ಕಂಗೊಳಿಪ ದಿವ್ಯ ರುಚಿಯಮೃತಮಂ ಪೊನ್ನಕಳ।
ಸಂಗಳೊಳ್ ತುಂಬಿ ಪಲ ಕೈಗಳಿಂ ಸುರರ್ಗೆಯು।
ತ್ತುಂಗತರದಿಂ ಪೆತ್ತಿ ಕೊಡುತಿರ್ದಪಳೊ ಎನಲ್ ತೆಂಗುಗಳ್
ಶೋಭಿಸಿದುವು ॥

(ಪಾಲ್ಕುರಿಕೆಯ ಸೋಮೇಶ್ವರ ಪುರಾಣ ೩-೧೧.)

[(ದೇವತೆಗಳಿರಾ, ನೀವು) ನಿಃಸಂಶಯವಾಗಿ ವಿಬುಧರೆನ್ನಿಸಿಕೊಂಡು, (೧ ಪಂಡಿತರು, ೨ ದೇವತೆಗಳು.) ಗುರುಪತ್ನಿಯಲ್ಲಿ ಆಸಕ್ತನಾಗಿ ಕ್ಷಯರೋಗ ಪೀಡಿತನಾದ (ಚಂದ್ರನ) ಶರೀರದ ಕಾಂತಿಗಳನ್ನು ಸವಿಯಬೇಕೇ? ನಿಮ್ಮ ನಿರ್ಜರತ್ವವು (ದೇವತ್ವವು, ಅಮೃತತ್ವವು) ಹೇಗೆ ಶೋಭಿಸೀತು? (ನಿಜವಾಗಿ ದೇವತ್ವವೂ,

ನಿರ್ಜರತ್ವವೂ ಬೇಕಾಗಿದ್ದರೆ ಈ ಅಮೃತವನ್ನು ಸವಿಯಿರಿ .) ಎಂದು ಪೃಥ್ವೀದೇವಿಯು ಪ್ರೀತಿಯಿಂದ ದಿವ್ಯವಾದ ಮಧುರಾಮೃತವನ್ನು ರಮಣೀಯವಾದ ಕನಕ ಕಲಶಗಳಲ್ಲಿ ತುಂಬಿ ಹಲವು ಕೈಗಳಿಂದ ದೇವತೆಗಳಿಗೆ ಔದಾರ್ಯದಿಂದತ್ತಿರುವಳೋ ಎಂಬಂತೆ ತೆಂಗುಗಳು ಶೋಭಿಸಿದುವು.]

(೧) ಚಂದ್ರನು ಬೃಹಸ್ಪತಿಯ (ಗುರುವಿನ) ಹೆಂಡತಿಯಾದ ತಾರಾದೇವಿಯನ್ನು ಅಪಹರಣ ಮಾಡಿದನು. ಬೃಹಸ್ಪತಿಯು ಬಹಳ ಧೈರ್ಯದಿಂದ ಎಷ್ಟೋಸಾರೆ ಕೇಳಿದರೂ ಅವಳನ್ನು ಅವನು ತಿರಿಗಿ ಕೊಡಲಿಲ್ಲ. ಕೊನೆಗೆ ಬೃಹಸ್ಪತಿಯ ತಂದೆಯಾದ ಅಂಗಿರಸನು ಬ್ರಹ್ಮಾಜ್ಞೆಯಿಂದ ಚಂದ್ರನ ಬಳಿಗೆ ಬಂದು ಬಹಳವಾಗಿ ಹೆದರಿಸಲು, ಚಂದ್ರನು ಗರ್ಭಿಣಿಯಾದ ತಾರೆಯನ್ನು ಅವನಿಗೆ ಒಪ್ಪಿಸಿದನು. ಈ ಪಾತಕದಿಂದ ಅವನಿಗೆ ಕ್ಷಯರೋಗವು ಪ್ರಾಪ್ತವಾಯಿತು.

(೨) ದಕ್ಷಬ್ರಹ್ಮನು ತನ್ನ ೨೭ ಕನ್ಯಕೆಯರನ್ನು ಚಂದ್ರನಿಗೆ ಕೊಟ್ಟು ಮದಿವೆ ಮಾಡಲು, ಅವನು (ಚಂದ್ರನು) ರೋಹಿಣಿಯೊಬ್ಬಳಲ್ಲಿಯೇ ಆಸಕ್ತನಾದನು. ಆದುದರಿಂದ ದಕ್ಷ ಬ್ರಹ್ಮನಿಗೆ ಸಿಟ್ಟು ಬಂದಿತು-ಅವನು “ ನೀನು ಕ್ಷಯರೋಗಿಯಾಗು ” ಎಂದು ಚಂದ್ರನನ್ನು ಶಪಿಸಿದನು. ಉಳಿದ ಕನ್ಯಕೆಯರು ದಕ್ಷಬ್ರಹ್ಮನನ್ನು ದೈನ್ಯದಿಂದ ಪ್ರಾರ್ಥಿಸಲು, ಅವನು “ ಕೃಷ್ಣ ಪಕ್ಷದಲ್ಲಿ ಕ್ಷಯವಾಗಲಿ; ಮತ್ತು ಶುಕ್ಲಪಕ್ಷದಲ್ಲಿ ಪುನಃ ತನ್ನ ಶರೀರವನ್ನು ಪಡೆಯಲಿ ” ಎಂದು ಅನುಗ್ರಹಿಸಿದನು.

ಚಂದ್ರನ ಕಲೆಗಳು ೧೬ ಅವು:-

“ ಅಮೃತಾ, ಮಾನದಾ, ಪೂಷಾ, ತುಷ್ಟಿಃ, ಪುಷ್ಟಿ, ರತಿರ್ಧೃತಿಃ |
ಶಶಿನೀ, ಚಂದ್ರಿಕಾ, ಕಾಂತಿಃ, ಜ್ಯೋತ್ಸ್ನಾ, ಶ್ರೀಃ, ಪ್ರೀತಿರೇವಚ ॥
ಅಂಗದಾ ಚ ತಥಾ ಪೂರ್ಣಾಮೃತಾ ಷೋಡಶವೈಕಲಾಃ ॥

ಕಾಮದಾಯಿನಿ

“ ಚಂದ್ರನ ಕಿರಣಗಳ ಅಮೃತಮಂ ಕೃಷ್ಣಪಕ್ಷದ ಪಾಡ್ಯ ಮೊದಲಮಾವಾಸ್ಯೆ ಪರಿಯಂತಮಾಗಿ ಅಗ್ನಿ ಮುಖ್ಯ ಸಕಲ ದೇವತೆಗಳುಂ, ಪಿತೃಗಣಂಗಳುಂ ಪಾನಮಂ ಮಾಡೆ ಕ್ಷಯವಾದ ಕಲೆಗಳಂ ಸೂರ್ಯನು ತನ್ನ ಸುಷುಮ್ನೆಯೆಂಬ ಕಿರಣ ಸೂತ್ರದಿಂ ಚಂದ್ರನಂ ಶುಕ್ಲಪಕ್ಷದ ಪಾಡ್ಯ ಮೊದಲು ಹುಣ್ಣಿಮೆಯ ಪರಿಯಂತರಂ ದಿನದಿನಕ್ಕೆ ವರ್ಧಿಸುತ್ತಿಹನು ”

(ನಿಜಗುಣ ಶಿವಯೋಗಿಗಳ-ವಿವೇಕ ಚಿಂತಾಮಣಿ)

ಇಂತಹ ದೋಷ ಯುಕ್ತವಾದ ಮತ್ತು ಕ್ಷಯರೋಗದಿಂದ ಪೀಡಿತನಾದ ಚಂದ್ರನ ಶರೀರವನ್ನು ಸವಿಯುವ ನೀವು ವಿಬುಧರೇ? (ದೇವತೆಗಳೇ? ಜ್ಞಾನವಂತರೆ?) ಇದರಿಂದ ನಿಮಗೆ ನಿರ್ಜರತ್ವವು (ಮುಪ್ಪಿಲ್ಲದಿರುವುದೂ, ಮರಣವಿಲ್ಲದಿರುವುದೂ) ಪ್ರಾಪ್ತವಾಗಬಹುದೇ? (ಆಗಲಾರದು.) ಆದರೆ ನಾನು ಕೊಡುವ ಈ ಅಮೃತವನ್ನು ಸವಿಯಲು ನಿಮಗೆ ವಿಬುಧತ್ವವೂ, ನಿರ್ಜರತ್ವವೂ ನಿಜವಾಗಿ ಪ್ರಾಪ್ತವಾಗುವವು. ಇನ್ನು ಮೇಲಾದರೂ ನಿಮ್ಮ ಮೂಢತನವನ್ನು ಬಿಡಿರಿ. ಎಂದು ಭೂದೇವಿಯು ತೆಂಗುಗಳೆಂಬ ಅಮೃತ ಕಲಶಗಳನ್ನು ಎತ್ತಿರುವಳೋ ಎಂಬಂತೆ ಫಲಭರಿತವಾದ ತೆಂಗಿನ ಮರಗಳು ಶೋಭಿಸಿದುವು.

॥ ಮತ್ತೇಭವಿಕ್ರೀಡಿತ ॥

ಪೊಗಳ್ವರ್ ದೇವಗೆ ದೇವರಿಂದು ಕಳೆಯಂ ನಿಸ್ಸಾರಮಂ ತಮ್ಮ ಪ ।
ತ್ತುಗೆಯಿಂದಂ ಪದಿನಾರನಲ್ಲಿ ಸವಿವರ್ ತಮ್ಮಲ್ಲಿ ಪುಲ್ಗಬ್ಬಿನಾ ॥
ವಗವೊಂದಂ ಸವಿವಂತೆ ತಾಮೆ ಜಗಕೆಲ್ಲಂ ದೇವರೆಂಬಂತೆ ಶೀ ।
ವುಗುಮುತ್ತಾನಿತ ವಿಕ್ಷುಯಂತ್ರ ನಿನದಂ ದಿಕ್ಕಾಮಿನೀ ಕರ್ಣಮಂ ॥

(ಮಲ್ಲಿನಾಥ ಪುರಾಣ ೨-೪೪.)

[ನಿಸ್ಸಾರವಾದ ಚಂದ್ರಕಲೆಯನ್ನು ಒಳ್ಳೇ ಮಧುರವೆಂದು ದೇವತೆಗಳು ಹೊಗಳುವರು. ದೇವತೆಗಳು ಅವನ ಹದಿನಾರು ಕಲೆಗಳನ್ನು (ಒಂದೊಂದನ್ನು) ಹಂಚಿಕೊಂಡು ಸವಿಯುವರು. ನಮ್ಮಲ್ಲಿಯ ರಸಭರಿತವಾದ ಒಂದು ಕಬ್ಬನ್ನಾದರೂ ಸವಿದು ನೋಡಿರಿ; ಜಗತ್ತಿಗೆಲ್ಲ ನಾವೇ ದೇವರು; ಎಂಬಂತೆ ಇಕ್ಷುಯಂತ್ರಗಳ (ಕಬ್ಬಿನ ಗಾಣಗಳ) ದನಿಯು ಮೇಲೆ ಹಬ್ಬಿ ದಿಕ್ಕೆಂಬ ಕಾಮಿನಿಯ ಕರ್ಣರಂಧ್ರವನ್ನು ತುಂಬಿ ಬಿಟ್ಟಿತು.] ವೀತಶೋಕಪುರದ ವನಗಳಲ್ಲೆಲ್ಲಿ ಮಂಜು ಮಧುರವಾದ ಇಕ್ಷುವಾಟಿಕೆಗಳಿದ್ದು, ಕಬ್ಬಿನ ಗಾಣಗಳು ಸತತವಾಗಿ ನಡೆಯುತ್ತಿದ್ದವು; ಮತ್ತು ಅವುಗಳ ದನಿಯು ಆಕಾಶವಲ್ಲೆಲ್ಲ ಹಬ್ಬಿತ್ತೆಂಬುದೇ ಇದರ ಭಾವವು.

(ಚಂದ್ರನು ಕ್ಷಯರೋಗ ಪೀಡಿತನೆಂಬುದನ್ನು ಹಿಂದಿನ ವಿವರಣೆಯಲ್ಲಿ ನೋಡಿಕೊಳ್ಳುವುದು.) ಅವನ ನಿಸ್ಸಾರವಾದ ಕಲೆಗಳನ್ನು ಸವೆಯುವವರು ದೇವತೆಗಳೇ? ಅಲ್ಲ. ಸಾರವುಳ್ಳ ತನಿಗಬ್ಬುಗಳನ್ನು ಸವಿಯುವ ನಾವುಗಳು ವಪತ್ರ ದೇವತೆಗಳು. ಎಂದು ಕಬ್ಬಿನ ಗಾಣಗಳು ಸಾರಿ ಹೇಳುತ್ತಿದ್ದವೆಂದು ಕವಿಯ ಅಭಿಪ್ರಾಯವು. ರಸ ತೆಗೆಯಬೇಕಾದರೆ, ಕಬ್ಬುಗಳನ್ನು ಗಾಣಗಳಲ್ಲಿ ಹಾಕುತ್ತಾರೆ. ಗಾಣವು ಕಬ್ಬಿನ ರಸವನ್ನು ಸವಿದಂತಾಯಿತು.

* ॥ ಕಂದ ॥

ಹರಿಯೊರ್ವೆ ಯಮರ್ದನೆ ಮರ ।
ಗೇರೆದೊಡೆ ನವ ಸುಧೆಯನೆರೆದಪೆವು ನಿಮಗನಿಶಂ ॥
ನರರಿತ್ತ ಬನ್ನಿ ಮೆನುತುಂ ।
ಕರೆವಂತಿರೆ ಮೊರೆವುವಿಕ್ಷು ಯಂತ್ರ ಪ್ರಚಯಂ ॥

' ಕೆಳದಿ ನೃಪ ವಿಜಯ ೩, ೧ ಪ. ೨೪. '

[ಓ ಜನರುಗಳಿರಾ, ಆ ಶ್ರೀ ವಿಷ್ಣುವು (ಎಂದೋಏನೋ) ಒಂದೇ ಒಂದು ಸಲ ಮಾತ್ರ ದೇವತೆಗಳಿಗೆ ಅಮೃತವನ್ನು ಕೊಟ್ಟಿರುವನು; ಆದರೆ ನಾವು ನೂತನ ವಾದ ಅಮೃತವನ್ನು ಯಾವಾಗಲೂ ನಿಮಗೆ ಕೊಡುವೆವು ಇತ್ತ ಕಡೆಗೆ ಬನ್ನಿ-ಬನ್ನಿ; ಎಂದೆನ್ನುತ್ತ (ಜನರನ್ನು ಕೂಗಿ) ಕರೆಯುವಂತೆ ಕಬ್ಬಿನ ಗಾಣಗಳು (ಎಲ್ಲೆಲ್ಲಿಯೂ) ಒದರುತ್ತಿದ್ದವು.] ಇಲ್ಲಿ ವಿಷ್ಣುವು ಮೋಹಿನೀರೂಪವನ್ನು ಧರಿಸಿ, ರಾಕ್ಷಸರನ್ನು ವಂಚಿಸಿ ದೇವತೆಗಳಿಗೆ ಅಮೃತವನ್ನುಣಿಸಿದ ಪೌರಾಣಿಕ ಕಥೆಯು ಸೂಚಿತವಾಗಿದೆ.

॥ ಕಂದ ॥

ನಳಿನ ಶರಂ ಸುಧೆಯಂ ಪೊಂ ।
ಗೊಳವಿಗಳೊಳ್ ತೀವಿ ಬೆಳ್ಳಿಯಂ ಬಿಗಿದು ಶುಕಂ ॥
ಗಳ ಕಾಪನಿಟ್ಟವೊಲ್ ಕಂ ।
ಗೊಳಿಕುಂ ಪುಂಡ್ರೇಕ್ಷು ದಂಡತತಿ ಗರ್ದೆಗಳೊಳ್ ॥

(ಚಿಕುಪಾಧ್ಯಾಯ- ಸಾಹಿತ್ಯ ಪರಿಷತ್ಪತ್ರಿಕಾ.)

[ಕಾಮನು ಮಧುರಾಮೃತ ರಸವನ್ನು ಬಂಗಾರದ ಕೊಳವೆಗಳಲ್ಲಿ ತುಂಬಿ ಬೆಳ್ಳಿಯ (ಕಟ್ಟುಗಳನ್ನು) ಬಿಗಿದು, ಗಿಳಿಗಳನ್ನು ಕಾವಲಿಗಿಟ್ಟನೆಂಬಂತೆ ಗದ್ದೆಗಳಲ್ಲಿ ಪುಂಡ್ರೇಕ್ಷು (ಕೆಂಪುಕಬ್ಬು) ಗಳ ಸಮೂಹವು ಕಂಗೊಳಿಸುವದು.]

ನಳಿನ--ಶರ (ಕಮಲವೇ ಬಾಣವಾಗಿ ಉಳ್ಳವನು.) ಈ ವಿಷಯವನ್ನು ಬೇರೊಂದು ಕಡೆಗೆ ಹೇಳಿದ್ದೇವೆ. ಎರಡು ಗಣಿಕೆಗಳು ಕೂಡಿರುವ ಸ್ಥಳದಲ್ಲಿರುವ ಗಂಟು ಬೆಳ್ಳಗಿರುವುದರಿಂದ ಬೆಳ್ಳಿಯ ಕಟ್ಟನಂತೆ ಕಾಣಿಸಿತು. ಗರಿಗಳು ಹಸುರಿರುವುದರಿಂದ ಗಿಳಿಗಳಹಾಗೆ ಕಂಡವು.

*॥ ಕಂದ ॥

ಜಲಜಜ ನಮರ್ದಂ ಬೆಳ್ಳಿಯ ।
ಕೊಳವಿಗಳೊಳ್ ತುಂಬಿ ಗಂಟನೊಂದಿಸಿ ಗರುಡಂ ॥
ಕಿಳಿಯದೊಲವನಿಳೆಯೊಳ್ನಿಲೆ ।
ಗೊಳಿಸಿದನೆನೆ ಮೆರೆದುದಮಳ ಪುಂಡ್ರೇಕ್ಷುವನಂ ॥

(ಲಿಂಗಣ್ಣನ ಕೆಳದಿ ನೃಪ ವಿಜಯ ೧।೨೬.)

[ಬ್ರಹ್ಮದೇವನು ಅಮೃತವನ್ನು ಬೆಳ್ಳಿಯ (ತಗಡಿನಿಂದ ಮಾಡಿದ) ನಲಿಕೆಗಳಲ್ಲಿ ತುಂಬಿ (ಅವುಗಳನ್ನು) ಗಂಟುಗಳಿಂದ (ಒಂದನ್ನೊಂದು) ಕೀಲಿಸಿ (ಅಮರ್ದುಗಳ್ಳನಾದ) ಗರುಡನಿಗೆ (ಎಂದೆಂದಿಗೂ ಈ ಸುದ್ದಿಯೂ ಕೂಡ) ತಿಳಿಯದಂತೆ (ಕರ್ಣಾಟಕ)ಭೂತಲದಲ್ಲಿ ತಂದು ನೆಟ್ಟನೋ ಎನೋ ಎಂದೆನ್ನುವಂತೆ ಕಬ್ಬುಗಳ (ಪಡ) ಗದ್ದೆಗಳು ಶೋಭಿಸಿದುವು.] ಈ ಪದ್ಯದಲ್ಲಿ ವರ್ಣನಾಚಮತ್ಕೃತಿಯಿದೆಯೆಂಬುದಿಷ್ಟೇ ಅಲ್ಲ; ನಮ್ಮ ಕರ್ನಾಟಕದ ಪ್ರಾಚೀನ ವೈಭವದ ಸುಂದರವಾದ ಚಿತ್ರವು ಸಂಪೂರ್ಣವಾಗಿ ಮೂಡಿದೆಯೆಂದು ನಮಗೆ ತೋರುತ್ತದೆ. ಅದು ಹೇಗೆಂದರೆ:-

(ಅ) ಬೇರೆ ಕಡೆಯಲ್ಲೆಲ್ಲಿಯಾದರೂ ಆವುದಾದರೊಂದು ಉಪಟಳವು ಬೆನ್ನುಹತ್ತಿತೆಂದರೆ, ಆಯಾ ಕಡೆಗಳ ಜನರು ಕರ್ನಾಟಕ ದೇಶದಲ್ಲಿ ಬಂದು ವಾಸಿಸಿ ಸುಖದಿಂದಿರುತ್ತಿದ್ದರು. (ಅಥವಾ ತಮ್ಮ ತೊಂದರೆಗಳನ್ನು ನೀಗುತ್ತಿದ್ದರು.) ಈ ಮಾತಿಗೆ ಎಣಿಕೆಯಿಲ್ಲದಷ್ಟು ಉದಾಹರಣೆಗಳಿವೆ. ಚಂದ್ರಗುಪ್ತನ ಕಾಲದಲ್ಲಿ ಉತ್ತರ ಹಿಂದುಸ್ಥಾನದೊಳಗೆ ೧೨ ವರುಷ ಬರ ಬೀಳಲು, ಅಲ್ಲಿಂದ ಬಂದ ಜೈನರು ಆವ ದೇಶದಲ್ಲಿ ಸುಖದಿಂದ ಕಾಲ ಕಳೆದರು? ಜೀವವನ್ನುಳಿಸಿಕೊಳ್ಳುವುದಕ್ಕಾಗಿ ಬಂದ ರಾಮಾನುಜಾಚಾರ್ಯರಿಗೆ ಆಶ್ರಯವನ್ನಿತ್ತು ಸತ್ಕರಿಸಿದ ಪುಣ್ಯಭೂಮಿಯು ಆವುದು? ಈ ನಮ್ಮ ಕರ್ಣಾಟಕ ಸುವರ್ಣ ಭೂಮಿಯನ್ನು ಆರು ಎಷ್ಟು ಹೊಗಳಿದರೂ ಸ್ವಲ್ಪವೇ.

(ಬ) ಪೂರ್ವ ಕಾಲದಲ್ಲಿ ಕರ್ಣಾಟಕದೊಳಗೆ ಕಳ್ಳ ಕಾಕರ ಸುಳಿವೇ ಇರಲಿಲ್ಲ. ಈ ಮಾತನ್ನಂತೂ ವಿಕ್ರಮಾಂಕ ದೇವ ಚರಿತೆಯು (೧೭-೩) ಘಂಟಾಘೋಷವಾಗಿ ಒಂದೇ ಧ್ವನಿಯಿಂದ ಸಾರಿಹೇಳುತ್ತಲಿದೆ. (ಕರ್ಣಾಟಕ ಗತವೈಭವ—ಪೃಷ್ಠ—೯೦)

(ಕ) ಕರ್ಣಾಟಕ ದೇಶವು ಫಲವತ್ತಾದ ಪ್ರದೇಶವು.

ಲಿಂಗಣ್ಣಕವಿಯು ಮೇಲಣ ಪದ್ಯದಲ್ಲಿ ಈ ಎಲ್ಲ ಸಂಗತಿಗಳನ್ನು ರಸಿಕರು ತಲೆದೂಗುವಂತೆ ಚಿತ್ರಿಸಿದ್ದಾನೆ.

ಗರುಡನು ತನ್ನ ತಾಯಿಯಾದ ವಿನತಾದೇವಿಯನ್ನು ದಾಸ್ಯದಿಂದ ಮುಕ್ತಗೊಳಿಸಲು ದೇವಲೋಕದಿಂದ ಅಮೃತವನ್ನೆತ್ತಿ ತಂದುದು ಪುರಾಣ ಪ್ರಸಿದ್ಧ. “ ಒಂದು ಸಲ ಅಮೃತವು ಹೋದರೂ ಹೋಗಲಿ, ಇನ್ನು ಮುಂದಾದರೂ ಹೋಗಬಾರದೆಂ”ದು ಬ್ರಹ್ಮದೇವನು ಅದನ್ನು ಕರ್ನಾಟಕ ದೇಶದಲ್ಲಿರಿಸಿ ಭದ್ರಪಡಿಸಿದನೆಂದು ಕವಿಯು ವ್ಯಂಗ್ಯ ಸರಣಿಯಿಂದ ಮನೋಹರವಾಗಿ ವರ್ಣಿಸಿದ್ದಾನೆ.

॥ ಕಂದ ॥

ಕದಳೀ ಗರ್ಭದೆ ವಿರಚಿಸಿ।
ಮದನಂ ಕುಪ್ಪಿಗೆಯನಲ್ಲಿ ಕುಳಿರ್ವಮರ್ದಂ ತೀ ॥
ವಿದನಡಕಲಿಟ್ಟ ನವನೆನಿ।
ಸಿದುವೆಸೆವ ಸಿತೇಕ್ಷುದಂಡ ಮಂಡಲಿ ಬನದೊಳ್ ॥

(ಮಲ್ಲಿನಾಥ ಪುರಾಣ—೨—೪೨.

[ಮದನನು ಸಣ್ಣ ಸಣ್ಣ ಕುಪ್ಪಿಗೆಗಳಲ್ಲಿ ಶೀತಲವಾದ ಅಮೃತವನ್ನು ತುಂಬಿ ಕದಳೀ ವನದ ಮಧ್ಯದಲ್ಲಿ ಒಂದರ ಮೇಲೊಂದನ್ನು ಸಾಲಾಗಿಟ್ಟ ನೆಂಬಂತೆ ಬಿಳಿಯ ಕಬ್ಬಿನ ಗಣಿಕೆಗಳ ಸಮೂಹವು ಆ ವನದಲ್ಲಿ ಶೋಭಿಸಿತು.]

ಕಬ್ಬು ಭರದಿಂದ ಬೆಳೆದಿದ್ದಿತು. ಪ್ರತಿಯೊಂದು ಕಬ್ಬಿಗೆ ರಸಭರಿತವಾದ ಎಷ್ಟೋ ಗಣಿಕೆಗಳಿದ್ದುವು. ಈ ಗಣಿಕೆಗಳೇ ಮದನನಿಂದ ಮಾಡಲ್ಪಟ್ಟ ಕುಪ್ಪಿಗೆಗಳು. ಕಬ್ಬಿನ ರಸವು ಮಧುರವಾದುದರಿಂದ ಅದನ್ನು ಅಮೃತಕ್ಕೆ ಹೋಲಿಸಿದೆ. ನೀರು ಬಹಳ ಮಧುರವಿದ್ದರೆ ನಾವು ಅದನ್ನು ಸಹಜವಾಗಿ ಅಮೃತಕ್ಕೆ ಹೋಲಿಸುತ್ತೇವೆ. ಹೀಗೆಂದ ಮೇಲೆ ಕಬ್ಬಿನ ರಸಕ್ಕೆ ಅಮೃತವೆಂದು ದರಲ್ಲಿ ಆಶ್ಚರ್ಯವಿಲ್ಲ. ವನವು ಬಹಳ ರಮಣೀಯವಾದುದಿದ್ದಿತು. ಎಲ್ಲಿ ರಮಣೀಯತೆಯೋ ಅಲ್ಲಿ ಮನ್ಮಥನು. ಇಕ್ಷು ವಾಟಿಕೆಯಂತೂ ಅವನ ಧನುಸ್ಸಿನಾಗರವು. ಆದುದರಿಂದ ಅವನು ಅಲ್ಲಿ ಪ್ರೀತಿಯಿಂದ ವಾಸಿಸುತ್ತಿರುವುದು ಸ್ವಾಭಾವಿಕವು. ಶೃಂಗಾರ ಶೇಖರನಾದ ಅವನು ವಿಲಾಸದಿಂದ ಕುಪ್ಪಿಗೆಗಳನ್ನು ಸಿದ್ಧ ಪಡಿಸಿ ಅವುಗಳಲ್ಲಿ ಅಮೃತವನ್ನು ತುಂಬಿ, ಒಂದರ ಮೇಲೊಂದನ್ನಡಕ ಲಿಟ್ಟನೆಂದು ವರ್ಣಿಸಿರುವುದು ಕವಿಯ ಮೇಲ್ಮೆಯನ್ನು ವ್ಯಕ್ತಪಡಿಸುತ್ತದೆ.

ಇಕ್ಷುದಂಡದ ಸುತ್ತಲೂ ಹಸುರು ಗರಿಗಳಿದ್ದುವು. ಅವು ಕದಳೀವನಗಳಂತೆ ಒಪ್ಪುತ್ತಿದ್ದುವು. ಅಮೃತರಸಕ್ಕೆ ಶೀತಲತ್ವ, ಮಾಧುರ್ಯ ಮೊದಲಾದುವುಗಳು ಟಂಗಲೆಂದು, ಕಾಮನು ಅದನ್ನು ತಂಪಾದ ನೆಳಲನೀವ ಕದಳೀ ವನದಲ್ಲಿ (ಗರಿಗಳ ಮಧ್ಯದಲ್ಲಿ) ಇಟ್ಟನು. ಬಾಳೆಯ ಎಲೆಗಳು ಅಗಲವಾಗಿರುವುದರಿಂದ ಅವುಗಳ ಕೆಳಗೆ ತಂಪು ಹೆಚ್ಚೆಂಬುದು ಅನುಭವ ಸಿದ್ಧವಾದ ಸಂಗತಿಯು.

॥ ಮಹಾ ಸ್ರಗ್ಧರಾ ॥

ರತಿಲಾಸ್ಯಪ್ರೌಢಿಯಂ ಕಂತುಗೆ ನೆರೆ ಮೆರೆಯಲ್ಪೂರ್ವರಂಗ ಪ್ರಸಂಗೋ।
ಚಿತಮಂ ಪುಷ್ಪಾಂಜಲಿ ಕ್ಷೇಪಮನೊಡರಿಸಲೆಂದಿರ್ಪುದುಂ ತತ್ಕ್ಷಣಪ್ರ ॥
ಸ್ತುತಮಂ ವಿಸ್ತೀರ್ಣಮಂ ಪಚ್ಚೆಯ ಜವನಿಕೆಯೆಂಬಿರ್ಕೆದಂತಿರ್ದುದುಜ್ಜೃಂ
ಭಿತ ರಂಭಾಸಸ್ಯ ಪೂಗೀವನ ವೃತಿಹರಿತಾಕಾಶ ಮುದ್ಯಾನದೇಶಂ ॥

(ಮಲ್ಲಿನಾಥ ಪುರಾಣ. ಆ ೫-೭೯)

ಇದು ಲೀಲೋದ್ಯಾನದ ಮನೋಹರವಾದ ಚಿತ್ರವು.

[ರತಿಯ ಲಲಿತವಾದ ನರ್ತನಕೌಶಲ್ಯದ ಕೌತುಕವನ್ನು ಅವಳ ನಲ್ಲನಾದ ಕಾಮದೇವನಿಗೆ ತೋರಿಸಲಿಕ್ಕೆಂದು, ಪೂರ್ವರಂಗದ ರಚನೆಗೆ ಉಚಿತವಾದ ಪುಷ್ಪಾಂಜಲಿಯನ್ನು (ಹೂ ಬೊಗಸೆಯನ್ನು) ಚೆಲ್ಲಲು ಉದ್ಯುಕ್ತವಾಗಿದ್ದು, ಆ ಕ್ಷಣಕ್ಕೆ ಬೇಕಾದ ಹಸರುಬಣ್ಣದ ಹರವಾದ ತೆರೆಯನ್ನು (ಪಡದೆ) ಬಿಚ್ಚಿ ಇಳಿಬಿಟ್ಟಂತೆ, ಭರದಿಂದ ಬೆಳೆದ ಕದಳೀವನ (ಬಾಳೆಯ ಬನ), ಪೂಗೀವನ [ಅಡಿಕೆಯ ಬನ], ಸಸ್ಯರಾಜಿ, ಮೊದಲಾದವುಗಳ ಹಸರು ಕಾಂತಿಯನ್ನು ಆಕಾಶದಲ್ಲೆಲ್ಲ ಹಬ್ಬಿಸಿ ಉದ್ಯಾನ ದೇಶವು ಕಂಗೊಳಿಸಿತು.]

ನಾಟಕಾರಂಭದಲ್ಲಿ ವಿಘ್ನಪರಿಹಾರಾರ್ಥವಾಗಿ ಪೂರ್ವರಂಗವನ್ನು ಸಿದ್ಧಪಡಿಸುವದಕ್ಕೆ ಸೂತ್ರಧಾರನು ನಾಟ್ಯಾಧಿದೇವತೆಗೆ ಪುಷ್ಪಾಂಜಲಿಯನ್ನು ಸಮರ್ಪಿಸುವಂತೆ ಇಲ್ಲಿ ವನದೇವತೆಯು. ರತಿದೇವಿಯ ಲೀಲಾಲಾಸ್ಯದ ಪೂರ್ವರಂಗರಚನೆಗೆ ಹೂವಿನ ಗಿಡಗಳ ಪುಷ್ಪಗಳನ್ನು ಹಸ್ತಪಲ್ಲವಗಳಲ್ಲಿ ಧರಿಸಿಕೊಂಡು ನಿಂತಿರುವಳೆಂದೂ, ಕದಲೀವನ, ಪೂಗೀವನ ಮೊದಲಾದವುಗಳ ಆಕಾಶದ ವರೆಗೆ ಹಬ್ಬಿದ ಹಸರು ಕಾಂತಿಯು ತೆರೆಯಂತೆ ಶೋಭಿಸುವದೆಂದೂ, ಉದ್ಯಾನವು ರತಿಯ ನೃದುಲೀಲಾ ಲಾಸ್ಯ ಶಾಲೆಯೆಂದೂ ವರ್ಣಿಸಿ ಕವಿಯು ತನ್ನ ಕವಿತಾಪ್ರೌಢಿಯನ್ನು ವ್ಯಕ್ತಪಡಿಸಿದ್ದಾನೆ.

॥ ಕಂದ ॥

ಮಧು ಬಂದುದೆಂದು ನಳಿನೀ ।
ವಧು ವಿರಚಿಸಿದರ್ಘ್ಯ ಪೂರ್ಣಹಸ್ತಾಕೃತಿಯಿಂ ॥
ಮಧುಬಿಂದು ಪೂರ್ಣಮೆಸೆದುದು ।
ಮಧುಕರ ನೀಲಾಂಗುಳೀಯಕಂ ಕೋಕನದಂ ॥

(ಮಲ್ಲಿನಾಥ ಪುರಾಣ ೫-೪)

[ವಸಂತನು ಬಂದನೆಂದು (ಸಂಭ್ರಮದಿಂದ ಅವನ ಸ್ವಾಗತಕ್ಕಾಗಿ) ಕಮಲಿನಿಯು ರಚಿಸಿದ ಅರ್ಘ್ಯಪೂರ್ಣವಾದ ಹಸ್ತವೋ ಎಂಬಂತೆ ಮಧುಕರಗಳೆಂಬ (ದುಂಬಿಗಳೆಂಬ) ನೀಲಾಂಗುಲೀಯಕ (ನೀಲ ವರ್ಣದ ಬೆರಳು) ವುಳ್ಳುದಾದ ಕೆಂದಾವರೆಯು ಮಕರಂದ ಬಿಂದುಗಳಿಂದ ತುಂಬಿದುದಾಗಿ ಶೋಭಿಸಿತು.]

ವಸಂತ ಮಾಸವು ಪ್ರಾಪ್ತವಾಯಿತೆಂದರೆ ಕಮಲಿನಿಯು ಪುಷ್ಪಗಳಿಂದ ಭರಿತಳಾಗುತ್ತಾಳೆ; ಪುಷ್ಪಗಳಲ್ಲಿ ಸಾಂದ್ರವಾದ ಮಕರಂದವು ಒಟ್ಟಾಗುತ್ತದೆ. ಮಧುಕರಗಳು ಮಕರಂದಲೋಲುಪತೆಯಿಂದ ಕಮಲ ಪುಷ್ಪಗಳಿಗೆ ಎರಗುತ್ತವೆ.

ಕವಿಯು ಈ ಪ್ರಕಾರ ಎರಗಿದ ಮಧುಕರಗಳನ್ನೇ ನಲಿನೀವಧುವಿನ ಕೋಕನದ (ಕಮಲ) ಹಸ್ತಕ್ಕೆ ನೀಲಾಂಗುಲೀಯಕಗಳೆಂದು ಉತ್ಪ್ರೇಕ್ಷಿಸಿದ್ದಾನೆ.

ವಸಂತನು ಬಹಳ ದಿವಸಗಳಾದ ಮೇಲೆ ಬಂದವನು. ಆದುದರಿಂದ ಅವನನ್ನು ಅರ್ಘ್ಯದ್ರವ್ಯಗಳಿಂದ ಅರ್ಚಿಸುವದು ಆಚಾರ ವಿಹಿತವೇ. ವಿಶಿಷ್ಟಾಭ್ಯಾಗತನು ಮನೆಗೆ ಬಂದಾಗ ಗೃಹಸ್ಥನು ಅರ್ಘ್ಯಹಸ್ತನಾಗಿ ಅವನನ್ನು ಆದರ ಪೂರ್ವಕವಾಗಿ ಅರ್ಚಿಸುವಂತೆ, ನಲಿನೀವಧುವು ಗೃಹಿಣೀ ಧರ್ಮವನ್ನು ನೆನೆದು ಮಧುಬಿಂದುವೆಂಬ ಅರ್ಘ್ಯವನ್ನು ಕೋಕನದವೆಂಬ ಹಸ್ತದಲ್ಲಿರಿಸಿ ವಸಂತನೆಂಬ ಅತಿಥಿಯನ್ನು ಆನಂದದಿಂದ ಅರ್ಚಿಸಲು ಉದ್ಯುಕ್ತಳಾಗಿರುವಂತೆ ಕವಿಯು ಚಾತುರ್ಯದಿಂದ ವರ್ಣಿಸಿರುವನು.

॥ ಕಂದ ॥

ಬಂದ ಬಸಂತಂಗಂದರ ।
ವಿಂದಿನಿ ಸೇಸಿಕ್ಕಲೆಂದು ನೆಗಪಿದ ಹಸ್ತ ॥
ಕ್ಕೇಂ ದೊರೆವಂದುವೊ ಜಲ ಲವ ।
ದಿಂದೆಸೆವುನ್ನಾಳ ವಿಕಚ ಕೋಕನದಂಗಳ್ ॥

(ಚಂದ್ರಪ್ರಭ ಪುರಾಣ-೭-೫೯)

[ಬಂದ ವಸಂತನಿಗೆ ಅಂದು ಕಮಲಿನಿಯು ಸೇಸೆದಳೆಯಲೆಂದು (ಶೇಷಾಕ್ಷತೆಗಳನ್ನಿಕ್ಕಲೆಂದು) ಎತ್ತಿದ ಹಸ್ತಗಳಂತೆ ಜಲಬಿಂದುಗಳಿಂದ ಶೋಭಿಸುವ ನಿಡಿದಾದ ದೇಟುಳ್ಳ ಅರಳಿದ ಕೆಂದಾವರೆಗಳು ಒಳ್ಳೇ ರಮಣೀಯವಾಗಿ ಶೋಭಿಸಿದುವು.]

॥ ಉತ್ಪಲ ಮಾಲಾ ॥

ಬಂದಿರೆ ಮಾಮರಂಗಳಿರ ಮಲ್ಲಿಗೆ ಬಂದಿರೆ ಕೋಕಿಲಾಳಿನೀ ।
ವೃಂದಮೆ ಬನ್ನಿಮಿತ್ತ ಶುಕ ನೀಂ ಸೊಕಮೋ ರಜನೀಂದ್ರ ಚಂದ್ರ ಸೈ ॥
ಪಿಂದಮೆ ಬಂದಿರೇ ಕುಶಲಮೇ ನಿಮಗೆಂದು ಮಧುಪ್ರವೇಶದೊಳ್ ।
ಬಂದು ಮನೋಜನೇನನಿತುಮಂ ಪೆಸಗೊಂಡನೊ ಕೂಡಿಕೊಂಡನೋ॥

(ಅಜಿತನಾಥ ಪುರಾಣ—೬—೧೪)

["ಮಾಮರಂಗಳಿರ, ಬಂದಿರೇ? ಮಲ್ಲಿಗೆಗಳಿರ, ಬಂದಿರೇ? ಕೋಕಿಲಗಳೇ, ಹೆಣ್ದುಂಬಿಗಳೇ, (ನೀವೆಲ್ಲರೂ) ಇತ್ತ ಬನ್ನಿ. ಗಿಳಿಯೇ ನಿನಗೆ ಕ್ಷೇಮವಷ್ಟೇ. ರಜನೀವಲ್ಲಭ (ಇರುಳಿಗೊಡೆಯ) ನಾದ ಚಂದನೇ, ಸುಖದಿಂದ ಬಂದೆಯಾ?

ನಿನುಗೆಲ್ಲರಿಗೂ ಕುಶಲವೇ? " ಎಂದು ವಸಂತದ ಆರಂಭದಲ್ಲಿ ಕಾಮದೇವನು ಎಲ್ಲರನ್ನು ಪ್ರೇಮದಿಂದ ಹೆಸರುಗೊಂಡು ಕರೆದನು; ಮತ್ತು ಅವರನ್ನು ಕೂಡಿಕೊಂಡನು.] ಮಾಮರ, ಮಲ್ಲಿಗೆ, ಕೋಕಿಲ, ಪೆಣ್ದುಂಬಿ, ಗಳಿ ವಸಂತ ಇವೆಲ್ಲವುಗಳು ಮನೋಜನ (ಕಾಮನ) ಪರಿವಾರವು.

॥ ಚಂಪಕ ಮಾಲಾ ॥

ಕಳಿಕೆಗಳೆಂಬ ಹರ್ಷಪುಳಕಾವಳಿಯಂ ತಳೆದಿರ್ಪಳಾಮ್ರಕೋ ।
ಮಳೆ ಮಧುಪಾವಳೀನಿನದಮೆಂಬ ಕಳಧ್ವನಿಯಿಂದ ಮಲ್ಲಿಕಾ ॥
ಲಳನೆ ಕಱಂಗಿ ಪಾಡಿದಪಳಬ್ಜಿನಿ ತನ್ನ ಪರಾಗವೆಂಬ ತಂ ।
ಬುಳಮುಗೆ ನಕ್ಕಪಳ್ ವಿಕೃತಿಯಂ ಮಧುಸಂಗತಿ ಮಾಡದಿರ್ಕುಮೇ ॥

[ರುದ್ರಭಟ್ಟ, ಜಗನ್ನಾಥ ವಿಜಯ ೧೪-೨೩]

[ವಸಂತವು ಪ್ರಾಪ್ತವಾದ ಕೂಡಲೆ ಆಮ್ರಕೋಮಳೆಯು ಮೊಗ್ಗುಗಳೆಂಬ ಹರ್ಷರೋಮಾಂಚಸಮೂಹವನ್ನು ತಳೆದಳು. ಭ್ರಮರಕುಲದ ಝೇಂಕಾರವೆಂಬ ಮಂಜುಲಸ್ವರದಿಂದ ಮಲ್ಲಿಕಾಲಲನೆಯು ಅನುರಾಗವುಳ್ಳವಳಾಗಿ ಕಿವಿಗಿಂಪಾಗಿ ಹಾಡಿದಳು. ಕಮಲಿನಿಯು ತನ್ನ ಪುಷ್ಪಧೂಳಿಯೆಂಬ ತಾಂಬೂಲವು ಹೊರ ಚೆಲ್ಲಲು ಮಂದವಾಗಿ ಹಾಸ್ಯ ಮಾಡಿದಳು ಮಧುಸಂಗತಿಯು (ವಸಂತ ಋತುವಿನ ಸಹವಾಸವು (೨) ಮದ್ಯಪಾನವು) ವಿಕಾರವನ್ನು ಮಾಡದಿರುವುದೇ?]

ಈ ಮಧುಸಂಗತಿಯು ಓದಿದಾಗ ವಸಂತ ಋತುವಿನಲ್ಲಿ ವನರಾಮಣೀಯಕತೆಯನ್ನು ನಾವೇ ಹೋಗಿ ಸಾಕ್ಷಾತ್ತಾಗಿ ನೋಡಿ ಅನುಭವಿಸುವಾಗ ಹೇಗೋ ಅದಕ್ಕಿಂತ ಅತಿಶಯವಾಗಿ ನಮಗೆ ' ವಿಕೃತಿಯಂ ಮಾಡದಿರ್ಕುಮೆ ' ಹೇಳಿ ಹೇಳಿ

ಮಧುಸಂಗತಿಯಿಂದ [ಮದ್ಯಪಾನವನ್ನು ಮಾಡಿದ] ಮನುಷ್ಯನು ವಿಕಾರವಶನಾಗಿ ಹಾಡುವನು; ನಗುವನು; ಕುಣಿಯುವನು; ಮತ್ತು ಅನೇಕ ಚೇಷ್ಟೆಗಳನ್ನು ಅಭಿನಯಿಸುವನು ಅವನ ಮೈಮೇಲೆ ರೋಮಾಂಚಗಳು ಮೂಡುವವು. ಅದರಂತೆಯೇ ಮಧುಸಂಗತಿಯಿಂದ (ವಸಂತ ಋತುವಿನಿಂದ) ಆಮ್ರಲಲನೆಯು ರೋಮಾಂಚಿತಳಾದಳು; ಮಲ್ಲಿಕೆಯು ಹಾಡಿದಳು; ಅಬ್ಜಿನಿಯು ನಕ್ಕಳು; ಎಂದು ಕವಿಯು " ಮಧು " ಎಂಬ ಶ್ಲಿಷ್ಟ ಪದವನ್ನು ಪ್ರಯೋಗಿಸಿ ವರ್ಣಿಸಿದ್ದಾನೆ.

ಸುಮ್ಮನೆ 'ವಸಂತಮಾಸವು ಪ್ರಾಪ್ತವಾಯಿತು ಆಮ್ರವೃಕ್ಷಕ್ಕೆ ಮೊಗ್ಗುಗಳು ಬಂದವು. ಮಲ್ಲಿಕಾಲತೆಯಲ್ಲಿ ಭ್ರಮರ ರವವು. ಕೇಸರಪತ್ತಿತು. ಕಮಲಪುಷ್ಪ

ದಲ್ಲಿ ಪರಾಗವು ತುಂಬಿ ಹೊರಚಲ್ಲ ಹತ್ತಿತು." ಎಂದು ಹೇಳಿ ವಸಂತಸನ್ನುಯವ ನ್ನು ವರ್ಣಿಸುವದಕ್ಕೂ, ಮೇಲೆ ಹೇಳಿದಂತೆ ವರ್ಣಿಸುವದಕ್ಕೂ ಇರುವ ಅಂತರ ವನ್ನು ವಾಚಕರೇ ತಿಳಿಯಬಹುದು.

॥ ಚಂಪಕಮಾಲಾ ॥

ವಿಲಸದಶೋಕ ಪಲ್ಲವ ತಲಂ ವಿಕಚಾಬ್ಜದಳಾಕ್ಷಿ ಮತ್ತ ಕೋ।
ಕಿಲ ಕಲ ನಿಸ್ವನಂ ಸಕಲ ಚಂದ್ರವಿಲಾಸ ಮುಖಂ ಸಸೌರಭಾ ||
ನಿಲ ರಮಣೀಯ ನಿಶ್ವಸಿತಮುಸ್ಥಿರ ಭೃಂಗ ಚಲಾಲಕಂ ಮನಂ।
ಗೊಳೆ ಪರಿಪೂರ್ಣಮಾಯ್ತು ನವಯೌವನೆಲಕ್ಷ್ಮಿ ವಸಂತ ಲಕ್ಷ್ಮಿಯಾ॥

(ಅಜಿತನಾಥ ಪುರಾಣ-೬-೨೭)

[ಸುಂದರವಾದ ಅಶೋಕದ ಚಿಗುರೆಲೆಯೇ ವಸಂತ ಲಕ್ಷ್ಮಿಯ ಹಸ್ತ ತಲವು. ಅರಳಿದ ಕಮಲದ ಎಸಳುಗಳೇ ನೇತ್ರಗಳು. (ಮಾವಿನ ಕೊನರನ್ನು ಸವಿದು) ಉನ್ಮತ್ತವಾದ ಕೋಕಿಲೆಯ ಮಂಜುಲವಾದ ಧ್ವನಿಯೇ ಆಲಾಪವು. (ಷೋಡಶ) ಕಲೆಗಳಿಂದ ಕೂಡಿದ ಚಂದ್ರನೇ ವಿಲಾಸವುಳ್ಳ ಮುಖವು. ಸುಗಂಧ ದಿಂದ ಕೂಡಿದ (ಮಂದ) ಮಾರುತನೇ ಮನೋಹರವಾದ ನಿಶ್ವಾಸವು. ಅಲೆ ದಾಡುವ ತುಂಬಿಗಳೇ ಚಂಚಲವಾದ ಕೇಶಪಾಶವು. (ಇವೆಲ್ಲವುಗಳು) ಹೃದಯಂಗಮವಾಗಿರಲು (ವಸಂತ ಲಕ್ಷ್ಮಿಯ) ನವಯೌವನದ ಸೊಬಗು ಪರಿಪೂರ್ಣವಾಯಿತು.]

॥ ಭಾಮಿನೀ ಷಟ್ಪದಿ ॥

ಬಿಲ್ಲನಾಂತಾ ಸ್ಮರನ ಕೇತನ।
ಮಲ್ಲದೊಡೆ ಋತು ಲಕ್ಷ್ಮಿಯಾನನ।
ದಲ್ಲಿ ಸವಿಯುವ ಚೂರ್ಣವೆಂಬಂದದಲಿ ಬೆಳಗುತಿಹ ॥
ಫುಲ್ಲ ಸುಮಧೂಳಿಯನು ಪವನನು।
ಮೆಲ್ಲನೆಸಗೊತ್ತೊಯ್ಯುತಿಹ ಪಥ।
ದಲ್ಲಿ ಮುದದಿಂ ಪೋಗುತಿರ್ದುದು ದುಂಬಿಗಳ ಗಡಣ ॥

[ಶ್ರೀರಾಮ ಚರಿತೆ (ರಘುವಂಶದ ಭಾಷಾಂತರ) ೯-೪೫]

[ಅರಳಿದ ಹೂಗಳ ಹುಡಿಯು ಧನುರ್ಧಾರಿಯಾದ ಮನ್ಮಥನ ಧ್ವಜ ಪಟದಂತೆಯೂ (ವಸಂತ) ಋತು ಲಕ್ಷ್ಮಿಯು ಮುಖದಲ್ಲಿ ಸವಿಯುವ ಮಧುರ

ವಾದ (ಕರ್ಪೂರ ಮೊದಲಾದ ಸುಗಂಧ ದ್ರವ್ಯದ) ಚೂರ್ಣದಂತೆಯೂ ಶೋಭಿಸುತ್ತಲಿದ್ದಿತು. ಮಂದ ಮಾರುತನು ಆ ಹೂವಿನ ಸುಗಂಧವನ್ನು ತೆಗೆದು ಕೊಂಡು ಸುಳಿಯುತ್ತಿರಲು, ಪರಿಮಳ ಲೋಭದಿಂದ ತುಂಬಿಗಳ ಸಮೂಹವು (ಆ ಗಾಳಿಯ ಮಾರ್ಗದಲ್ಲಿಯೇ) ಆನಂದದಿಂದ ಸಂಚರಿಸುತ್ತಲಿದ್ದಿತು.]

॥ ವಾರ್ಧಕ ಷಟ್ಪದಿ ॥

ಮಲ್ಲಿಗೆಯ ಪುಷ್ಪರಸಮಂ ಸೋಂಕುತೀಂಟುತುಂ।
ಮೊಲ್ಲೆಯ ಪರಾಗಮಂ ತೆಗೆದು ತೇಂಕಾಡುತಂ।
ಉಲ್ಲಾಸದೊಳ್ ಕೇತಕಿಯ ಮೇಲಡರ್ದು ಪಾಟಲದ
ಸೌರಭವ ಪೀರ್ದು ॥

ನಿಲ್ಲದಾ ವನದೊಳ್ ತಿರುಕ ನಿಕರದಂತೆ ತಣಿ।
ವಿಲ್ಲದರೆಗಳಿಗೆಯುಂ ನಿಲ್ಲದಾ ಕುಸುಮಂಗ।
ಳಲ್ಲಿ ಭೃಂಗಾಳಿಗಳ್ ಝೇಂಕಾರಮಂ ಗೈದುವಾನಂದವಿಮ್ಮಡಿಸಲು॥

(ರುಕ್ಮಾಂಗದ ಚರಿತೆ [ಲಕ್ಷ್ಮಕವಿ] ಸಾಹಿತ್ಯ ಪ. ಪತ್ರಿಕಾ.)

[ಮಲ್ಲಿಗೆಯ ಪುಷ್ಪರಸವನ್ನು ಕುಡಿಯುತ್ತಲೂ, ಮೊಲ್ಲೆಯ ಪರಾಗವನ್ನು ಹರಡಿ ಅದರಲ್ಲಿ ತೇಲಾಡುತ್ತಲೂ, ಉಲ್ಲಾಸದ ಭರದಿಂದ ಕೇತಕೀ ಪುಷ್ಪಕ್ಕೆ (ಮಕರಂದ ಲೋಲುಪತೆಯಿಂದ) ಅಡರಿ, ಪಾಟಲದ ಪರಿಮಳವನ್ನು ಹೀರಿ, ಆ ವನದಲ್ಲಿ ಒಂದರಕ್ಷಣವಾದರೂ ವಿಶ್ರಾಂತಿಯಿಲ್ಲದೆ ಭಿಕ್ಷುಕರ ಸಮೂಹದಂತೆ ತುಂಬಿಗಳು ತೃಪ್ತಿಯಿಲ್ಲದೆ ಮೃದು ಮಧುರ ಝೇಂಕಾರವನ್ನು ಮಾಡುತ್ತ, ಆನಂದವಿಮ್ಮಡಿಸಲು ಹೂಗಳಲ್ಲಿ ವಿಲಾಸ ಕೇಳಿಯನ್ನು ವಿಸ್ತರಿಸಿ ನಲಿದುವು.] ಈ ವರ್ಣನೆಯನ್ನೋದಿದೊಡನೆ ನಮ್ಮ ಅಂತಃಕರಣವು ಆನಂದ ಪರವಶವಾಗುತ್ತದೆ. ಆ ತುಂಬಿಯೊಡನೆ ನಾವಾದರೂ ಕೇತಕೀ ವನದಲ್ಲಿ ಸಂಚರಿಸುತ್ತೇವೆ; ಮಲ್ಲಿಕಾ ಪುಷ್ಪದ ಮಕರಂದವನ್ನು ಸವಿಯುತ್ತೇವೆ; ಪಾಟಲದ ಪರಿಮಳವನ್ನು ಆಘ್ರಾಣಿಸುತ್ತೇವೆ; ಬಕುಳ ಕುಸುಮದ ಆಮೋದವನ್ನು ಉಪಭೋಗಿಸುತ್ತೇವೆ; ಮೊಲ್ಲೆಯ ಹುಡಿಯನ್ನು ಎಲ್ಲೆಲ್ಲಿಯೂ ಹರಡುತ್ತೇವೆ; ನಾವು ಕ್ಷಣ ಹೊತ್ತು ಬಾಹ್ಯ ಪ್ರಪಂಚವನ್ನು ಮರೆತು ತುಂಬಿಯೊಡನೆ ತನ್ಮಯತ್ವವನ್ನು ಹೊಂದುತ್ತೇವೆ.

ಒಂದು ಪುಷ್ಪದಿಂದ ಮತ್ತೊಂದು ಪುಷ್ಪಕ್ಕೆ ಮಕರಂದಕ್ಕಾಗಿ ಹಾರಾಡುವುದು ಭ್ರಮರದ ಸ್ವಭಾವ. ಆದ್ದರಿಂದಲೇ ಅದಕ್ಕೆ "ಮಧುಕರ" (ಮಕರಂದವನ್ನು ಸಂಗ್ರಹಿಸುವಂತಹದು) ಎಂಬ ಹೆಸರು ಬಂದಿದೆ.

॥ ಚಂಪಕ ಮಾಲಾ ॥

ಎಳದಳಿರಂ ಕರ್ಮುಗಂಕಿ ಕನರೊಂದಿದ ತದ್ರಸವಿಾಂಟಿದತ್ತು ಕೋ।
ಕಿಳಿನಳಿ ಧೂಳಿಯೊಳ್ಪೆರೆದ ಪುಷ್ಪರಸಂಗಳನುಂಡುದಿಲ್ಲಿ ಕೇಳ್ ॥
ಗಿಳಿಯು ಪೊಲೇನಿವೆಲ್ಲವಿನಿವಣ್ಣಿನಿವಂ ಸವಿದಪ್ಪುವೇಯೆನು।
ತ್ತೆಳಸಿ ಮನೋಜನಿಟ್ಟನಿದು ಪಂಡಿತವಕ್ಕಿಯೆನುತ್ತೆ ನಾಮಮಂ ॥

(ರಾಜಶೇಖರ ವಿಳಾಸ—೯--೨೯)

[ಚಿಗುರೆಲೆಯನ್ನು ಕರ್ಮುಗಂಕಿ (ಕಚ್ಚಿ) ಕನರಿನಲ್ಲಿರುವ ರಸವನ್ನು ಕೋಗಿಲೆಯು ಹೀರಿಕೊಂಡಿತು. ಭೃಂಗವು ಧೂಳಿಯಿಂದ ಕೂಡಿದ ಪುಷ್ಪ ರಸವನ್ನು ಈಯೆಡೆಯಲ್ಲಿ ಕುಡಿಯಿತು. ಇವುಗಳು ಗಿಳಿಯಂತೆ ಪಕ್ವ ಮಧುರ ವಾದ ಹಣ್ಣುಗಳಲ್ಲಿಯ ಅಮೃತವನ್ನು ಸವಿಯ ಬಲ್ಲವೇ? ಎಂದು ಕಾಮನು ಗಿಳಿಗೆ ಪ್ರೀತಿಯಿಂದ '' ಪಂಡಿತವಕ್ಕಿ '' ಯೆಂಬ ಹೆಸರನ್ನು ಕೊಟ್ಟನು.]

ಒಂದು ರಸಾಲ ಸರಳ ಶಾಖಾಗ್ರದೊಳ್ ತನಿವಣ್ಣಂ ಮನದನ್ನಳೊಡನೆ ಸವಿಯುವ ಅರಗಿಳಿಯಂ ನಿಜಾಪಾಂಗ ಪಲ್ಲವದಿಂ ನಲ್ಲಳಿಗೆ ತೋರಿ, 'ಕೊನ ರನೆ ಕೊಕ್ಕಿನಿಂ ಸೆಳೆದು ಖಂಡಿಸಿ ಸೋರುವ ರಸಪ್ರವಾಹವನ್ನು ಈ ಪಿಕವು ಕುಡಿಯಿತು; ಭೃಂಗವು ಹುಡಿಯಿಂದ ಕೂಡಿದ ಕುಸುಮ ರಸವನೀಂಟಿತು, ಇವುಗಳಿಗೆ ಸ್ವಾರಸ್ಯಜ್ಞಾನವಿಲ್ಲ. ಪಕ್ವವಾದ ಮಧುರಾಮ್ರಗಳ ಅಮೃತ ರಸ ವನ್ನು ಸವಿಯಬೇಕೆಂಬ ವಿಚಾರವೂ ಕೂಡ ಇವುಗಳಿಗೆ ಬರಲಿಲ್ಲ. ಆದರೆ ಗಿಳಿಯು ಮಾತ್ರ ರಸಿಕತನದಿಂದ ಆಮ್ರ ಫಲದ ಮಧುರ ರಸವನ್ನೇ ಸವಿಯಿತು. ಆದುದರಿಂದಲೇ ಮದನನು ಪ್ರೇಮದಿಂದ ಅದಕ್ಕೆ ' ಪಂಡಿತವಕ್ಕಿ, (ಸಾರಾ ಸಾರಜ್ಞ) ಎಂಬ ಹೆಸರನ್ನು ಕೊಟ್ಟಿದ್ದಾನೆ. ನೋಡು. ನೋಡು, " ಎಂದು ಒಬ್ಬ ವಿಲಾಸಿಯು ನುಡಿದನು. " ಕನ್ನಡ ವಕ್ಕಿ ಮರಳಿ ಪಂಡಿತವಕ್ಕಿ ಗಿಳಿ ಯಕ್ಕು " (ಕರ್ಣಾಟಕ ಶಬ್ದ ಮಂಜರಿ.)

॥ ಕಂದ ॥

ಬಿಗಿಯುಪ್ಪಿ ಮೊಗಮನಿಟ್ಟಾ।
ಲಿಗಳಂ ನಸುಮುಚ್ಚಿ ಪಕ್ಷಯುಗಮೆಳಲೆ ರಸಂ ॥
ಡೆಗೆವ ದನಿ ನಿಮಿರೆ ನಾಲಗೆ।
ಚಿಗುರುತ್ತಿರೆ ಸವಿದುವೊಂದು ಗಿಳಿ ತನಿವಣ್ಣಂ ॥

[ಗಿರಿಜಾ ಕಲ್ಯಾಣ-೨-]

[ಒಂದು ಗಿಳಿಯು ಮಧುರವಾದ ಮಾವಿನ ಹಣ್ಣನ್ನು ಆನಂದಾತಿಶಯ ದಿಂದ ಮೊದಲು ಬಿಗಿಯಾಗಿ ಅಪ್ಪಿತು. ಆ ಬಳಿಕ ಹತ್ತಿಕ್ಕಿ ಮುಖವನ್ನಿಟ್ಟಿತು. ಮತ್ತಿಷ್ಟು ಆನಂದವುಂಟಾಗಲು ಅದರ ಕಣ್ಣುಗಳು ಸ್ವಲ್ಪ ಮುಚ್ಚಿದುವು. ರೆಕ್ಕೆಗಳು ಒಲೆದಾಡಿದುವು. ರಸಭರಿತವಾದ ದನಿಯು ಹೊರಡಲು, (ಮತ್ತು) ನಾಲಗೆಯು ಚಿಗುರಲು ಆ ಸವಿಯಾದ ಹಣ್ಣನ್ನು ಅದು ಸವಿಯಿತು.]

ಕವಿಯು ಗಿಳಿಗಳ ಸ್ವಭಾವವನ್ನು ಮನೋಹರವಾಗಿ ವರ್ಣಿಸಿದ್ದಾನೆ. ಸುಂದರವಾದ ಹಣ್ಣನ್ನು ನೋಡಿದೊಡನೆ ಗಿಳಿಗೆ ಹರುಷವಾಯಿತು. ಹರ್ಷ ನಿರ್ಭರತೆಯಿಂದ ಅದು ಅದನ್ನಪ್ಪಿಕೊಂಡಿತು. ಆದರೂ ತೃಪ್ತಿಯಾಗದೆ ಅದು ತನ್ನ ಮುಖವನ್ನಿಟ್ಟು ಆ ಹಣ್ಣನ್ನು ಮುದ್ದಾಡಿತು. ಆನಂದ ಪರವಶತೆಯಿಂದ ಅದರ ಕಣ್ಣುಗಳು ಮುಚ್ಚಿದುವು. ಕೆಲ ಹೊತ್ತಿನ ಮೇಲೆ ಅದು ತನ್ನ ರೆಕ್ಕೆಗಳನ್ನು ಅಲ್ಲಾಡಿಸಿ, ತನ್ನ ಅಂತರಂಗದಲ್ಲಿಯ ಆನಂದವನ್ನು ವ್ಯಕ್ತಪಡಿಸುವಂತೆ ಧ್ವನಿಗೆಯ್ದು, ನಾಲಗೆಯನ್ನು ಚಿಗುರಿಸಿ ಹಣ್ಣನ್ನು ಸವಿದಿತು.

ಇಲ್ಲಿ ಕವಿಯು ತನ್ನ ಕಾವ್ಯದ ಸ್ತೋತ್ರವನ್ನು ವ್ಯಂಗ್ಯ ಮರ್ಯಾದೆಯಿಂದ ಮಾಡಿಕೊಂಡಂತೆ ತೋರುತ್ತದೆ. ಕಾವ್ಯವೆಂಬ ರಸಭರಿತವಾದ ಹಣ್ಣಿನಿಂದ ಹೊರಸೂಸುವ ರಸ ನಿಷ್ಯಂದವನ್ನು ರಸಿಕರೆಂಬ ರಾಜ ಶುಕಗಳು ಸವಿದು ಬ್ರಹ್ಮಾನಂದ ಸಹೋದರವಾದ ಆನಂದದಲ್ಲಿ ಮುಳುಗಿ, ಕೆಲಕಾಲ ಕಣ್ಮುಚ್ಚಿ ಮೈಮರೆದು ಎಚ್ಚೆತ್ತ ಮೇಲೆ—

ಕವಿಯು " ಕೊಂಡಾಡುಗೆ ಕಲ್ತೋದುಗೆ ।
ಮುಂಡಾಡುಗೆ ಮುದ್ದಿಸುಗೆ ಮರಲ್ದಪ್ಪುಗೆ ಕೈ ॥

ಕೊಂಡೀ ಕಾವ್ಯಮಂ " ಎಂಬೀ ನುಡಿಯು ಯಥಾರ್ಥವಾದುದೆಂಬುದನ್ನು ಸರಸಾಲಾಪಗಳಿಂದ ಸೂಚಿಸಿದುವೆಂಬಂತೆ ರಸಿಕರಿಗೆ ಹೊಳೆಯಲಿಕ್ಕಿಲ್ಲವೇ?

ಇದು ಸ್ವಭಾವೋಕ್ತ್ಯಲಂಕಾರದ ಉದಾಹರಣೆಯು,

" ಜಾತಿಯೆನಿಕುಂ ಸ್ವಭಾವಾ ।
ಖ್ಯಾತಿ ಯಥಾವಸ್ಥಿತಾರ್ಥ ವಿಷಯಾರ್ಥ ಕೃತೋ ॥
ದ್ಯೋತನ ಮನ್ಯೈಪರೀತ್ಯಂ ।
ಜಾತಿದ್ರವ್ಯ ಕ್ರಿಯಾ ಗುಣ ಪ್ರತಿಬದ್ಧಂ ॥ "

ಕಾವ್ಯವಲೋಕನ.

॥ ಚಂಪಕಮಾಲಾ ॥

ಒದವಿದ ತಮ್ಮ ಕೇಂದಳದ ಕೆಂಪುಗಳಿಂ ಗಿಳಿ ಪದ್ಮರಾಗರ।
ತ್ನದ ಗಿಳಿಯಂತೆ ತಮ್ಮ ನಯನಾಂಚಲ ಚಂದ್ರಿಕೆಯಿಂ ನವೇಂದುಕಾ।
ಸ್ತ್ರದ ಗಿಳಿಯಂತೆ ಕೌತುಕ ಮನಾಕ್ಷಣದೊಳ್ ಕುಡೆ ನೋಡಿನೋಡಿಮಾ
ಯದ ಗಿಳಿಯೆಂದೆ ಪಂಜರದೊಳಿಕ್ಕುವಶೋದಿಸಲಂಜಿ ಮುಗ್ಧೆಯರ್ ॥

(ಅಭಿನವ ಪಂಪಃ- ರಾಮಚಂದ್ರ ಚರಿತ ಪುರಾಣ ಆ. ೧೫. ೧೧೯)

ಇಲ್ಲಿ ಕವಿಯು ಅಯೋಧ್ಯಾಪುರದ ಮುಗ್ಧೆಯರಾದ ಪುರವನಿತೆಯರ ವಿಲಾಸ ವ್ಯಾಪಾರವನ್ನು ವರ್ಣಿಸಿದ್ದಾನೆಃ-

[ಮುಗ್ಧೆಯರಾದ ವನಿತೆಯರು ಗಿಳಿಯನ್ನು ಓದಿಸಲೆಂದು ಅದನ್ನು ಹಿಡಿಯಲಿಕ್ಕೆ ಹೋಗಲು ಅದು ಕೋಮಲೆಯರ ಕೋಮಲ ಕರತಳದಿಂದ ಪದ್ಮರಾಗರತ್ನದ ಗಿಳಿಯಂತೆ ಕಂಡಿತು. ಅವರು ಅದನ್ನು ಹಿಡಿಯುವ ಯತ್ನವನ್ನು ಬಿಟ್ಟು, ಅದರ ಕಡೆಗೆ ನೋಡಹತ್ತಲು ಅವರ ಜ್ಯೋತ್ಸ್ನಾಶುಭ್ರವಾದ (ಬೆಳ್ದಿಂಗಳದಂತೆ ಬೆಳ್ಳಗಿರುವ) ಕಣ್ಣೊನೆಗಳ ಪ್ರಭೆಯಿಂದ ನೂತನವಾದ ಚಂದ್ರಕಾಂತದ ಗಿಳಿಯಂತೆ ತೋರಿತು. ಅವರು ಕೌತುಕವುಳ್ಳವರಾಗಿ ನೋಡಿ ನೋಡಿ, “ ಇದು ಗಿಳಿಯಲ್ಲ ಮಾಯದ ಗಿಳಿಯೆಂ”ದು ನಿಶ್ಚಯಿಸಿ ಅಂಜಿ ಪಂಜರದಲ್ಲಿ ಇಡುವರು.]

ಇಲ್ಲಿ ಕವಿಯು ಮುಗ್ಧೆಯರ ಸೌಂದರ್ಯಾತಿಶಯವನ್ನೂ, ಮುಗ್ಧಭಾವವನ್ನೂ ಕವಿಸಮಯದ ಆಧಾರದ ಮೇಲಿಂದ ಮನೋಹರವಾಗಿ ವರ್ಣಿಸಿದ್ದಾನೆ. ಸ್ತ್ರೀಯರ ಹಸ್ತತಳದಲ್ಲಿ ಕೋಮಲತ್ವ, ಅರುಣತ್ವ ಈ ಎರಡು ಗುಣಗಳಿರುತ್ತವೆಂದು ವರ್ಣಿಸುವುದು ಕವಿಸಮಯವು. ಅವರ ನಯನಾಂಚಲದಿಂದ ಚಂದ್ರಿಕಾ ಶುಭ್ರವಾದ ಪ್ರಭೆಯು ಹೊರಡುವದೆಂದು ವರ್ಣಿಸುವದೂ ಕವಿಸಮಯ. ಇಲ್ಲಿ ಕವಿಯು ಮುಗ್ಧೆಯರ “ ಕೆಂದಳದ ಕೆಂಪುಗಳಿಂ ” (ಕೆಂದಳಿರುಗಳಂತೆ ಕೆಂಪಾದ ಕೈಗಳ ಕಾಂತಿಯಿಂದ) ಮರಕತವರ್ಣದಂತಿದ್ದ (ಹಸರು ಬಣ್ಣದ) ಗಿಳಿಯು ಕೆಂಪಗಾಗಿ ಪದ್ಮರಾಗದ ಗಿಳಿಯಂತೆ ಕಾಣಿಸಿತೆಂದೂ ಬಿಳುಪಾದ ಕಣ್ಣೊನೆಯ ಕಾಂತಿಯಿಂದ ಅದು ಬೆಳ್ಳಗಿರುವ ಚಂದ್ರಕಾಂತದ ಗಿಳಿಯಂತೆ ತೋರಿತೆಂದೂ ಉತ್ಪ್ರೇಕ್ಷಿಸಿ, ಅದನ್ನು ನೋಡಿ ಮುಗ್ಧೆಯರಿದ್ದ ಕಾರಣ ಹೆದರಿಕೊಂಡರೆಂದು ವರ್ಣಿಸಿ, ಪಾಠಕರಿಗೆ ಆನಂದವನ್ನುಂಟುಮಾಡಿ

ದ್ದಾನೆ. ಈ ಅಸಂಗಕ್ಕೆ ಕೌತುಕವೇ ಕಾರಣವು. ಸ್ವಭಾವತಃ ಇದ್ದುದು ವಿರೂಪವಾಯಿತು. (ಹಸರಿದ್ದುದು ಕೆಂಪಗಾಯಿತು.) ಎಂದು ಹೇಳಿರುವದರಿಂದಲೇ ಕೌತುಕವುಂಟಾಗಿರುವದು. ಮುಗ್ಧೆಯರು ತಮ್ಮ ಹಸ್ತತಳ ಕಾಂತಿಯಿಂದಲೇ ಗಿಳಿಯು ಕೆಂಪಗೆ ಕಂಡಿತೆಂದು ಅರಿಯದವರಾಗಿ, ಆ ಗಿಳಿಯನ್ನು ಮಾಯದ ಗಿಳಿಯೆಂದೇ ನಂಬಿ ಚಕಿತರಾದರೆಂದು ಹೇಳಿರುವನು. ಇದರಿಂದ ಅವರ ಮುಗ್ಧಾವಸ್ಥೆಯು ಚೆನ್ನಾಗಿ ಪ್ರಕಟವಾಗುವದು. ಇಹಲ್ಲದೆ ಹೀಗಾಗುವದಕ್ಕೆ ತಮ್ಮ ಸೌಂದರ್ಯಾತಿಶಯವೇ ಕಾರಣವೆಂದು ತಿಳಿಯದವರಾಗಿದ್ದರು. ಹಸ್ತತಳಕಾಂತಿಯಿಂದ ಗಿಳಿಯು ಬೇರೆ ರೂಪವನ್ನು ಹೊಂದಿತೆಂದೂ, ನಯನಾಂಚಲ ಚಂದ್ರಿಕೆಯಿಂದ ಬೇರೆ ರೂಪವಾದುದೆಂದೂ ವರ್ಣಿಸುವದರಿಂದ ಅವರ ಸೌಂದರ್ಯ ಸೌಕುಮಾರ್ಯ ಗುಣಗಳು ವ್ಯಂಜಿತವಾಗುವವು.

ಹೀಗಿರುವದರಿಂದ ಈ ಪದ್ಯದಲ್ಲಿ ಸ್ತ್ರೀಯರ ಹಸ್ತತಲಕ್ಕೆ ಆರುಣ್ಯವೂ ನಯನಾಂಚಲಕ್ಕೆ ಧಾವಲ್ಯವೂ ಎಂಬ ಕವಿಸಮಯವು ರಸೋತ್ಕರ್ಷವನ್ನುಂಟು ಮಾಡುತ್ತದೆ. ಪೌರ ವಿಲಾಸಿನಿಯರ ಈ ಮುಗ್ಧವ್ಯಾಪಾರವನ್ನು ಓದಿದೊಡನೆ (ನಡೆಗಲಿಸುತ್ತುಮಂಚೆಗಳ ನೋದಿಸುತುಂ ಗಿಳಿಯುಂ, ಪಿಕಕ್ಕೆ ಮಾ।
ಮಿಡಿಗಳ ನಿಕ್ಕುತುಂ, ನವಿಲನಾಡಿಸುತುಂ... ...) ವೀತಶೋಕ ಪುರದ ವಿಲಾಸಿನೀ ಜನರು ವನದಲ್ಲಿ ಕ್ರೀಡಿಸುತ್ತಿದ್ದರೆಂಬ ಮಲ್ಲಿನಾಥ ಪುರಾಣದಲ್ಲಿಯ ಪದ್ಯವು ನಮ್ಮ ಸ್ಮರಣೆಗೆ ಬರುತ್ತದೆ.

॥ ಉತ್ಪಲ ಮಾಲಾ ॥

ದೂರದೆ ಕಂಡು ಚಂಪಕದ ಕುಟ್ಮಲಮಂ ಕೊಳಲರ್ಥಿವಟ್ಟವಳ್ ।
ಸಾರೆವರುತ್ತಮೀಕ್ಷಿಸೆ ವಿಲೋಚನ ಚಂದ್ರಿಕೆಯಿಂದೆ ಬೆಳ್ಪ ವಿ॥
ಸ್ತಾರಿಸೆ ಕಂಡು ಮಾಯದ ಮರಂ ದಿಟಮಿಂದಿದೆನುತ್ತೆ ವಿಸ್ಮಯ ।
ಸ್ಮೇರಮನೋಜ್ಞೆಯಾಗಿ ಧವಳೇಕ್ಷಣೆ ಪಿಂಗಿದಳಾ ಮಹೀಜಮಂ ॥

(ಶಾಂತೀಶ್ವರ ಪುರಾಣ ೧೦-೧೨೭)

[ದೂರದಲ್ಲಿಯೇ ನೋಡಿ ಚಂಪಕದ ಮೊಗ್ಗೆಯನ್ನು ಕೊಯ್ಯಲು ಇಚ್ಛೆಯುಳ್ಳವಳಾಗಿ, ಒಬ್ಬ ಮುಗ್ಧೆಯು ಚಂಪಕ ವೃಕ್ಷದ ಸಮೀಪಕ್ಕೆ ಬರುತ್ತ ನೋಡಲಾಗಿ ಆಕೆಯ ನಯನ ಚಂದ್ರಿಕೆಯ ಧವಲಕಾಂತಿಯು ವಿಸ್ತಾರವಾಗಿ ವೃಕ್ಷದಲ್ಲೆಲ್ಲ ಹಬ್ಬಿತು. ಆದುದರಿಂದ ಇದು ಚಂಪಕ ವೃಕ್ಷವಲ್ಲ, ಮಾಯದ

ಮರವು. ನಾನೆಂತಹ ಮೂಢಳೆಂದು ವಿಸ್ಮಯವುಳ್ಳವಳಾಗಿ ಮೃದುಮಧುರಹಾಸ್ಯ ಮಾಡಲು ಮತ್ತಷ್ಟು ಮನೋಹರಳಾಗಿ ಶೋಭಿಸುವ ಆ ಧವಲಕಟಾಕ್ಷೆಯು ಆ ಚಂಪಕ ವೃಕ್ಷದಿಂದ ಹಿಂದಕ್ಕೆ ಸರಿದಳು.]

(ಮೇಲೆ ಹೇಳಿದಂತೆ) ಸ್ತ್ರೀಯರ ಕಟಾಕ್ಷದಿಂದ ಹೊರಟ ಕಾಂತಿಯನ್ನು ಬೆಳ್ಳಗೆ ವರ್ಣಿಸುವದು ಕವಿಸಮಯ ಚಂಪಕ ಪುಷ್ಪಗಳ ಹೊಂಬಣ್ಣವು ಆವಳ ಲೋಚನ ಚಂದ್ರಿಕೆಯ. ಬೆಳ್ಳಗಿನ ಕಾಂತಿಯಲ್ಲಿ ಅಡಗಿಹೋಗಿ, ಆ ಪುಷ್ಪಗಳು ಬೆಳ್ಳಗೆ ಕಂಡವು. ಆದುದರಿಂದ ಅವಳು, ಇವು ಚಂಪಕ ಪುಷ್ಪಗಳೂ ಅಲ್ಲ; ಇದು ಚಂಪಕ ವೃಕ್ಷವೂ ಅಲ್ಲ. ಇದು ಮಾಯದ ಮರವು. ನಾನೆಂತಹ ಮುಗ್ಧಳೆಂದು ತನ್ನ ಮೌಗ್ಧ್ಯದ ಸಲುವಾಗಿ ಮುಗುಳ್ನಗೆ ನಕ್ಕು ಹಿಂದೆಗೆದಳೆಂದು ವರ್ಣಿಸಿದುದು ಆಶ್ಚರ್ಯ ಜನಕವಾದುದಲ್ಲವೇ? ವಾಚಕರೇ ಇಂಥ ಪದ್ಯಗಳನ್ನು ಓದಿದೊಡನೆಯೇ ಕವಿಯ ಚಾತುರ್ಯಕ್ಕೆ ಆಶ್ಚರ್ಯ ಬಟ್ಟು ನೀವಾದರೂ ಆನಂದದಿಂದ ತುಂಬಿದವರಾಗಿ ಒಳಗಿನದೊಳಗೆ ನಗುವದಿಲ್ಲವೇ? " ರಸಾತ್ಮಕಂ ಕಾವ್ಯಂ " ಎಂಬವರ ಪ್ರತ್ಯಕ್ಷ ಅನುಭವವು ನಿಮಗೆ ಬರುವದಿಲ್ಲವೇ?

ಚಂಪಕ ಪುಷ್ಪದ ಬಣ್ಣವು ಬಂಗಾರದಂತಿರುತ್ತದೆ. ಆದುದರಿಂದಲೇ ಚಂಪಕಕ್ಕೆ ಹೇಮ ಪುಷ್ಪಕವೆಂದೆನ್ನುತ್ತಾರೆ.

॥ ಕಂದ ॥

ತಳಮಿವು ತಳರಿವು ಬೆರಲಿವು ।
ಕಳಿಕೆಗಳಿವು ನಖಮಿವಲರಿವೆಂದರಿಯದೆ ಕೋ ॥
ಮಳೆ ಪೂಗೊಯ್ವೆಡೆಯೊಳ್ ಪಳ ।
ಪಳಸಿದಳತಿ ಮುಗ್ಧೆ ಮಾವಿನೊಳ್ ಮತ್ತೊರ್ವಳ್ ॥

(ಶಾಂತೀಶ್ವರ ಪುರಾಣ ೧೦-೧೩೬)

[ಇದು ಹಸ್ತತಳವು; ಇದು ತಳಿರು; ಇವು ಬೆರಳುಗಳು; ಇವು ಕಳಿಕೆಗಳು (ಮೊಗ್ಗೆಗಳು) ; ಇವು ನಖಗಳು; ಇವು ಹೂಗಳೆಂದು ಅರಿಯದವಳಾಗಿ ಹೂ ಕೊಯ್ಯುವಾಗ ಒಬ್ಬ ಅತಿ ಮುಗ್ಧೆಯಾದ ಸ್ತ್ರೀಯು ಮಾವಿನಲ್ಲಿ ವ್ಯಾಕುಲಳಾಗಿ [ವ್ಯಗ್ರಳಾಗಿ] ಸುಮ್ಮನೆ ನಿಂತು ಬಿಟ್ಟಳು]

ತಳಿರಾವುದು ಹಸ್ತತಳವಾವುದು, ಮೊಗ್ಗೆಗಳಾವುವು ಬೇಳುಗಳಾವುವು ನಖಗಳಾವುವು ಹೂಗಳಾವುವು ಎಂಬುದನ್ನು ತಿಳಿಯದವಳಾಗಿ ಆ ಕೋಮಲೆಯು.

ಪೂಗೊಯ್ಯಲಾರದಾದಳೆಂದು ವರ್ಣಿಸಿದುದು, ಹಸ್ತತಲಕ್ಕೆ ಆರುಣ್ಯ, ನಖ ಕಾಂತಿಗೆ ಧಾವಲ್ಯವೆಂಬ ಕವಿಸಮಯದ ಆಧಾರದ ಮೇಲಿಂದಲೇ. ಸುಕುಮಾರ ದೇಹಲತೆಯುಳ್ಳವಳೂ,ಚಾರುಸರ್ವಾಂಗಿಯೂ ಆದ ಆ ಮುಗ್ಧೆಯು ಭ್ರಾಂತಳಾಗಿ ಪುಷ್ಪಾಪಚಯವ್ಯಾಪಾರವನ್ನೇ ಬಿಟ್ಟಳೆಂದು ವರ್ಣಿಸಿದುದು ಆರಿಗೆ ತಾನೆ ಕೌತುಕವನ್ನುಂಟು ಮಾಡಲಿಕ್ಕಿಲ್ಲ !

॥ ಕಂದ ॥

ಮಲ್ಲಿಗೆಯಲರಂ ಕೊಯ್ಯಲ್ ।
ಮೆಲ್ಲನೆ ಕೈಯಿಕ್ಕ ಲೊಗೆದ ನಖರದ್ಯುತಿಯಿಂ॥
ಮಲ್ಲೀಕುಟ್ಮಲಮೆಂದಾ ।
ನಲ್ಲಳ್ಬಯಲಂ ತುಡುಂಕಿ ಕೌತುಕ ಮಾಂತಳ್ ॥

(ಉದ್ಭಟಕಾವ್ಯ ೩ ೯-೬೨)

[ಮಲ್ಲಿಗೆಯ ಹೂವನ್ನು ಕೊಯ್ಯಬೇಕೆಂದು ಮೆಲ್ಲನೆ ಕೈಯಿಕ್ಕಲು ಅವಳ ನಖಗಳಿಂದ (ಬೆಳ್ಳಗಿನ) ಕಾಂತಿಯು ಹೊರಟಿತು. ಆಧವಲಕಾಂತಿಯೇ ಮಲ್ಲಿಗೆಯ ಮೊಗ್ಗೆಯೆಂದು ಕೊಯ್ಯಹೋಗಲು, ಅವಳ ಕೈಗಳಿಗೆ ಬಯಲೇ ಹತ್ತಿತು. (ಹೂಗಳು ಹತ್ತಲಿಲ್ಲ) ಆದರಿಂದ ಅವಳು ಮುಗ್ಧಳಾಗಿ ಸುಮ್ಮನೆ ನಿಂತುಬಿಟ್ಟಳು]

ಮೇಲಿನ ಪದ್ಯದಿಂದ ನಖಕ್ಕೆ ಧಾವಲ್ಯವೆಂಬ ಕವಿಸಮಯವು ಸ್ಪಷ್ಟವಾಗಿ ತಿಳಿಯುವದು. ನಖಗಳ ಧವಲಕಾಂತಿಯು ಮುಂಭಾಗದಲ್ಲಿ ಹಬ್ಬಿರಲು, ಆದೇ ಮಲ್ಲಿಗೆಯ ಪುಷ್ಪವೆಂದು ಕೊಯ್ಯಲೆಳಸಿದಳು- ಆದರೆ ಅವಳಿಗೆ ಪುಷ್ಪವು ತಾಕ ಲಿಲ್ಲ. ಇದೇನು ಮೊಗ್ಗೆಯು ಕಾಣಿಸುತ್ತದೆ.ಕೊಯ್ಯಹೋದರೆ ಏನೂಇಲ್ಲ ಎಂದು ಚಕಿತಳಾದಳೆಂಬುದೇ ಸರಸವಾದ ಭಾವವು.

॥ ಪರಿವರ್ಧಿನಿಷಟ್ಪದಿ ॥

ಸಿರಿ ತನ್ನೆಯ ನಲ್ಮೆಯ ಶಯ್ಯಾಮಂ।
ದಿರದೊಳಗದಿರದೆ ಚಂಡಾಳೀ ಕುಲ।
ಮುರವಣೆಯಿಂ ಪುಗೆ ದೋಷಂ ಪೊರ್ದುಗುಮೆನುತದು ಪುಗವಂತೆ ।
ಭರದಿಂ ಕಾಪಿಕ್ಕಿದ ನವಚಂಪಕ।
ದರಮುಗುಳಿದು ತಾನೆಂಬಂದದಿ ಬಂ।
ಧುರಮಾದುದು ನಾಸಿಕ ಮಾಸರಸಿಜ ಸಲ್ಲಲಿತಾನನೆಗೆ॥

(ಮಂಗರಸನ ಜಯನೃಪಕಾವ್ಯ)
ಆ. ೩. ಪ. ೪೪

[ಲಕ್ಷ್ಮಿಯು ತನ್ನ ಪ್ರೀತಿಯ ಶಯ್ಯಾಮಂದಿರದಲ್ಲಿ (ಕಮಲಪುಷ್ಪದಲ್ಲಿ) ಅಳಿಕುಲವು ಉರವಣೆಯಿಂದ ಸೇರಲು ದೋಷವುಂಟಾಗುವದೆಂದೆನುತ, ಅದು ಸೇರದಂತೆ ಭರದಿಂದ ಕಾವಲಿಕ್ಕಿದ್ದ ನವಚಂಪಕದ ಅರೆಮುಗುಳಿದೆಂಬಂತೆ ಲಲಿತವಾದ ಅವಳ ಮುಖಕ್ಕೆ ಮೂಗು ಬಂಧುರವಾಗಿ (ರಮಣೀಯವಾಗಿ) ಶೋಭಿಸಿತು.]

“ದುಂಬಿಗಳು ಮಲ್ಲಿಕಾದಿ ಪುಷ್ಪಗಳಲ್ಲಿ ಮಕರಂದವನ್ನು ಸವಿಯುವದಕ್ಕೆ ಅವುಗಳನ್ನು ಮುತ್ತುವವೆಂದೂ, ಚಂಪಕ ಪುಷ್ಪಗಳ ಹತ್ತಿರವನ್ನು (ಮಕರಂದವಿದ್ದರೂ) ಅವು ಸೇರವೆಂದೂ ಕವಿಗಳು ವರ್ಣಿಸುವರು. ಭ್ರಮರಗಳಿಗೆ ಮಲ್ಲಿಕಾದಿಗಳಲ್ಲಿ ಆಹ್ಲಾದಕತ್ವವೂ, ಚಂಪಕದಲ್ಲಿ ಮಾರಕತ್ವವೂ ಲೋಕಾನುಭವಕ್ಕೆ ವಿರೋಧವಾಗಿದ್ದರೂ, ಕವಿಸಂಪ್ರದಾಯಸಿದ್ಧಗಳು” ಈ ಕವಿಸಂತೇತವನ್ನು ಲಕ್ಷದಲ್ಲಿಟ್ಟುಕೊಂಡು ಪದ್ಯಾರ್ಥವನ್ನು ನೋಡೋಣ. ದುಂಬಿಗಳು ತನ್ನ ಶಯನಗೃಹವಾದ ಕಮಲಪುಷ್ಪದಲ್ಲಿಯ ರಸವನ್ನು ಸವಿಯಲು ಬಂದು ಅದನ್ನು ಮಲಿನವಾಗಿ ಮಾಡುತ್ತವೆ; ಅವುಗಳನ್ನು ಹೊಡೆದೋಡಿಸಲು ನವಚಂಪಕವನ್ನಿಟ್ಟರಾಯಿತೆಂದು ಸುಲೋಚನೆಯ ಮುಖವೆಂಬ ಕಮಲದಲ್ಲಿ ವಾಸಿಸುತ್ತಿರುವ ಲಕ್ಷ್ಮಿಯು (ಸೌಂದರ್ಯಲಕ್ಷ್ಮಿಯು) ನಾಸಾಮುಕುಲವೆಂಬ (ಮೊಗ್ಗೆಯಂತಿದ್ದ ಮೂಗು) ಸಂಪಿಗೆಯ ಅರೆಬಿರಿದ ಮೊಗ್ಗನ್ನು ಮುಖಕಮಲದಮೇಲೆ ಇಟ್ಟುಬಿಟ್ಟಳು. (ದೋಷವು ಕಪ್ಪು ಇರುತ್ತದೆಂದು ಕವಿಸಮಯವು. ಅಳಿಯ ಬಣ್ಣವು ಕಪ್ಪು ಇರುವದರಿಂದ ಅದು ಮುಟ್ಟಿದಕೂಡಲೆ ಕಮಲಕ್ಕೆ ದೋಷವುಂಟಾದೀತೆಂದು ಲಕ್ಷ್ಮಿಗೆ ಭೀತಿಯು. ಲಕ್ಷ್ಮಿಯು ರಾಜರ ಮುಖದಲ್ಲಿಯೂ, ಸ್ತ್ರೀಯರ ಮುಖದಲ್ಲಿಯೂ, ಕಮಲದಲ್ಲಿಯೂ ವಾಸಿಸುತ್ತಾಳೆಂದು ಕವಿಗಳು ವರ್ಣಿಸುತ್ತಾರೆ.)

॥ ಪರಿವರ್ಧಿನಿಷಟ್ಪದಿ ॥

ಅಲರುಣಿಯೀ ಹೂವಿನ ಬಂಡುಂಡೊಡೆ ।
ಮರಣಮವಕೆ ನಿಶ್ಚಯಮದರಿಂದಾ ।
ಗರಳಮನದರಿಂ ಕಿಡಿಪೆನೆನುತ ಬನಸಿರಿಯಾ ಚಂಪಕದ ॥
ಬಿರಿ ಮೊಗ್ಗೆಯ ತುದಿಗಮೃತದ ಘುಟಿಕೆಯ ।
ನಿರಿಸಿದವೊಲು ಮುತ್ತಿನ ಮೂಗುತಿಯಂ ।
ವಿರಚನೆಗೆಯ್ದುಳದೊರ್ವಳ್ ತರುಣಿಯ ನಾಸಾಮುಕುಲದೊಳು ॥

(ಜಯನೃಪಕಾವ್ಯ. ೨. ೫ ಪ. ೯)

(ಚಂಪಕದಲ್ಲಿ ಭ್ರಮರಗಳಿಗೆ ಮಾರಕತ್ವವೆಂಬ ಕವಿಸಂಕೇತವನ್ನೇ ಇಟ್ಟುಕೊಂಡು ಮಂಗರಸಕವಿಯು ಸುಲೋಚನಾದೇವಿಯ ಮೂಗುತಿಯ ಧಾರಣವನ್ನು ಹೃದ್ಯವಾಗಿ ವರ್ಣಿಸಿದ್ದಾನೆ.)

[ದುಂಬಿಯು ಈ ಹೂವಿನ ರಸಪಾನ ಮಾಡಿದೊಡನೆಯೇ ನಿಶ್ಚಯವಾಗಿ ಸಾಯುವದು. ಆದುದರಿಂದ ಇದರ ವಿಷವನ್ನೇ ನಾಶಮಾಡುವೆನೆಂದು ವನ ಲಕ್ಷ್ಮಿಯು ಚಂಪಕದ ಬಿರಿಮೊಗ್ಗೆಯ ತುದಿಗೆ ಅಮೃತದ ಘುಟಿಕೆಯನ್ನು (ಬಿಂದು) ಇರಿಸಿದಳೆಂಬಂತೆ ಮುತ್ತಿನ ಮೂಗುತಿಯನ್ನು ಒಬ್ಬ ಸಖಿಯು ನವ ಕುಸುಮ ಲೋಭನೀಯವಾದ ಯೌವನದಿಂದ ಕೂಡಿದ ಸುಲೋಚನೆಯ (ಮೊ ಗ್ಗೆಯಂತಿದ್ದ) ಮೂಗಿಗಿಟ್ಟಳು.]

ಸುಲೋಚನಾದೇವಿಯ ಮೂಗು ಸಂಪಿಗೆಯ ಬಿರಿಮೊಗ್ಗಿನಂತಿದ್ದಿತು. ಅದಕ್ಕೆ ಮುತ್ತಿನ ಮೂಗುತಿಯನ್ನು ಇಡಿಸುವದಾಯಿತು. ಕವಿ ಇದು ಮೂಗೂ ಅಲ್ಲ; ಮೂಗುತಿಯೂ ಅಲ್ಲ; ಆದರೆ ವನಲಕ್ಷ್ಮಿಯು “ ತುಂಬಿಯು ಅಲರುಣಿಯು; ಕುಸುಮ ರಸಪಾನ ಮಾಡಿಯೇ ಜೀವಿಸತಕ್ಕುದು. ಮಲ್ಲಿಕಾದಿ ಪುಷ್ಪಗಳರಸವು ದೊರೆಯುವಂತೆ ಚಂಪಕ ಕುಸುಮದ ಮಧುವಾದರೂ ಅದಕ್ಕೆ ದೂರೆಯಬೇ ಕೆಂದು ಕಾರುಣ್ಯದಿಂದ ಚಂಪಕದ ವಿಷವನ್ನು ತೆಗೆದು ಹಾಕಲು ಉದ್ಯು ಕ್ತಳಾಗಿ ಅಮೃತಬಿಂದುವನ್ನು ಇಟ್ಟಳೆಂದು ವರ್ಣಿಸಿ ರಸಿಕರನ್ನು ಕಾವ್ಯಾನಂದ ಸಾಗರದಲ್ಲಿ ಮುಳುಗಿಸಿ ಬಿಟ್ಟಿದ್ದಾನೆ.

(ಸಖಿಯೇ ವನಲಕ್ಷ್ಮಿಯು; ನಾಸಾಮುಕುಲವೇ ಚಂಪಕವು; ಮೂಗುತಿ ಯೇ ಅಮೃತ ಘುಟಿಕೆಯು.ಮೂಗು ಸಂಪಿಗೆಯ ತೆನೆಯಾಗಿದೆಯೆಂದು ನಮ್ಮಲ್ಲಿ ಸ್ತ್ರೀಯರೂ ಕೊಡ ಅನ್ನುತ್ತಿರುತ್ತಾರೆ.)ಕೆಳಗಿನ ಪದ್ಯವನ್ನು ನೋಡಿರಿ:-

ಪಗೆ ತುಂಬಿಯೊಳ್ ಚಿರಂ ಸಂ।
ಪಗೆಗೀ ಕೋಮಳೆಯ ನಾಸಿಕಾ ಮುಕುಳಂ ಸಂ॥
ಪಗೆಯ ಪಗೆ, ನಾಸಿಕಾಸುರ।
ಭಿಗೆ ಕೆಳೆಯಂ ತುಂಬಿ, ಪಗೆಯ ಪಗೆ ಕೆಳೆಯಲ್ತೆ?॥

ಮಲ್ಲಿನಾಥ ಪುರಾಣ. ಆ-೩ ಪ-೭೭

(ಲಕ್ಷ್ಮೀಮಹಾದೇವಿಯ ವರ್ಣನೆ)

*** ॥ ಕಂದ ॥**

ತರುಣಿಯ ಮುಖಚಂದ್ರಮನೊಳ್ ।
ಹರಿಣಮುಮಂ ಬರಯಲೆಂದು ಭಾವಿಸಿ ಬಿದಿ ಸುಂ॥
ದರತೆಗೆ ಮರಳ್ದು ಬರೆ ಗೊಂ
ಬೆರಡನೆ ಬರೆದಂತರಸಿಯ ಪುರ್ಬೆಸೆದಿರ್ದುದು॥

(“ ಲೀಲಾವತಿ ಆ-೩ ಪ- ೪೩ ”)

[ಬ್ರಹ್ಮನು ಕಾಮಿನಿಯ ಮುಖವೆಂಬ ಚಂದ್ರನ ಮೇಲೆ ಜಿಂಕೆಯನ್ನು ಚಿತ್ರಿಸಬೇಕೆಂದಿಚ್ಛಿಸಿ, (ಅವಳ) ಸೌಂದರ್ಯವನ್ನು ನೋಡಿ ಬೆರಗಾಗಿ, ಮರೆದು ಬರಿ ಎರಡು ಕೋಡುಗಳನ್ನು ಮಾತ್ರ ಬರೆದನೋ ಏನೊ ಎಂದೆನ್ನು ವಂತೆ ಆ ರಾಜಪತ್ನಿಯ ಹುಬ್ಬುಗಳು ಶೋಭಿಸುವವು]

ಮೊತ್ತ ಮೊದಲಿಗೆ ಇತಿ ಎರಳೆಯನ್ನು ಚಿತ್ರಿಸಬೇಕೆಂದು ಬಯಸಿದ್ದನು. ಆದರೆ ಚಿತ್ರಿಸಲಿಕ್ಕೆ ಪ್ರಾರಂಭಿಸಲು ಅವಳ ಸೌಂದರ್ಯಾತಿಶಯವೇ ತನ್ನ ಸ್ಮೃತಿ ಪಟಲದ ಮೇಲೆ ಚೆನ್ನಾಗಿ ಚಿತ್ರಿತವಾಗಲು ಆ ಬ್ರಹ್ಮನ ಸ್ಮರಣಶಕ್ತಿಯ ಮೇಲೆ ತುಕ್ಕಿನ ತರವೇರಿದಂತಾಯಿತು. ಆದುದರಿಂದ ತನ್ನ ಮೊತ್ತ ಮೊದಲಿನ ವಿಚಾರಗಳು ಹೊಳೆಯದಿರುವಾಗ ಬರಿ ಎರಡು ಕೊಂಬುಗಳನ್ನು ಮಾತ್ರ ಚಿತ್ರಿಸಿ ಬಿಟ್ಟನು. ಪ್ರತ್ಯಕ್ಷ ನಿರ್ಮಾಣ ಕರ್ತೃವನ್ನೇ ಮರವಿಗೆ ಹಾಕಿದ ಅವಳ ರೂಪವು ಹೇಗೆ ತಾನೆ ಇದ್ದಿರಬಹುದೆಂಬುದನ್ನು ರಸಿಕರೇ ತಿಳಿದುಕೊಳ್ಳಲೆಂದು ಕವಿಯು ಇಷ್ಟೇ ಹೇಳಿ ಬಿಟ್ಟಿದ್ದಾನೆ.

*॥ **ಕಂದ**॥

ಹರಿಣನುಮಂ ಪುತ್ತುಂ ವಟ।
ತರುವಂ ತೊರೆದಕ್ಷಿ ಫಣಿಫಲಂಗಳನಾಂತಂ॥
ತಿರೆ ನೇತ್ರ ಭ್ರೂ ಬಿಂಬಾ।
ಧರಂಗಳಿಂದವಳ ವದನ ವಿಧು ಕರಮೆಸೆಗುಂ॥

(ರಾಜಶೇಖರ ವಿಳಾಸ-ಆ ೭-ಪ ೪೬)

[ಆ ಸರ್ವಮಂಗಳೆಯೆಂಬ ರಾಜಕುಮಾರಿಯ ಮುಖವೆಂಬ ಚಂದ್ರನು ಎರಳೆಯನ್ನೂ, ಹುತ್ತನ್ನೂ, ಆಲದ ಮರವನ್ನೂ ತ್ಯಜಿಸಿ, ಕಣ್ಣು, ಹಾವು, ಹಣ್ಣುಗಳನ್ನು ಧರಿಸಿದಂತೆ (ಅವಳ) ನೇತ್ರ ಮತ್ತು ಹುಬ್ಬು ಹಾಗು ಕೆಂಪಗಿನ ತುಟಿ ಇವುಗಳಿಂದ ಚೆನ್ನಾಗಿ ಶೋಭಿಸುವುದು.]

ಈಗ ಚಂದ್ರನ ಮೇಲಿರುವ ಕಲಂಕವನ್ನು ಕವಿಗಳು ಆವಾವ ಹೆಸರುಗಳಿಂದ ಕರೆವರೆಂಬುದನ್ನು ತಿಳಿದುಕೊಳ್ಳುವದು ಆವಶ್ಯಕವು.

ಪೆರೆಯ ಮೇಲಿರದೆ ತೋರುವ ಕರೆಯನಿಂತು ಕೆಲ।
ಬರೊರೆವರ್ ಮೊಲನೆಂದು ವಟವೆಂದು ಪುತ್ತೆಂದು।
ಹರಿಣನೆಂದುಂ ಪೇಳೆನಾನಿಂತು ಚಂದ್ರನಿಂದೋಡಿಸಲ್ಪಟ್ಟತಮವು॥

ತಿರೆಯೊಳಾಶ್ರಯಮಿಲ್ಲದಂತಾಗೆ ಭರದಿನಂ।
ಬರತಳಕೆ ಜಿಗಿದು ತನ್ನರಿಯಾದ ಚಂದ್ರಂಗೆ।
ಮರೆವೊಗಲವಂ ತನ್ನ ಪೊಡೆಯೊಳಿಡೆ ಕಪ್ಪಾಗಿ ತೋರ್ಪುದೆಂದಾನು
ಸುರುವೆಂ ॥

(ಸ್ವಕೀಯ-*)

ಚಂದ್ರನು ತನ್ನ ಮೇಲಿರುವ ದೊಡ್ಡದಾದ ಆಲದಮರವನ್ನೂ, ಜಿಂಕೆಯನ್ನೂ, ಹುತ್ತನ್ನೂ ಹೊರಲಿಕ್ಕಾಗದೆಯೋ ಅಥವಾ ನಿಸ್ಸಾರವಾದುವು ಗಳೆಂದೋ ಬಿಟ್ಟುಕೊಟ್ಟು ಆ ಹರಿಣನಲ್ಲಿ ಖ್ಯಾತಿ ಹೊಂದಿದ ಕಣ್ಣುಗಳನ್ನೂ, ಆಲದಮರದಲ್ಲಿ ಒಪ್ಪುಗೊಂಡಿರುವ ಕೆಂಪಾದ ಹಣ್ಣುಗಳನ್ನೂ, ಹುತ್ತಿನಲ್ಲಿ ಶೋಭಿಸುತ್ತಿರುವ ಕೃಷ್ಣವರ್ಣವೂ ವಕ್ರವೂ ಆದ ದೇಹವುಳ್ಳ ಸರ್ಪವನ್ನೂ ಮಾತ್ರ ಧರಿಸಿದನೋ ಏನೋ ಎಂದೆನ್ನುವಂತೆ, ಮೃಗದ ಕಣ್ಣುಗಳಂತೆ ಕಣ್ಣು ಗಳುಳ್ಳುದೂ, ಆಲದ ಹಣ್ಣಿನಂತೆ ಕೆಂಪಾದ ತುಟಿಗಳುಳ್ಳುದೂ, ಕೃಷ್ಣವರ್ಣ ದಿಂದಲೂ, ವಕ್ರತೆಯಿಂದಲೂ ಸರ್ಪವನ್ನು ಹೋಲುವ ಹುಬ್ಬುಗಳುಳ್ಳುದೂ ಆದ ಆ ಸರ್ವ ಮಂಗಳಾದೇವಿಯ ಮುಖವೆಂಬ ಚಂದ್ರಬಿಂಬವು ನಯನ ಮನೋ ಹರವಾಯಿತು.

*** ॥ ಕಂದ ॥**

ತೊಲಗಿಪಳೊ ರಹಸ್ಯ ಶ್ರವ।
ಣ ಲಜ್ಜೆಯಿಂ ತನ್ನ ಪೊಳೆವ ನೆಳಲುಮನೆನೆ ನಿ ॥
ರ್ಮಲ ಮಣಿ ಕುಟ್ಟಿಮಮಂ ಕೋ।
ಮಲೆ ಚರಣಾಂಗುಷ್ಟದಿಂದೆ ಬರೆಯುತ್ತಿರ್ದಳ್ ॥

(ಕಾದಂಬರಿ ಉತ್ತರಭಾಗೆ-ಪದ್ಯ ೨೪೯)

[ತನ್ನ ಗುಟ್ಟನ್ನೆಲ್ಲ ಕೇಳಿ ಕೊಳ್ಳುವುದೋ ಏನೋ ಎಂಬ ನಾಚಿಕೆ ಯಿಂದ (ಕಾದಂಬರೀ ದೇವಿಯು) ತನ್ನ ನೆಳಲನ್ನು ದೂರಕ್ಕೆ ಕಳುಹಿಸುವ ವಳಂತೆ ಆ ನಿರ್ಮಲವಾದ ಮಣಿ ಮಂದಿರದ ನೆಲಗಟ್ಟಿನ ಮೇಲೆ ತನ್ನ ಕಾಲಿನ ಹೆಬ್ಬೆರಲಿನಿಂದ (ಏನೇನೋ) ಬರೆಯುತ್ತಿದ್ದಳು] ಮನಸ್ಸಿನಲ್ಲಿ ಆವುದಾದ ರೊಂದು ವಿಚಾರವು ಮನೆ ಮಾಡಿತೆಂದರೆ ಆಗ ಆ ವ್ಯಕ್ತಿಯು ನೆಲ ಬರೆಯುವುದು. ಸ್ವಾಭಾವಿಕವು. ಆದರೆ ಇಲ್ಲಿ ಕವಿಯು ಅವಳ ನೆಳಲಿಗೆ ಸಜೀವತ್ವವನ್ನು ಆರೋ ಪಿಸಿ, ಆದನ್ನು ನೋಡಿ ಕಾದಂಬರೀ ದೇವಿಯು ನಾಚಿವಳೋ ಏನೋ ಎಂದು

ಸಂಶಯವನ್ನೆತ್ತುತ್ತಾನೆ. ಇದರಿಂದ ಆ ತರುಣಿಯು ಲೋಕಾಪವಾದಕ್ಕೆ ಅಂಜುವವಳೆಂದೂ, ಅದುವೆ ಸ್ತ್ರೀಯರಿಗೆ ಯೋಗ್ಯವಾದ ನಡೆಯೆಂದೂ ಕವಿಯು ಪರ್ಯಾಯದಿಂದ ಸ್ಪಷ್ಟವಾಗಿ ವ್ಯಕ್ತಪಡಿಸಿದ್ದಾನೆ. ಅವಳು ಕಾಲ್ಬೆರಲಿನಿಂದ ಏನೇನೋ ಬರೆಯುತ್ತಲಿದ್ದುದನ್ನು ಆ ನೆಳಲನ್ನು ಒರೆಸಿ ತೆಗೆಯಲಿಕ್ಕೆ ಪ್ರಯತ್ನ ಮಾಡುತ್ತಲಿದ್ದಳೆಂದು ವರ್ಣಿಸಿಸುದು ಅತ್ಯಂತ ಮನೋಹರವಾಗಿದೆ.

* ॥ ಭಾಮಿನೀ ಷಟ್ಪದಿ ॥

ಕನ್ನಡಿಯ ನೋಡುತಿರಲಿರ್ವರು ।
ತನ್ನಿದಿರೊಳೊರ್ವಳನು ಕಾಣುತೆ ।
ಖಿನ್ನವಾದಳು ಮುನಿದು ನುಡಿದಳು ಕಪಟ ನೀನೆಂದು ॥
ಸನ್ನಿದನು ನೆರೆಯರಿದು ಮುಗ್ಧೆಯೆ ॥
ನಿನ್ನ ತಿಳಿವೇನೆನುತೆ ದರ್ಪಣ ।
ಬೆನ್ನಿನಲಿ ತೋರಿದೊಡನರಿದಳು ಕಪಟವಲ್ಲೆಂದು ॥
(ವಿರುಪಣಯ್ಯನ-ವೀರಭದ್ರ ವಿಜಯ-ಸಂಧಿ-೬ ಪದ್ಯ-೬೦)

(ಈ ಕಾವ್ಯವು ಇನ್ನೂ ಮುದ್ರಿತವಾಗಿಲ್ಲ. ನಮಗೆ ಸಿಕ್ಕಿರುವ ಹಸ್ತಲಿಖಿತ ಪ್ರತಿಯಲ್ಲಾದರೊ ೬ ಸಂಧಿಗಳೂ, ೭ನೆಯದರಲ್ಲಿ ೩॥ ಪದ್ಯಗಳೂ ಮಾತ್ರ ಇವೆ. ಪ್ರತಿ ಮಾಡಿದವರ ದೋಷಗಳಿಗೆ ಕೊರತೆಯಿಲ್ಲ.)

[ದಂಪತಿಗಳಿಬ್ಬರು ಕೂಡಿ ಕನ್ನಡಿಯನ್ನು ನೋಡಿಕೊಳ್ಳುತ್ತಿರುವಾಗ ಪಡಿನೆಳಲಿನಲ್ಲಿರುವ ತನ್ನನ್ನೇ ತಾನು ಗುರುತಿಸದ ಆ ಮುಗ್ಧೆಯು, ತನ್ನ ಪತಿಯು ಬೇರೊಬ್ಬಳನ್ನು ಪ್ರೀತಿಸುತ್ತಿರುವನೆಂದು ಭಾವಿಸಿ ಖಿನ್ನಳಾಗಿ ಅವನಿಗೆ ಸಿಟ್ಟಿನಿಂದ “ ನೀನು ಬಲು ಕಪಟಿಯು ” ಎಂದು ದೂಷಿಸಿದಳು. ಬಳಿಯಲ್ಲಿಯೇ ಕುಳಿತಿರುವ ಅವಳ ಪತಿಯು ಇದನ್ನೆಲ್ಲ ತಿಳಿದು “ ಮುಗ್ಧೆಯೇ , ನಿನ್ನ ಕಲ್ಪನೆಯಾದರೂ ಏನು ? ” ಎಂದೆನ್ನುತ್ತ ಆ ಕನ್ನಡಿಯನ್ನು ಹಿಮ್ಮಗ್ಗಲು ಮಾಡಿ ಹಿಡಿದು ತೋರಿಸಲು, ಅವಳು ನಿಜವನ್ನು ತಿಳಿದವಳಾಗಿ ಕಪಟವಲ್ಲವೆಂದು ಭಾವಿಸಿದಳು-] ಇಲ್ಲಿ ತನ್ನ ಪಡಿನೆಳಲನ್ನು ಗುರುತಿಸದಿದ್ದುದು ಆಶ್ಚರ್ಯವಲ್ಲ. ಆದರೆ ತಾನೂ ತನ್ನ ಪತಿಯೂ ಕೂಡಿಯೇ ಕುಳಿತಿರುವುದನ್ನು ಮರೆತು ಇಲ್ಲದ ಕಲ್ಪನೆಗೆ ಆಸ್ಪದವನ್ನಿತ್ತಿರುವುದೇ ಪರಮಾಶ್ಚರ್ಯವು. ಇಲ್ಲಿ ಕವಿಯು ಅವಳ ಗಂಡನ ಕೈಯಿಂದ ಕನ್ನಡಿಯನ್ನು ತಿರುವು ಮುರುವು ಮಾಡಿಸುವುದನ್ನು

ಬಿಟ್ಟು ಮತ್ತೆ ಏನನ್ನಾದರೂ ಬರಿ ಬಾಯಿಯಿಂದ ಹೇಳಿಸಿದ್ದರೆ ಅವಳಿಗೆ ಅದು ನಿಜವಾಗಿ ತೋರುತ್ತಲಿರಲಿಲ್ಲ; ಇಷ್ಟೇ ಅಲ್ಲ ರಸಿಕರಿಗೂ ಅದು ಸಮಂಜಸವೆಂದೆನ್ನಿಸುತ್ತಲಿರಲಿಲ್ಲ. ಈಗ ಮಾಡಿದ ವಿಧಾನವು ಅತ್ಯಂತ ಸಮಂಜಸವಿದೆ. ಇನ್ನೇನು? ಅವಳು ತನ್ನನ್ನು ಮೋಸಗೊಳಿಸಿದವಳನ್ನು ಬೇಕಾದಲ್ಲಿ ಹುಡುಕಿಕೊಳ್ಳಲಿ ಅವಳೇನು ಸಿಕ್ಕುವುದಿಲ್ಲ. ಇವಳ ಮನಸಿನೊಳಗೆ ಮಿಥ್ಯಾ ಕಲ್ಪನೆಯು ಉಳಿಯುವುದಿಲ್ಲ.

॥ ಚಂಪಕಮಾಲಾ ॥

ಅರಲ ಪರಾಗಮೆಂಬ ಪೊಸ ಬೇಳ್ಪೆಯ ಬೂದಿಯನಿಟ್ಟು ಮಲ್ಲಿಕಾ ।
ತರುಣಿಯ ಭೃಂಗ ನೀಲ ಮಣಿ ಮಾಲೆಯ ನೊಯ್ವಲರೆಂಬ ಚೋರನಂ ॥
ಪರಭೃತನಂದು ಕಂಡು ಮಿಗೆ ಕೂಗೆ ಭಯಂಬಡೆದೇಳ್ವ ಕಣ್ಣನೀ ॥
ಸ್ಸರಿವವೊಲಾಕೆ ತದ್ವಿಕಚ ಪುಷ್ಪಗಳನ್ಮಧುಬಿಂದು ತೋರುಗುಂ ॥

(ರಾಜಶೇಖರ ವಿಳಾಸ-೧೦-೭೫)

[ಹೂವಿನ ಹುಡಿಯೆಂಬ ನೂತನವಾದ ಮಂಕುಬೂದಿಯನ್ನೊಗೆದು, ಭ್ರಮರ ಪಂಕ್ತಿಯೆಂಬ ಮಲ್ಲಿಕಾ ರಮಣಿಯ ನೀಲ ಮಣಿ ಹಾರವನ್ನು ಹರಣ ಮಾಡುವ ಗಾಳಿಯೆಂಬ ಚೋರನನ್ನು ಕಂಡು ಕೋಗಿಲವು ಚೆನ್ನಾಗಿ ಕೂಗಿತು. ಆ ಕೂಗನ್ನು ಕೇಳಿದೊಡನೆ ಮಲ್ಲಿಕೆಯು ಕಣ್ಣೀರು ಸುರಿಸುವಂತೆ ಅವಳ ಅರಳಿದ ಪುಷ್ಪಗಳಿಂದ ಹೊರಚೆಲ್ಲುವ ಮಕರಂದ ಬಿಂದುಗಳು ತೋರುವವು] ತುಡುಗನು ಮನೆಯವರಿಗೆ ಎಚ್ಚರವಾಗದಂತೆ ಮಂಕು ಬೂದಿಯನ್ನಿಕ್ಕಿ ಮನೆಯಲ್ಲಿಯ ಅಮೌಲ್ಯ ವಸ್ತುಗಳನ್ನು ಅಪಹರಿಸುತ್ತಿರಲು ಆರಾವರೂ ಅವರನ್ನು ಎಚ್ಚರಗೊಳಿಸಿದರೆ ಅಬಲೆಯರು ದುಃಖದಿಂದ ಕಣ್ಣೀರು ಸುರಿಸುವರು.

ಮಾರುತನು ಪರಾಗವನ್ನು ಎಲ್ಲ ಕಡೆಯಲ್ಲಿಯೂ ಹರಡಿದನು; ಮಲ್ಲಿಕಾಲತೆಗಳನ್ನು ಅಲ್ಲಾಡಿಸಿದನು; ಕೂಡಲೆ ಭ್ರಮರಗಳು ಮೇಲಕ್ಕೆ ಹಾರಿದವು. ಆದುದರಿಂದ ಕುಸುಮರಸವು ಕೆಳಗೆ ಸುರಿಯಹತ್ತಿತು. ಇಷ್ಟು ಸಂಗತಿಗಳನ್ನು ಲಕ್ಷ್ಯದಲ್ಲಿಟ್ಟರೆ ಕವಿಯ ಅಭಿಪ್ರಾಯವು ಚೆನ್ನಾಗಿ ತಿಳಿಯುತ್ತದೆ. ಎಲ್ಲ ಕಡೆಗೆ ಹರಡಿದ ಪುಷ್ಪಪರಾಗವೇ ಚೋರನೊಗೆದ ಮಂಕುಬೂದಿಯು. ಮೇಲಕ್ಕೆ ಹಾರಿದ ಭ್ರಮರ ಪಂಕ್ತಿಯೇ ಮಾರುತನೆಂಬ ಚೋರನು ಅಪಹರಿಸಲೆಳಸಿದ ಇಂದ್ರ ನೀಲಮಣಿ ಮಾಲೆಯು. ಪರಭೃತ (ಕೋಕಿಳ) ನು ಎಚ್ಚರಗೊಳಿಸುವವನು. ಮಲ್ಲಿಕೆಯು ಅಬಲೆಯಾದುದರಿಂದ ಪ್ರತೀಕಾರ ಮಾಡಲು ಅಸಮರ್ಥಳು.

ತನ್ನ ನೀಲ ಮಣಿ ಮಾಲೆಯು ಹೋದುದಕ್ಕೆ ವ್ಯಥೆಪಟ್ಟು ಮುಕ್ತಿಂದ ಬಿಂದು ಗಳೆಂಬ ಕಣ್ಣೀರು ಸುರಿಸಿದಳು.

ಪರಭೃತ=ಕೋಕಿಲೆ (ಪರೈಃ=ವಿಜಾತೀಯ ಪಕ್ಷಿಗಳಿಂದ, ಭೃತ=ಪೋಷಿಸಲ್ಪಟ್ಟುದು. ಕೋಗಿಲೆಯು ತನ್ನ ತತ್ತಿಗಳನ್ನು ಕಾಗಿಯ ಗೂಡಿನಲ್ಲಿಡುವದು ಸರ್ವಶ್ರುತ.)

॥ ಚಂಪಕ ಮಾಲಾ ॥

ಇನನುಳಿದಂ ವಸಂತನುಮುಮರ್ಚಿದ ನಿತ್ತಲು ಮಗ್ನಿಯಿತ್ತ ಸ।
ಮ್ಮನಿಸಿದ ರಕ್ಕಸಂ ಬಳಿಕಮಾಂ ನಡುವೆಂಬವೊಲಾದುದಾನೆ ಭಾ ॥
ಜನಮೆನಿಸಿರ್ದೆನಂತಕನ ಡುರ್ಕೆಗೆ ಪೋ ಪೆರತಾವುದೆಂಬ ದು।
ರ್ಮನದೊಳೆ ದಕ್ಷಿಣಾಶೆ ನಿಡುಸುಯ್ವವೊಲಾದುದು ದಕ್ಷಿಣಾನಿಲಂ ॥

(ಚಂದ್ರಪ್ರಭ ಪುರಾಣ-೭-

[ದಕ್ಷಿಣದಿಕ್ಕೆಂಬ ಅಂಗನೆಯು " ಇನನು (ಪತಿಯು-ಸೂರ್ಯನು) ಬಿಟ್ಟನು. ವಸಂತನು (ವಿಟನು-ಋತುವು) ಹತ್ತಿರಕ್ಕೆ ಬಂದನು. ಇತ್ತಕಡೆಗೆ ಅಗ್ನಿಯು; ಮತ್ತೊಂದು ಕಡೆಗೆ ರಕ್ಕಸನು (ನೈರ್ಋತಿಯು) ನಾನು ನಡುವೆ ಸಿಕ್ಕಿಕೊಂಡೆನು. ಇದಲ್ಲದೆ ಯಮನ ಮುತ್ತುವಿಕೆಗೆ ನಾನೇ ಈಡಾಗಿರುವೆನು. ಹೋಗು ಇನ್ನು ಬೇರೆ ಏನು? (ಇನ್ನೆಷ್ಟು ನನ್ನ ದುರವಸ್ಥೆಯಾಗಬೇಕು?) " ಹೀಗೆ ಮರುಗಿ ದುಮ್ಮಾನದಿಂದ ನಿಟ್ಟುಸುರು ಬಿಡುತ್ತಲಿರುವಳೆಂಬಂತೆ ತೆಂಗಾಳಿಯು ಮೆಲ್ಲನೆ ಬೀಸಹತ್ತಿತು.]

'ಕಾವ್ಯ ವಾಙ್ಮಯದಲ್ಲಿ ಸೂರ್ಯಾಸ್ತ ಚಂದ್ರೋದಯ ಋತುಧರ್ಮಗಳು ಮೊದಲಾದ ನಮ್ಮ ಕಣ್ಣೆದಿರಿಗಿರುವ ವ್ಯವಹಾರಗಳನ್ನೇ ಕವಿಗಳು ಕಲ್ಪನಾಶಕ್ತಿಯಿಂದ ವಿಚಿತ್ರವಾಗಿ ವರ್ಣಿಸುವರು.' ಎಂಬುದಕ್ಕೆ ಅಗ್ಗಳದೇವನ ಮೇಲಣ-ಪದ್ಯವೇ ಉದಾಹರಣೆಯು.

ದಕ್ಷಿಣದಿಕ್ಕೆಂಬ ಅಂಗನೆ, ಬಲಕ್ಕೆ ಆಗ್ನೇಯದಿಕ್ಕು (ಅಗ್ನಿಯ ವಾಸ) ಎಡಕ್ಕೆ ನೈರ್ಋತ (ರಾಕ್ಷಸನು); ಮತ್ತು ದಕ್ಷಿಣ ದಿಕ್ಕಿನಲ್ಲಿ ಯಮನ ವಾಸವು ಉತ್ತರಾಯಣದ ಆರಂಭದಲ್ಲಿ ದಕ್ಷಿಣದಿಂದ ಗಾಳಿಯು ಬೀಸಲಾರಂಭಿಸುವದು. ಆಗಳೆ ಸೂರ್ಯನು ದಕ್ಷಿಣವನ್ನು ಬಿಡಲಾರಂಭಿಸುವನು.

ಇಂದ್ರೋ ವಹ್ನಿಃ ಪಿತೃಪತಿರ್ನೈರ್ಋತೋ ವರುಣೋ ಮರುತ್ ॥
ಕುಬೇರ ಈಶಃ ಪತಯಃ ಪೂರ್ವಾದೀನಾಂ ದಿಶಾಂ ಕ್ರಮಾತ್ ॥

ಇಂದ್ರ, ಅಗ್ನಿ, ಯಮ, ನೈಋತ, ವರುಣ, ವಾಯು, ಕುಬೇರ, ಮಹಾದೇವ ಇವರು ಪೂರ್ವ, ಆಗ್ನೇಯ, ದಕ್ಷಿಣ ಮೊದಲಾದ ದಿಕ್ಕುಗಳಿಗೆ ಕ್ರಮವಾಗಿ ಅಧಿಪತಿಗಳು.

॥ ಮತ್ತೇಭವಿಕ್ರೀಡಿತ ॥

ತಳಿರಂ ಮೆಲ್ಲನೆ ನೂಂಕಿ ಮಾಮಿಡಿಗಳಂ ಸೆಂಡಾಡುತಂ ಕೂಡೆ ಪೂ।
ಗಳ ದೂಳಿಂ ಪೊರೆಯೇರುತುಂ ಸೊನೆಗಳೊಳ್ ನೀರಾಟಮಂ ಮಾಡುತುಂ ॥
ಬಳಿಯಂ ಕೈಮಿಗೆ ಬರ್ಪ ತುಂಬಿಯುಲಿಯಿಂದಂ ಡಂಗುರಂಬೊಯ್ಸುತುಂ।
ತೆಳರ್ದೇಂ ಬಂದುದೊ ಕಾವನಾನೆಯವೊಲಾ ತಣ್ಗಾಳಿ ತನ್ನಿಚ್ಚೆಯಿಂ ॥

(ಕಬ್ಬಿಗರ ಕಾವ-೯೮)

[ಚಿಗುರೆಲೆಗಳನ್ನು ಮೆಲ್ಲನೆ ನೂಂಕುತ್ತಲೂ, ಮಾವಿನ ಮಿಡಿಗಳನ್ನು ಚೆಂಡಾಡುತ್ತಲೂ, ಪುಷ್ಪಪರಾಗದಿಂದಸಾಂದ್ರವಾಗುತ್ತಲೂ(ಪುಷ್ಪವಾಗುತ್ತಲೂ) ರಸಪ್ರವಾಹದಲ್ಲಿ ನೀರಾಟವನ್ನಾಡುತ್ತಲೂ, ಬಹಳೇ ಸಮೀಪಕ್ಕೆ ಬಂದಂತಹ ತುಂಬಿಯ ದನಿಯೆಂಬ ಡಂಗುರವನ್ನು ಹೊಯ್ಸುತ್ತಲೂ ಹೊರಟು ತಂಗಾಳಿಯು ಕಾಮನ ಆನೆಯಂತೆ ಸ್ವೈರದಿಂ ಬಂದಿತು.]

“ಆಂಡಯ್ಯನು ವನಪಾಲಕನ ಅರಿಕೆಯ ಮೇಲೆ ಮನ್ಮಥನ ಅಪರಾವತಾರವಾದ ರಾಜನು ಹೂದೋಟವನ್ನು ಪ್ರವೇಶಿಸಿದ ಸಮಯದಲ್ಲಿ ಆತನ ಇದಿರಿಗೆ ಬೀಸಿದ ವಾಯುವನ್ನು ಕಾಮನ ಆನೆಯೆಂದು ಉತ್ಪ್ರೇಕ್ಷಿಸಿ ತನ್ನ ಪ್ರತಿಭಾಶಕ್ತಿಯನ್ನು ತೋರಿಸಿಕೊಂಡಿರುತ್ತಾನೆ. ಇಲ್ಲಿ ಆನೆಯ ವ್ಯಾಪಾರಗಳೆಲ್ಲವೂ ಹೇಳಲ್ಪಟ್ಟಿರುವವು. ಅದರ ಕ್ರೌರ್ಯವು ಮಾತ್ರ ಕಾಣಬರುವುದಿಲ್ಲ. ಹೀಗೆ ಕ್ರೌರ್ಯವಿಲ್ಲದ ಆನೆಯಂತೆ ವರ್ಣಿಸುವುದು ನಾಯಕನ ಸ್ಥಿತಿಯನ್ನು ನೋಡಿಯೇ ಎಂದು ಹೇಳಬೇಕು. ನಾಯಕನೋ ನನೆಯಂಬನು (ಮನ್ಮಥನು.) ಅವನ ಪೋಳಲೋ ಪೂವಿನ ಪೊಳಲು. ಆದುದರಿಂದ ಅಲ್ಲಿಯ ಆನೆಗಳಲ್ಲಿ ಕ್ರೌರ್ಯವಿರಲೇ ಕೂಡದು. ಮತ್ತು ಆ ಆನೆಗಳೂ ಶೃಂಗಾರ ಶೇಖರರು ಆಗಿರಬೇಕಲ್ಲವೇ ಇಲ್ಲಿ ಆನೆಯಂತೆ ಉತ್ಪ್ರೇಕ್ಷೆ ಮಾಡುವುದರಲ್ಲಿ ಕವಿಯ ಮತ್ತೊಂದು ಭಾವವೇನೆಂದರೆ:—

ಎಂತಹ ವಿರಾಗಿಗಳಾದರೂ ಈ ವನ ಪ್ರವೇಶವನ್ನು ಮಾಡಿದರೆ ಸರಾಗಿಗಳಾಗದೆ ಬಿಡರು. ಪ್ರವೇಶ ಕಾಲದಲ್ಲಿಯೇ ಕಣ್ಣಿಗೆ ಗೋಚರಿಸದಂತೆ ಮೆಲ್ಲಮೆಲ್ಲನೆ ಸುಳಿಯುವ ತಂಗಾಳಿಯೇ ಆನೆಯಂತೆ ತೊರನುಗ್ಗಿ ವಿರಾಗಿಗಳನ್ನು ತುಳಿಯುತ್ತ ಬರುವಾಗ, ಆ ತೋಟದಲ್ಲಿ ನಿತ್ಯ ವಾಸ ಮಾಡುವ ಮನ್ಮಥನ ಇತರ ಸೇನಾಪ್ರಧಾನ ಪ್ರಕರವು ಒಳಗೆ ಹೊಕ್ಕವರನ್ನು ಏನೇನು ಮಾಡಿ ಬಿಡುವದೋ ಎಂಬ ಭೀತಿಯು ವಿರಾಗಿಗಳ ಎದೆಯಲ್ಲಿ ಹುಟ್ಟಿ ಮೊಳೆದೋರಬೇಕಲ್ಲವೇ, “ತುಂಬಿಯುಲಿಯಿಂ ಡಂಗುರಂ ಬೊಯ್ಸುತುಂ” ಎಂಬುದು ಸಂದರ್ಭಕ್ಕೆ ಉಚಿತವಾದ ವಿಶೇಷಣವೆಂದು ಪರ್ಯಾಲೋಚಿಸಿದರೆ ತಿಳಿದು ಬರುವುದು.”

(ಕವಿ ಸಮಯ)

॥ ಚಂಪಕ ಮಾಲಾ ॥

ಮುದದೊದವಿಂ ತದೀಯ ವನಲಕ್ಷ್ಮಿ ವಸಂತ ನೃಪಾಲಕಂಗೆ ತಾಂ ।
ಪದೆಪಿನೊಳೊಕ್ಕುತಿರ್ಪ ಕುಸುಮಸ್ತಬಕೋನ್ನತ ಚಾಮರಾಳಿಯೋ ॥
ಉದಿಸೊಗೆತರ್ಪ ವಾಯುವೆನೆ ಕಂಪಿನ ಸೊಂಪೆನೆ ತಾಳ್ದಿ ನಾಡೆ ತೀ ।
ಡಿದುದಿದಿರ್ಗೊಂಬವೊಲ್ ವನ ಸಮೀರಣ ನಂಗಜ ರಾಜಕಾರಣಂ ॥

(ಶಾಂತೀಶ್ವರ ಪುರಾಣ.—೧೦-೭೪.)

[ಆನಂದಾತಿಶಯದಿಂದ ಅವನ (ವಜ್ರಾಯುಧ ನೃಪನ) ವನ ಲಕ್ಷ್ಮಿಯು ವಸಂತನೆಂಬ ಅರಸನಿಗೆ ಉಲ್ಲಾಸದಿಂದ ಬೀಸುತ್ತಿರುವ ಕುಸುಮಸ್ತಬಕ (ಪುಷ್ಪ ಗುಚ್ಛ) ಗಳೆಂಬ ಉತ್ಕೃಷ್ಟವಾದ ಚಾಮರಗಳ ಸಮೂಹದಿಂದ ಉತ್ಪನ್ನವಾದ ವಾಯುವೋ ಏನೋ ಎಂದೆನ್ನುವಂತೆ ಪರಿಮಳದ ಸೌಭಾಗ್ಯವನ್ನು ಧರಿಸಿ ಮನ್ಮಥನ ಕುಶಲ ಸಚಿವನಾದ ವನ ಮಾರುತನು (ರಾಜನಿಗೆ) ಇದಿರು ಬರುವಂತೆ ಚೆನ್ನಾಗಿ ಬೀಸಿದನು.]

ವಜ್ರಾಯುಧ ನೃಪಾಲನು "ಸುರವರ ಲೀಲೆವೆತ್ತು ವನಕೇಳಿಗೆ ಯೋಗ್ಯ ಮಪ್ಪರಿಂ ಪರಿವೃತನಾಗಿ ವನಾಂತರಮುಂ ಪುಗುತಂದಂ." ಇವನಿಗೆ ಅಭಿಮುಖವಾಗಿ ಗಾಳಿಯು ಬೀಸುತ್ತಲಿದ್ದಿತು. ಶೃಂಗಾರೈಕರಸನಾದ ಮನ್ಮಥನು ವಿಲಾಸೋನ್ಮುಖನಾದ ಅರಸನನ್ನು ಇದಿರಿಗೆ ಹೋಗಿ ಸ್ವಾಗತ ಪೂರ್ವಕವಾಗಿ ಕರೆದುಕೊಂಡು ಬರುವುದಕ್ಕಾಗಿ ಕಳುಹಿದ ವಿನೋದ ಚತುರನಾದ ಸಚಿವನೆಂದು ಕವಿಯು ಗಾಳಿಯನ್ನು ವರ್ಣಿಸಿದ್ದಾನೆ. ವನವಿಹಾರಕ್ಕಾಗಿ ಉತ್ಸುಕನಾಗಿ ಬಂದ ವಜ್ರಾಯುಧ ನೃಪನಿದಿರಿಗೆ ಸಮೀರಣನು ಸೌರಭ್ಯವನ್ನು ಸೂರೆ ಮಾಡುತ್ತ ವಿನಯದಿಂದ ಸುಳಿದನೆಂಬುದು ಔಚಿತ್ಯವನ್ನು ವ್ಯಕ್ತ ಪಡಿಸುತ್ತವೆ. "ವಾಯುವಿನಲ್ಲಿ ಮಾಂದ್ಯ ಶೈತ್ಯ, ಸೌರಭ್ಯ ರೂಪವಾದ ಗುಣಗಳು ಇರಬೇಕು. ಅವುಗಳಿಲ್ಲದಿದ್ದರೆ ವಾಯುಚಲನವು ಆಹ್ಲಾದಕರವಾಗಿಯೂ, ಹಿತಕರವಾಗಿಯೂ ಇರದು. ಈ ಗುಣಗಳನ್ನಿಟ್ಟುಕೊಂಡು ಸಂದರ್ಭೋಚಿತವಾಗಿ ರಸೋತ್ತೇಜಕ ವಾಗುವಂತೆ ವರ್ಣಿಸುವ ನಿಮಿತ್ತ ಪುಂಸ್ತ್ವಾರೋಪಣವನ್ನು ಮಾಡಿ ಕವಿಗಳು ವರ್ಣಿಸುವ ಸಂಕೇತವುಂಟು."

ವನಲಕ್ಷ್ಮಿಯು ಕೋಮಲಳು ವಸಂತನೃಪನಿಗೆ ಇವಳು ಬೀಸುವ ಕುಸುಮ ಸ್ತಬಕಗಳ ಚಾಮರಗಳಿಂದ ಉತ್ಪನ್ನವಾಗುವ ವಾಯುವು ಮೃದುವಾದುದೂ ಶೈತ್ಯ-ಸೌರಭ್ಯಗಳಿಂದ ಕೂಡಿದುದೂ ಇರಲಿಕ್ಕೆ ಬೇಕು. ಇಂತಹ ಗುಣಗಳಿಂದ

ಯುಕ್ತವಾದ ಗಾಳಿಯು ಆನೆಯನ್ನು ಪ್ರಮೋದ ರಸದಲ್ಲಿ ಮುಳುಗಿಸಿದಂತೆ ನಮ್ಮನ್ನಾದರೂ ಮುಳುಗಿಸಲಿಕ್ಕಿಲ್ಲವೇ?

"ಸಾಡೆ, ಎಡೆ, ಆವಗಂ, ನೆರೆ, ನೀಡುಂ, ಕರಂ, ಆದಂ, ಎಯ್ದೆ, ನೊಳದು, ಪಿರಿದುಂ, ನೀಡು, ಮಿಗೆ, ಕೆನ್ನಂ – ಇವು ಅಧಿಕಾರ್ಥ ಬೋಧಕಾವ್ಯಯಂಗಳ್."

—ಶ ದ. ಸೂ--೨೦೪ [ವೃತ್ತಿ]

॥ ಮಹಾ ಸ್ರಗ್ಧರಾ ॥

ಅನುಸಿಂಚತ್ಸಲ್ಲಕೀ ಶೀಕರ ಪರಿಚಯದಿಂ ಶೀತಶೀತಂ ಲತಾಲಿಂ।
ಗನದಿಂದಾ ಮಂದಮಂದಂ ಫಣಿವಿಶಸನದಿಂ ಭೀತಭೀತಂ ಚಳಚ್ಚಂ॥
ದನ ಶಾಖಾಂದೋಳದಿಂದಂ ಚಕಿತ ಚಕಿತ ಮಾಯ್ತು ಚ್ಚರತ್ಕೀಚಕಪ್ರ
ಸ್ವನಿಕಂ ವಾನೇಯ ನಾಗಸ್ಫುಟಿತ ಕಟಮದಾಮೋದಭಾರಂ ಸಮೀರಂ ॥

(ಅರ್ಧನೇಮಿಪುರಾಣ-೫-೯೬.)

[ಸಲ್ಲಕೀ ವೃಕ್ಷಗಳಿಂದ ಸೋರುವ ರಸಬಿಂದುಗಳ ಸಂಸರ್ಗದಿಂದ ಬಹಳ ಶಿತಲವಾದುದೂ, ಲತಾಲಿಂಗನದಿಂದುಂಟಾದ ಜಾಡ್ಯದಿಂದ ಮಂದವಾದುದೂ, ಹಾವುಗಳ ಕಡತಕ್ಕೆಭೀತಿಗೊಳಗಾದುದೂ, ಕೀಚಕ (ಬಿದುರು) ಗಳ ನಿಸ್ವನದಿಂದ ಕೂಡಿದುದೂ, ವನಗಜದ ಬಿರಿದ ಗಂಡಸ್ಥಳದಿಂದ ಹೊರಟ ಮದೋದಕದ ಸುವಾಸನೆಯಿಂದ ತುಂಬಿದುದೂ, ಆದ ಗಾಳಿಯು ತೂಗಾಡಿ ಹೊಯ್ದಾಡುವ ಚಂದನ ಶಾಖೆಗಳಿಂದ ಚಕಿತವಾಯಿತು.]

ಅರಣ್ಯ ಮಧ್ಯದಲ್ಲಿ ವಸುದೇವ ಕುಮಾರನು ತೊಳಲಿ ಬಳಲುತ್ತಿರುವಾಗ ಅವನ ಶ್ರಮಪರಿಹಾರಾರ್ಥವಾಗಿ ಬಂದ ಮಂದ ಸಮೀರಣನ ವರ್ಣನೆಯಿದು.

ಸಲ್ಲಕೀ ವೃಕ್ಷವು ಆನೆಗಳಿಗೆ ಪ್ರಿಯಕರವಾದುದು. ಆತೇ ಅದಕ್ಕೆ 'ಗಜಪ್ರೇಮಿ' ಎಂದೆನ್ನುವರು. ಆನೆಗಳು ಅದರ ಕೊಂಬೆಗಳನ್ನು ಮುರಿದು ತಿನ್ನುವುದುಂಟು ಆದುದರಿಂದ ರಸವು ಸೋರುವುದು ಸ್ವಾಭಾವಿಕವು. ವಾಯುವು ಅದರ ತುಂತುರ್ವನಿಗಳಿಂದ ಶೀತಲವಾಯಿತು.

ಲತೆಗಳ ಮೂಲಕವಾಗಿ ಮಾರುತನ ಸ್ವಚ್ಛಂದ ಗತಿಗೆ ಅವಕಾಶವಿರಲಿಲ್ಲವಾದುದರಿಂದ ಅವನು ಮೆಲ್ಲನೆ ಬೀಸುತ್ತಲಿದ್ದನು. ಆದರೆ ಕವಿಯು ಅವನಲ್ಲಿ ನಾಯಕತ್ವವನ್ನು ಆರೋಪಿಸಿ ಲತಾ ವಧುವಿನಲ್ಲಿ ಆಲಿಂಗನ ಸುಖವನ್ನನುಭವಿಸಿದನೆಂದೂ, ತನ್ಮೂಲಕವಾಗಿ ಅವನಿಗೆ ಸುರತಗ್ಲಾನಿಯುಂಟಾಯಿತೆಂದೂ ಆದುದರಿಂದಲೇ ಅವನಿಗೆ ಜಾಡ್ಯವುಂಟಾಗಿ ಗತಿಯು ಮಂದವಾಯಿತೆಂದೂ ಹೇಳಿದ್ದಾನೆ.

ಚಂದನ ವೃಕ್ಷಗಳಲ್ಲಿ ಸರ್ಪಗಳು ವಾಸ ಮಾಡುತ್ತವೆ. ಮಂದ ಮಾರುತನು ಗಂಧ ಪ್ರಿಯನಾದುದರಿಂದ ಅವುಗಳ ಸುವಾಸನೆಗಾಗಿ ಹತ್ತಿರಕ್ಕೆ ಹೋಗಲು ಹಾವುಗಳನ್ನು ನೋಡಿ ಭಯಾಕುಲನಾದನು. ಭೀತಿಗೊಳಗಾದವನ ಕಾಲುಗಳೂ ಕೂಡ ಕೀಳುವುದಿಲ್ಲವೆಂಬುದು ಅನುಭವ ಸಿದ್ಧವಾದುದು.

ಗಾಳಿ ಬೀಸಲು ಗಿಡಗಳ ಸೆಳೆಗೊಂಬುಗಳು ಹೊಯ್ದಾಡಹತ್ತಿದುವು. ಮಾರುತನು ಭರದಿಂದ ಮುಂದಕ್ಕೆ ಸಾಗುತ್ತಿರಲು, ಹೊಯ್ದಾಡಿ ಹಿಂದಕ್ಕೆ ಬರುವ ರೆಂಬೆಗಳ ಹೊಡತದಿಂದ ಚಕಿತನಾಗಿ ಸ್ತಬ್ಧನಾದನೆಂಬುದನ್ನು ಕವಿಯು ಉಚಿತ ಶಬ್ದಗಳಿಂದ ಚೆನ್ನಾಗಿ ಚಿತ್ರಿಸಿದ್ದಾನೆ.

'ಕೀ' ಇತಿ ಚಕತಿ ಕೀಚಕಃ (ಬಿದಿರುಗಳ ರಂಧ್ರಗಳಲ್ಲಿ ಗಾಳಿ ಸೇರಿ 'ಕೀ' ಎಂಬ ಸಪ್ಪಳವಾಗುವುದಾದುದರಿಂದ ಅವುಗಳಿಗೆ ಕೀಚಕಗಳೆಂಬ ಹೆಸರು ಬಂದಿವೆ.)

ಶೈತ್ಯ, ಮಾಂದ್ಯ, ಸೌರಭ್ಯ ಮುಂತಾದ ವಾಯುವಿನ ಗುಣಗಳು ಈ ಪದ್ಯದಲ್ಲಿ ಸ್ಪಷ್ಟವಾಗಿ ವ್ಯಕ್ತವಾಗವೆ.

ಗಜಭಕ್ಷ್ಯಾ ತು ಸುವಹಾ ಸುರಭೀ ರಸಾ॥
ಮಹೇರಣಾ ಕುಂದುರುಕೀ ಸಲ್ಲಕೀ ಹ್ಲಾದಿನೀತಿ ಚ॥

(ಸಲ್ಲಕಿಯ ಬೇರೆ ಬೇರೆ ಹೆಸರುಗಳು ಈ ಶ್ಲೋಕದಲ್ಲಿ ಕೊಡಲ್ಪಟ್ಟಿವೆ ಸಲ್ಲಕಿಗೆ ಗಜಭಕ್ಷ್ಯಾ ಎಂಬ ಹೆಸರೇ ಇದೆ. ಸತ್ಕೃತ್ಯ [=ಆದರದಿಂದ] ಲಕ್ಷ್ಯತೇ (=ಆಸ್ವಾದಿಸಲ್ಪಡುತ್ತದೆ.) ಗಜೈಃ [=ಆನೆಗಳಿಂದ] ಎಂದು ಸಲ್ಲಕೀ ಎಂಬುದಾದ.)

॥ ಕಂದ ॥

ಸರಳ ಲತಾ ಲಾಸ್ಯ ನಟಂ।
ಹರಿಣೀ ರೋಮಂಥ ಬಂಧುರಂ ಲವಲೀ ಮ॥
ರ್ಮರ ಮುಖರಂ ಕವಿಕರ ಶೀ।
ಕರ ಶೀತಳ ಮೆಸಗಿದತ್ತರಣ್ಯ ಸಮೀರಂ॥

[ಪಂಪ ರಾಮಾಯಣ-೭-೧೧೩]
ಮತ್ತು ಮಲ್ಲಿನಾಥ ಪುರಾಣ—೧೦—೫೩.

[ಸರಳ ಲತೆಗಳಿಗೆ ನರ್ತನವನ್ನು ಕಲಿಸುವ ನಾಟ್ಯಾಚಾರ್ಯನೂ, ಹರಿಣಿಯ ರೋಮಂಥ ಕ್ರಿಯೆ (ಮೆಲುಕಾಡಿಸುವಿಕೆ) ಯಿಂದ ರಮಣೀಯವಾದುದೂ, ಲವಲೀ ವಲ್ಲರಿಗಳ 'ಮರ್ಮರ' ಧ್ವನಿಯಿಂದ ಕೂಡಿದುದೂ, ಆನೆಯ ಸೊಂಡಿಲಿನಿಂದ ಸಿಡಿದ ತುಂತುರ್ವನಿಗಳಿಂದ ಶೀತಳವಾದುದೂ ಆದ ವನಮಾರುತನು ಶೋಭಿಸಿದನು.]

ಗಂಟಿಲ್ಲದೆ ಎತ್ತರವಾಗಿ ಬೆಳೆಯುವುದಾದುದರಿಂದ ಸರಳ ಲತೆಯೆಂಬ ಹೆಸರು.

ಚಿಗರಿಗಳು ಮೆಲ್ಲನೆ ಮೆಲಕಾಡಿಸುವಂತೆ ಗಾಳಿಯಾದರೂ ಮೆಲ್ಲನೆ (ಮಂದ ವಾಗಿ) ಬೀಸುತ್ತಲಿದ್ದಿತೆಂಬುದನ್ನು ತಿಳಿಸುವುದಕ್ಕಾಗಿಯೇ "ಹರಿಣೀ ರೋಮಂಥ ಬಂಧುರಂ" ಎಂಬ ವಿಶೇಷಣವನ್ನುಪಯೋಗಿಸಿದ್ದಾನೆ.

ಸರಳ ಲತೆಯು ನಮ್ಮೆದಿರಿಗೆ ಪ್ರತ್ಯಕ್ಷವಾಗಿ ನರ್ತನ ಮಾಡುತ್ತಿರುವಂತೆಯೂ, ಲವಲೀ ಲತೆಯ ಮನೋಹರವಾದ ಮರ್ಮರವು ನಮ್ಮ ಕಿವಿಯಲ್ಲಿ ಸುಳಿಯುತ್ತಿರುವಂತೆಯೂ ಈಗಲೂ ನಮಗೆ ಭಾವನೆಯಾಗುತ್ತಲಿದೆ.

॥ ಕಂದ ॥

ಅಳಿ ನಿನದದ ಮದಕೋಕಿಳ।
ಕಳ ನಿನದದ ಜತಿಯೊಳಭಿನಯಂ ನೆಗಳ್ವಿನೆಗಂ॥
ಲಳಿತಮನೇನಾಡಿಸಿದನೊ।
ಮಳಯಾನಿಳ ನರ್ತಕಂ ಲತಾ ನರ್ತಕಿಯಾ॥

(ಆದಿ ಪುರಾಣ—೧೧—)

[ಮಲಯ ಮಾರುತನೆಂಬ ನಟನು, ಭ್ರಮರಗಳ ಇಂಪಾದ ಸ್ವರದ ಮತ್ತು ಉನ್ಮತ್ತವಾದ ಕೋಕಿಳಗಳ ಪಂಚಮ ದಿಂಚರದ ಲಯದಲ್ಲಿ ಅಭಿನಯವನ್ನು ಅಭ್ಯಾಸಿಸುವಂತೆ ಲತೆಯೆಂಬ ನರ್ತಕಿಯಿಂದ ಸೊಬಗು ಕೈಮಿಗೆ ಲಲಿತ ನೃತ್ಯವನ್ನು ಮಾಡಿಸಿದನು.]

ಸುಕುಮಾರ ತಯಾಂಗಾನಾಂ ವಿನ್ಯಾಸೋ ಲಲಿತಂ ಭವೇತ್ (ಸಾಹಿತ್ಯ ದರ್ಪಣ ಕಾರಿಕಾ ೧೪೪) ಕೋಮಲವಾದ ಅಂಗವಿನ್ಯಾಸಕ್ಕೆ ಲಲಿತವೆಂಬ ಹೆಸರು.

॥ ಉತ್ಪಲ ಮಾಲಾ ॥

ಪಕ್ಷದಿನೊಲ್ದು ಬರ್ಪಳಿ ವಧೂಟಿಗೆ ಗಂಧಮನಿತ್ತು ಸೋಂಕಿ ತಾ।
ನಾ ಕ್ಷಣಮಾಗಿಸುತ್ತೆ ಲತಿಕಾಂಗನೆಗಂಕುರ ರೋಮ ಹರ್ಷಮಂ॥
ವೀಕ್ಷಿಸಿ ಪದ್ಮಿನೀ ವನಿತೆಗೀಯುತೆ ಶೀಕರ ತಾರ ಹಾರಮಂ।
ದಕ್ಷಿಣ ವಾಯು ತೀಡಿದುದು ದಕ್ಷಿಣ ನಾಯಕನಂತೆ ಚೈತ್ರದೊಳ್॥

(ಶೃಂಗಾರ ಸಾರ —೯—೫೫.)

[ತಂಡು ತಂಡಾಗಿ ಹರ್ಷದಿಂದ ಬರುವ ತುಂಬಿಯೆಂಬ ತನ್ನಿಗೆ ಗಂಧವನ್ನು ಕೊಟ್ಟು, ಲತಿಕಾ ಲಲನೆಗೆ ಸ್ಪರ್ಶನಮಾಡಿ ಅವಳ ಮೈಮೇಲೆ ಅಂಕುರಗಳೆಂಬ ಹರ್ಷ ಪುಳಕಾವಳಿಯನ್ನುಂಟು ಮಾಡುತ್ತ ಪದ್ಮಿನಿಯೆಂಬ ಪ್ರಮದೆಯನ್ನು ಅನುರಾಗದಿಂದ ನೋಡಿ, ಸೀರ್ಪನಿಗಳೆಂಬ ರುಚಿರವಾದ ಮೌಕ್ತಿಕ ಮಾಲೆಯನ್ನು ಕೊಟ್ಟು ತೆಂಗಾಳಿಯು ಶೃಂಗಾರದಕ್ಷನಾದ ನಾಯಕನಂತೆ ವಸಂತ ಮಾಸದಲ್ಲಿ ಸೊಗಸಿನಿಂದ ತೀಡಿದುದು.]

ದಕ್ಷಿಣ ನಾಯಕಃ-ಅನುಕೂಲ, ದಕ್ಷಿಣ, ಧೃಷ್ಟ, ಶಠ (ಕುಟಿಲ) ಇವರು ಶೃಂಗಾರ ನಾಯಕರು.

ಅಕ್ಷೀಣ ಪ್ರೇಮದೊಳುಪ ।
ಲಕ್ಷಿತ ಮಾಗಿರ್ದ ಸಂಭ್ರಮಂಗಳನಾ ಪ್ರೇ ॥
ಮಕ್ಷಿತಿಯೊಳ ಮನುಸಂಧಿಸೆ ।
ದಕ್ಷಿಣ ನಾಯಕ ನೆನಿಪ್ಪ ಪೆಸರಂ ಪಡೆಗುಂ ॥

(ಶೃಂಗಾರ ರತ್ನಾಕರ -೩-೮.)

“ ತುಲ್ಯೋಽನೇಕತ್ರ ದಕ್ಷಿಣಃ”- ಪ್ರತಾಪ ರುದ್ರೀಯ.

[ಅನೇಕ ನಾಯಿಕೆಯರಲ್ಲಿ ವೈಷಮ್ಯವಿಲ್ಲದೆ ಸ್ನೇಹವುಳ್ಳವನು ದಕ್ಷಿಣ ನಾಯಕನು.]

“ ದಕ್ಷಿಣೋಽಸ್ಯಾಂ ಸಹೃದಯಃ”- ದಶರೂಪಕ.

[ಮೊದಲಿನ ನಾಯಿಕೆಯಲ್ಲಿ ಅನುರಾಗದಿಂದ ವರ್ತಿಸುವವನೇ ದಕ್ಷಿಣ ನಾಯಕನು.]

॥ **ಚಂಪಕ ಮಾಲಾ** ॥

ಸಮಧಿಕ ಸೌಖ್ಯಮಾಗೆ ವನಲಕ್ಷ್ಮಿಗೆ ತಿದಿ್ದ ತಮಾಳ ನೀಳಕೇ ।
ಶಮನಿನಿಸುಳ್ಳರಲ್ಚಿ ಕಮಳಾನನಮಂ ಸ್ತಬಕ ಸ್ತನಾಗ್ರಮೊಳ್ ॥
ರಮಿಯಿಸಿ ಪಾಟಳಾಧರ ಸುಧಾರಸಮಂ ಸವಿದಳ್ಕರಿಂ ಲತಾಂ ।
ಗಮನ ಮರ್ದಪ್ಪಿ ದಕ್ಷಿಣ ವಿಟಂಗೆಣೆಯಾಯುದು ದಕ್ಷಿಣಾನಿಳಂ ॥

(ಮಲ್ಲಿನಾಥ ಪುರಾಣ-೫-೩೩.)

[ವನ ಲಕ್ಷ್ಮಿಗೆ ಸೌಖ್ಯವು ಹೆಚ್ಚುವಂತೆ ಅವಳ ತಮಾಲವೆಂಬ ನೀಲ ಕುಂತಲಗಳನ್ನು ತೀಡಿ, ಕಮಲವೆಂಬ ಮುಖವನ್ನು ಪ್ರಫುಲ್ಲವಾಗಿ ಮಾಡಿ

[ವಿಕಾಸಗೊಳಿಸಿ], ಪುಷ್ಪ ಗುಚ್ಛವೆಂಬ ಸ್ತನ ಪ್ರಾಂತದಲ್ಲಿ ವಿಹರಿಸಿ ಪಾಟಲವೆಂಬ ತುಟಿಗಳ ಅಮೃತವನ್ನು ಸವಿದು, ಲತಾಂಗವನ್ನು ಪ್ರೇಮ ಪರವಶನಾಗಿ ಅಪ್ಪಿ ತೆಂಗಾಳಿಯು ವಿಲಾಸಿಯಾದ ವಿಟನಿಗೆ ದೊರೆಯಾದುದು.] ವಿಲಾಸಿಗಳ ವ್ಯಾಪಾರಗಳೆಲ್ಲ ಇಲ್ಲಿ ಉಕ್ತವಾಗಿವೆ.

॥ ಮತ್ತೇಭ ವಿಕ್ರೀಡಿತ ॥

ಮಲಯಕ್ಷ್ಮಾಧರ ಮೇಖಲಾ ಪರಿಗತ ಶ್ರೀಖಂಡ ಷಂಡಂಗಳೊಳ್ ।
ನಲವಿಂದೊಂದಿ ಬಳಲ್ದ ಭೋಗಿ ಮಿಥುನಂಗಳ್ ಪೀರ್ದು ಪೀರ್ದಾದಮ ॥
ಗ್ಗಲಿಸಿರ್ದಾತ್ಮ ಕೃಶತ್ವಮಂ ಸುರಭಿವಾತಂ ತೂಳ್ದಿಪತ್ತುದ್ಯದು ।
ತ್ಕಲಿಕಾ ವ್ಯಾಕುಳ ಚೋಳ ಕೇರಳ ವಧೂ ನಿಶ್ವಾಸ ಸಂಪರ್ಕದಿಂ ॥

(ಅಗ್ಗಳ ಲೀಲಾವತಿ-೭-೩೦.)

[ಮಲಯ ಪರ್ವತದ ತಟ ಪ್ರದೇಶದಲ್ಲಿ ದಟ್ಟಾಗಿ ಬೆಳೆವ ಚಂದನ ವನದಲ್ಲಿ ನಲವಿಂದ ರತಿಸುಖವನ್ನನುಭವಿಸಿ ಬಳಲಿದ ಸರ್ಪ ದಂಪತಿಗಳು (ಸುರತ ಗ್ಲಾನಿಯನ್ನು ಕಳೆದುಕೊಳ್ಳುವುದಕ್ಕಾಗಿ) ತನ್ನನ್ನು ಸೇವಿಸಲು ತನಗೆ ಉತ್ಪನ್ನವಾದ ಕೃಶತ್ವವನ್ನು, ವಸಂತ ಮಾರುತನು ಉತ್ಕಂಠಾ ಪರವಶರಾದ ಚೋಳ-ಕೇರಳ ದೇಶಗಳ ಅಂಗನೆಯರ ಮುಖ ನಿಶ್ವಾಸ ಸಂಸರ್ಗದಿಂದ ಪರಿಹರಿಸಿಕೊಂಡು (ಆಪ್ಯಾಯಿತನಾಗಿ) ಬೀಸಿದನು.]

ಸರ್ಪ (ಭೋಗಿ) ಗಳು ವಾಯುಭಕ್ಷಣವನ್ನು ಮಾಡುತ್ತವೆ.

ಮಲಯ ಪರ್ವತವು ಚಂದನ ವೃಕ್ಷಗಳ ಕುಲಗೇಹವೆಂದು ಹಿಂದೆಯೇ ಹೇಳಿದೆ. ವಿರಹಾರ್ತರಾದ ಚೋಳ-ಕೇರಳ ವಧುಗಳ ಮುಖೋಚ್ಛ್ವಾಸ ಗಂಧದಿಂದ ದಕ್ಷಿಣಾನಿಲನು ಮಾಂದ್ಯವನ್ನು ಕಳೆದನೆಂಬುದೇ ಭಾವವು.

॥ ಕಂದ ॥

ಬಿಡದುಗುವ ಸೊಸೆಯ ಸೋನೆಯ ।
ಕಡುಗೆಸರೊಳ್ ಸಿಲ್ಕಿಬಂದ ಮಾವಿನ ಕೆಯ್ಯಂ ॥
ಪಿಡಿದಲ್ಲಿ ಮೆಲ್ಲಮೆಲ್ಲನೆ ।
ನಡೆವುದು ಕಣ್ಗುರುಡ ನಂತಿರುಪವನ ಪವನಂ ॥

(ಧರ್ಮನಾಥ ಪುರಾಣ-ಕವಿಚರಿತೆ.)

[ಉಪವನ ಮಾರುತನು, ಅಪಿಚ್ಛಿನ್ನವಾಗಿ ಹರಿಯುವ ಮಾವಿನ ಹಾಲ, ರಸ ಪ್ರವಾಹದ ಕರ್ದಮದಲ್ಲಿ ಸಿಕ್ಕು ಫಲಿತವಾದ ಮಾವಿನ ಕೈ ಹಿಡಿದು (ಕೊಂಬೆಯನ್ನು ಹಿಡಿದು) ಕುರುಡನಂತೆ ಆ ವನದಲ್ಲಿ ಮಂದ ಮಂದವಾಗಿ ಬೀಸುತ್ತಲಿದ್ದಿತು.]

"ಬಂದ ಮಾವೆಂದು ಫಲಿತ ರಸಾಲಂ" (ಕರ್ನಾಟಕ ಶಬ್ದ ಮಂಜರಿ.)

॥ ಮಹಾ ಸ್ರಗ್ಧರಾ ॥

ಮಲಯಕ್ಷ್ಮಾ ಭೃಲ್ಲಸಚ್ಚಂದನ ವೃತ ಫಣಿ ಪೀತಾವಶೇಷಾನಿಳಂ ಕೇ ।
ರಳ ಕಾಂತಾಸ್ಯಾರವಿಂದ ಶ್ವಸಿತ ಪವನನಾವಾಮನೇಭೋಗ್ರ ಹಸ್ತಾ ॥
ತುಳ ಫೂತ್ಕಾರೋದ್ಭವಾಂಭಃ ಕಣವೃತ ಮರುತಂ ತಾನೆನಲ್ ಮಾಂದ್ಯಸೌರ ।
ಭ್ಯ ಳಸಚ್ಛೈತ್ಯಂ ಪೊದಳ್ದಿಂತೆಸಗಿತೆಸೆದವಾಚೀ ಪ್ರಚಾರಂ ಸಮೀರಂ ॥

(ಶಾಂತೀಶ್ವರ ಪುರಾಣ – ೧೦ – ೨೮.)

[ಮಲಯ ಪರ್ವತದಲ್ಲಿಯ ರಮಣೀಯ ಚಂದನ ವೃಕ್ಷಗಳಲ್ಲಿ ವಾಸ ಮಾಡುತ್ತಲಿದ್ದ ಸರ್ಪಗಳಿಂದ ಸೇವಿಸಲ್ಪಟ್ಟು ಕೃಶತೆಯನ್ನು ಹೊಂದಿದುದೂ, ಕೇರಳ ದೇಶದ ಕಾಂತೆಯ ಮುಖೋಚ್ಛ್ವಾಸಗಂಧದಿಂದ ಕೂಡಿದುದೂ, ದಕ್ಷಿಣ ದಿಗ್ಗಜವಾದ ವಾಮನನ ಸೊಂಡಲಿನ ಫೂತ್ಕಾರದಿಂದ ನೆಗೆವ ನೀರ್ವನಿಗಳಿಂದ ಯುಕ್ತನಾದುದೂ ಆದ ತೆಂಗಾಳಿಯು ಮಾಂದ್ಯ, ಸೌರಭ್ಯ, ಶೈತ್ಯಗಳಿಂದ ಕೂಡಿ ಆಹ್ಲಾದಕರವಾಗಿ ಎಸೆಯಿತು.]

ಐರಾವತಃ ಪುಂಡರೀಕೋ ವಾಮನಃ ಕುಮುದೋಂಜನಃ ॥
ಪುಷ್ಪದಂತ ಸ್ಸಾರ್ವಭೌಮಃ ಸುಪ್ರತೀಕಶ್ಚ ದಿಗ್ಗಜಾಃ ॥

(ಐರಾವತ, ಪುಂಡರೀಕ, ವಾಮನ, ಕುಮುದ, ಅಂಜನ, ಪುಷ್ಪದಂತ, ಸಾರ್ವಭೌಮ, ಸುಪ್ರತೀಕ, ಇವುಗಳು ಪೂರ್ವ, ಆಗ್ನೇಯ, ದಕ್ಷಿಣ ಮೊದಲಾದ ದಿಕ್ಕುಗಳಲ್ಲಿರುವ ಆನೆಗಳ ಕ್ರಮವಾದ ಹೆಸರುಗಳು.)

ಪ್ರಾಚ್ಯವಾಚೀ ಪ್ರತೀಚ್ಯಸ್ತಾಃ ಪೂರ್ವ ದಕ್ಷಿಣ ಪಶ್ಚಿಮಾಃ ॥
ಉತ್ತರಾ ದಿಗುದೀಚೀಸ್ಯಾತ್

ಪ್ರಾಚೀ, ಅವಾಚೀ, ಪ್ರತೀಚೀ, ಉದೀಚೀ ಇವು ಕ್ರಮದಿಂದ ಪೂರ್ವ, ದಕ್ಷಿಣ, ಪಶ್ಚಿಮ, ಉತ್ತರ ದಿಕ್ಕುಗಳ ಹೆಸರುಗಳು.

॥ ಮಹಾ ಸ್ರಗ್ಧರಾ ॥

ಅಗೆಯೆತ್ತುತ್ತಬ್ಜಿನೀ ನಾರಿಗೆ ಮಣಿಗಣಮಂ ಸೂಸುತಂ ತತ್ಪ್ರದೇಶೋ ।
ರ್ವಿಗೆ ಪುಷ್ಪೋದ್ಯತ್ಪರಾಗಂಗಳ ನೊಡಲಿಸುತಂ ನೀಲ್ದ ಶಾಖಾ ಶಕುಂತಾ ॥
ಳಿಗೆ ಲೀಲಾಂದೋಳ ಕೇಳೀ ಮುದಮನುರು ಮದಾಳಿ ವ್ರಜಕ್ಕಾದ ಮೊಗ್ಗಂ ।
ಪುಗಳಂ ಕೈಪತ್ತಿಸುತ್ತಂ ಸುಳಿವುದು ವನಸಂಚಾರ ಸಾರಂ ಸಮೀರಂ ॥

(ದೇವ ಕವಿಯ ಕುಸುಮಾವಳೀ ಕಾವ್ಯ-೧-೧೦೪)

[(ವನಜಗಳನ್ನು) ಕಿತ್ತುಹಾಕುತ್ತ, ಕಮಲಿನಿಗೆ (ವಾರಿ ಬಿಂದುಗಳೆಂಬ) ಮುತ್ತುಗಳನ್ನೆರಚುತ್ತ, ಆ ವನ ಪ್ರದೇಶದಲ್ಲಿ ಹೂಗಳ ಹುಡಿಯನ್ನು ಹರಡಿಸುತ್ತ, ನೀಳವಾದ ಸೆಳೆಗೊಂಬಿನಲ್ಲಿದ್ದ ಶಕುಂತ (ಪಕ್ಷಿ) ಸಮುದಾಯಕ್ಕೆ ಲೀಲಾಂದೋಲನ (ಜೋಕಾಲೆಯಾಟದ) ಸೌಖ್ಯವನ್ನುಂಟು ಮಾಡುತ್ತ, ಉನ್ಮತ್ತವಾದ ಭ್ರಮರ ಕುಲಕ್ಕೆ ಪರಿಮಲವನ್ನು ಸೂರೆ ಮಾಡುತ್ತ ವನ ಸಂಚಾರದಿಂದ ಆಪ್ಯಾಯಿತನಾದ ಸಮೀರಣವುಸುಳಿವುದು

ವೃಕ್ಷಗಳ ಸೆಳೆಗೊಂಬುಗಳಲ್ಲಿ ಪಕ್ಷಿಗಳು ಕುಳಿತಿದ್ದುವು. ಆಗ ಗಾಳಿ ಬೀಸಲು ಆ ಸೆಳೆಗೊಂಬುಗಳು ಅಲ್ಲಾಡಹತ್ತಿದುವು. ಮೇಲಿದ್ದ ಪಕ್ಷಿಗಳು ಜೀಕಿಕೊಂಡು ಜೋಕಾಲಿಯಾಟದ ಸೌಖ್ಯವನ್ನನುಭವಿಸುತ್ತಲಿದ್ದವೆಂಬ ವರ್ಣನೆಯು ನಮ್ಮನ್ನೂ 'ಲೀಲಾಂದೋಳ ಕೇಳೀ' ಸೌಖ್ಯಸಾಗರದಲ್ಲಿ ಮುಳುಗಿಸಿ ಬಿಟ್ಟಿತಲ್ಲವೆ?

॥ ವಾರ್ಧಿಕ ಷಟ್ಪದಿ ॥

ಹೊದಱಿಹ ವೃಂದಮಂ ಕೊಂದ ಕುಂದಂ ತೊಳೆವೆ ।
ನೆಂದಬ್ಧಿಗಿಳಿವ ಸಿಡಿಲೋ ಮಮ ದ್ವೇಷಿ ಗಿರಿ ।
ನಂದನಂಗೆಡೆಗೊಟ್ಟಡಂಗಿಸಿತಿದೆಂದು ಮುಳಿಸಿಂದ ಸುರಪತಿ ಯಿಟ್ಟೊಡೇ ॥
ನಿಂದುರಿವುತಬ್ಧಿಗೆಯ್ದುವ ವಜ್ರವೋ ನೀರ್ಗೆ ।
ಬಂದ ಕಾರ್ಮೋಡಂಗಳೊಳ್ ಸಿಲುಕಿ ಪೋಗಿ ಮೇ ।
ಲಿಂದೆ ಕೆಡೆವೌರ್ವಾಗ್ನಿಯೋ ಎನಿಸಿ ಪಡುವ ಕಡಲಂ ಸಾರ್ದ ನಬ್ಜ ಸಖನೂ॥

(ಸೋಮನಾಥ ಚರಿತೆ-೨ ೨೧)

[ಘನವಾದ ಮೇಘ ಮಾಲಿಕೆಯನ್ನು (೧, ಕತ್ತಲೆಯೆಂಬ ರಾಕ್ಷಸನನ್ನು ೨ಬಲಾಢ್ಯನಾದ ವೃತ್ರನನ್ನು) ಕೊಂದುದರಿಂದುಂಟಾದ ಪಾಪದ ಕ್ಷಾಲನೆಗಾಗಿ ಸಮುದ್ರಕ್ಕೆ (ಸ್ನಾನಕ್ಕಾಗಿ) ಇಳಿಯುವ ಸಿಡಿಲೋ, "ನನ್ನ ಶತ್ರುವಾದ ಪರ್ವತದ ಮಗನಿಗೆ (ಮೈನಾಕನಿಗೆ) ಸಮುದ್ರನು ಆಶ್ರಯ ಕೊಟ್ಟನೆಂದು ಸಿಟ್ಟಿನಿಂದ ಇಂದ್ರನು ಒಗೆಯಲು ಉರಿಯುತ್ತ ಸಮುದ್ರದ ಸಮೀಪಕ್ಕೆ ಹೋಗುವ ವಜ್ರವೋ, ನೀರನ್ನು ಕುಡಿಯಲು ಬಂದ ಕಪ್ಪು ಮೋಡಗಳಲ್ಲಿ ಸಿಲುಕಿ ಮೇಲಕ್ಕೆ ಹೋಗಿ ಪುನಃ ಕೆಳಗೆ ಬೀಳುವ ಬಾಡಬಾಗ್ನಿಯೋ ಎಂಬಂತೆ ಕಮಲ ಬಾಂಧವನಾದ ಸೂರ್ಯನು ಪಶ್ಚಿಮ ಸಮುದ್ರವನ್ನು ಪ್ರವೇಶಿಸಿದನು.]

ಇದು ರಾಘವಾಂಕ ಮಹಾ ಕವಿಕೃತವಾದ ಸೂರ್ಯಾಸ್ತಮಯದ ವರ್ಣನೆಯು. 'ಅಹಿ' ಎಂಬ ಶಬ್ದಕ್ಕೆ ಕತ್ತಲೆ, ಮೇಘ, ವೃತ್ರ ಎಂಬ ಅರ್ಥಗಳಿವೆ ಇಂದ್ರನು ಪರ್ಜನ್ಯಾಧಿಪತಿಯೆಂದೂ, ಅಹಿ—ಶತ್ರುವೆಂದೂ, ವಜ್ರಧಾರಿಯೆಂದೂ ವೇದಗಳಲ್ಲಿ ವರ್ಣಿಸಲ್ಪಟ್ಟಿದ್ದಾನೆ. 'ಅಹಿ'— ಎಂದರೆ ಮೇಘವು- ಮಳೆಯನ್ನು ಕೊಡದಂತಾಗಲು ಇಂದ್ರನು ತನ್ನ ವಜ್ರ (ಸಿಡಿಲ) ದಿಂದ ಅದನ್ನು ತಿವಿದು ನೀರನ್ನು ಭೂಮಿಗೆ ಕೊಡುತ್ತಾನೆಂದು ವರ್ಣನೆಯಿದೆ. ಅಂದರೆ ಅಹಿಯನ್ನು ನಷ್ಟಪಡಿಸಿದಂತಾಯಿತು. 'ಅಹಿ' ಎಂದರೆ 'ತಿಮಿರವೆಂದೂ ಅರ್ಥವಾಗುತ್ತದೆ. ಇಂದ್ರನು ಅಹಿಯನ್ನು ನಷ್ಟಪಡಿಸಿದಂತೆ ಸೂರ್ಯನು ಕತ್ತಲೆಯನ್ನು ನಾಶ ಪಡಿಸುತ್ತಾನೆ. ಆದುದರಿಂದಲೇ ಕವಿಯು ಸೂರ್ಯನನ್ನು "ಅಹಿವೃಂದಮಂಕೊಂದ ವಜ್ರ" ಎಂದು ವರ್ಣಿಸಿದ್ದಾನೆ. 'ಅಹಿ' ಶಬ್ದಕ್ಕೆ ವೃತ್ರನೆಂದರ್ಥವಾಗುವುದೆಂಬುದನ್ನು ಮೇಲೆ ಹೇಳಿದ್ದೇನೆ. ವೃತ್ರನು ಬ್ರಾಹ್ಮಣನೆಂದು ಪ್ರತಿಪಾದನೆ. ಆದುದರಿಂದ ಇಂದ್ರನ ವಜ್ರಕ್ಕೆ ಮಹಾಪಾತಕ ದೋಷವು ತಗಲಿದಂತಾಯಿತು. (ಬ್ರಹ್ಮಹತ್ಯಾ, ಸುರಾಪಾನ, ಸ್ತೇಯ, ಗುರುಸ್ತ್ರೀಸ್ಪರ್ಶ, ಈ ಪಾತಕ ಮಾಡಿದವರ ಸಂಸರ್ಗ ಇವೇ ಪಂಚ ಮಹಾಪಾತಕಗಳು.) ತನ್ನ ಪಾಪಕ್ಷಾಲನೆ ಮಾಡಿಕೊಳ್ಳಲು ಸಿಡಿಲು ಸಮುದ್ರ ಸ್ಥಾನಕ್ಕೆ ಬಂದಿತೋ ಏನೋ ಎಂದೆನ್ನುವಂತೆ ಅಸ್ತಮಯ ಸಮುದ್ರದಲ್ಲಿ ಸೂರ್ಯನು ಕಾಣಿಸಿಕೊಂಡನು. ಸಮುದ್ರವು ಎಲ್ಲಕ್ಕೂ ದೊಡ್ಡ ತೀರ್ಥವು. ಅದರಲ್ಲಿ ಸ್ನಾನ ಮಾಡುವುದರಿಂದ ಎಲ್ಲ ಪಾಪಗಳು ತೊಳೆದು ಹೋಗುತ್ತವೆಂದು ಶಾಸ್ತ್ರವಿದೆ.

(೨) ಮೊದಲು ಪರ್ವತಗಳಿಗೆ ರೆಕ್ಕೆಗಳಿದ್ದವೆಂದೂ, ಅವುಗಳನ್ನು ಇಂದ್ರನು ವಜ್ರದಿಂದ ಕಡಿದನೆಂದೂ ಕಥೆ. ಆದರೆ ಹಿಮಾದ್ರಿಯ ಮಗನಾದ ಮೈನಾಕ ಪರ್ವತಕ್ಕೂ ಸಮುದ್ರಕ್ಕೂ ಗೆಳೆತನವಿದ್ದುದರಿಂದ ಸಮುದ್ರವು ಮೈನಾಕನಿಗೆ ಆಶ್ರಯವನ್ನು ಕೊಟ್ಟು ಅವನ ಪಕ್ಕಗಳನ್ನು ರಕ್ಷಿಸಿತು. ಆದುದರಿಂದ ಇಂದ್ರನು ಸಿಟ್ಟಿಗೆದ್ದು ಸಮುದ್ರದ ಮೇಲೆ ವಜ್ರವನ್ನು ಕಳುಹಿದನೆಂಬಂತೆ ಸೂರ್ಯನು ಶೋಭಿಸಿದನೆಂದು ಉತ್ಪ್ರೇಕ್ಷೆ.

(೩) ವಾಡವಾಗ್ನಿಯು:— ಕಾರ್ತವೀರ್ಯನ ಮಕ್ಕಳು ಭೃಗುವಂಶಜರನ್ನೆಲ್ಲ ಕೊಲ್ಲಬೇಕೆಂದು ಗರ್ಭದಲ್ಲಿದ್ದ ಕೂಸುಗಳನ್ನು ಕೂಡ ಕೊಂದು ಬಿಟ್ಟರು. ಆದರೆ ಆ ವಂಶದ ಒಬ್ಬ ಸ್ತ್ರೀಯು ತನ್ನ ಗರ್ಭವನ್ನು ರಕ್ಷಿಸುವುದಕ್ಕಾಗಿ ಅದನ್ನು ತನ್ನ ಊರು ಪ್ರದೇಶದಲ್ಲಿ (ತೊಡೆಯಲ್ಲಿ) ಇಟ್ಟಳು. ಆದುದರಿಂದ ಹುಟ್ಟಿದ ಕೂಸಿಗೆ ಔರ್ವ ಎಂಬ ಹೆಸರು ಬಂದಿತು. ಅದನ್ನು ನೋಡಿದ ಕೂಡಲೆ ಕಾರ್ತವೀರ್ಯನ ಮಕ್ಕಳೆಲ್ಲ ಕುರುಡರಾದರು. ಮತ್ತು ಅವನ ಕೋಪದಿಂದ ಉತ್ಪನ್ನವಾದ ಜ್ವಾಲೆಯು ಜಗತ್ತನ್ನೇ ಸುಡುವಂತೆ ತೋರಿತು, ಅವನ ಪಿತೃಗಳು ಅದನ್ನು (ಆ ಜ್ವಾಲೆಯನ್ನು

ಸಮುದ್ರದಲ್ಲಿ ಒಗೆಯಲಿಕ್ಕೆ ಹೇಳಿದರು. ಅವನು ಹಾಗೆ ಮಾಡಲು ಅದು ಕುದುರೆಯ ಮುಖವನ್ನು ತಾಳಿ ಸಮುದ್ರದಲ್ಲಿ ಅಡಗಿಕೊಂಡಿತು, ಊರು ಪ್ರದೇಶದಿಂದ ಹುಟ್ಟಿದ ಕುಮಾರ (ಔರ್ವ)ನ ಸಿಟ್ಟಿನಿಂದ ಹುಟ್ಟಿದ ಜ್ವಾಲೆಯಾದುದರಿಂದ ಅದಕ್ಕೆ ಔರ್ವಾನಲವೆಂದೂ, ಕುದುರೆಯ ಮುಖವನ್ನು ಧರಿಸಿದುದರಿಂದ ವಾಡವಾಗ್ನಿಯೆಂದೂ ಸಮುದ್ರದಲ್ಲಿರುವ ಕಿಚ್ಚಿಗೆ ಹೆಸರು ಬಂಧಿದೆ. ವಾಡವವೆಂದರೆ ಕುದುರೆ.)

ಭಾರತಮಂಜರಿ ಆದಿಪರ್ವ

'ಅಹಿ' 'ವೃತ್ರ' ಇವುಗಳ ವಿಷಯದಲ್ಲಿ ವೇದದೊಳಗಿನ ಅವತರಣವನ್ನು ನೋಡುವುದು.

ಇಂದ್ರಸ್ಯ ನು ವೀರ್ಯಾಣಿ ಪ್ರ ವೋಚಂ ಯಾನಿ ಚಕಾರ ಪ್ರಥಮಾನಿ ವಜ್ರೀ। ಅಹನ್ನಹಿಮನ್ವಪಸ್ತತರ್ದ ಪ್ರವಕ್ಷಣಾ ಅಭಿನತ್ಪರ್ವತಾನಾಂ ॥ ೧ ॥

(ಋಗ್ವೇದ ಮಂಡಲ ೧— ಸೂ ೩೨)

ವಜ್ರಯುಕ್ತನಾದ ಇಂದ್ರನು ಎಷ್ಟೋ ಪರಾಕ್ರಮದ ಕೆಲಸಗಳನ್ನು ಮಾಡಿದನು ಮೊದಲು ಅಹಿಯನ್ನು (ಮೇಘವನ್ನು) ಕೊಂದನು ಆ ಮೇಲೆ ಜಲವನ್ನು ಹಿಂಪಿಸಿದನು (ಭೂಮಿಯ ಮೇಲೆ ಕೆಡಹಿದನು) ಅನಂತರ ಪರ್ವತಗಳ ನದಿಗಳನ್ನು ಭೇದಿಸಿದನು (ಹರಿಯ ಹಚ್ಚಿದನು.)

ಆ ಸಾಯಕಂ ಮಘವಾದತ್ತ ವಜ್ರ ಮಹನ್ನೇನಂ ಪ್ರಥಮಜಾಮಹೀನಾಂ ॥ ೩ ॥

ಋ, ಮಂ ೧, ಸೂ ೩೨

ಇಂದ್ರನು ವಜ್ರವನ್ನು ತೆಗೆದುಕೊಂಡು ಅಹಿಗಳ (ಮೇಘಗಳ) ಮಧ್ಯದಲ್ಲಿ ಮೊದಲು ಉತ್ಪನ್ನವಾದುದನ್ನು ಕೊಂದನು

ದಾಸಪತ್ನೀ ರಹಿಗೋಪಾ ಅತಿಷ್ಠನ್ನಿರುದ್ಧಾ ಆಪಃ ಪಣಿನೇವ ಗಾವಃ। ಅಪಾಂ ಬಿಲಮಪಿಹಿತಂ ಯದಾಸೀದ್ವೃತ್ರಂ ಜಘನ್ವಾನ್ ಅಪತದ್ವವಾರ ॥ ೧೧ ॥

ಋ, ಮಂ ೧ ಸೂ ೩೨

ಪಣಿಯೆಂಬ ಅಸುರನು ಆಕಳುಗಳನ್ನು ಅಪಹರಿಸಿ ಬಿಲದಲ್ಲಿ ಇಟ್ಟು, ಆ ಬಿಲ ದ್ವಾರವನ್ನು ಕಾಯುವಂತೆ ಅಹಿಯು (ಮೇಘನು, ವೃತ್ರನು) ಜಲವನ್ನು ನಿರೋಧಿಸಿ ನಿರ್ಗಮ ಮಾರ್ಗವನ್ನು (ಹೊರಗೆ ಬರುವ ಮಾರ್ಗವನ್ನು) ಮುಚ್ಚಿಕೊಂಡು ನಿಂತಿದ್ದನು. ಆ ಮೇಲೆ ಇಂದ್ರನು ವೃತ್ರನನ್ನು ಕೊಂದು ಆ ಮಾರ್ಗವನ್ನು ತೆಗೆದಿಟ್ಟನು.

ನಿರುಕ್ತದಲ್ಲಿ ಮೇಘಕ್ಕೆ ಅದ್ರಿ, ಗ್ರಾವ, ಗೋತ್ರ, ಪರ್ವತ, ಗಿರಿ, ಅಹಿ ಮೊದಲಾದ ೩೩ ಹೆಸರುಗಳು ಹೇಳಲ್ಪಟ್ಟಿವೆ.

॥ ಮತ್ತೇಭ ವಿಕ್ರೀಡಿತಂ ॥

ದಿವಸ ಶ್ರೀ ರಪಿರತ್ನ ಕುಂಭದಿನಲಂಪಿಂದೊಲ್ಮೆಯಿಂ ಪಶ್ಚಿಮಾ।
ರ್ಣವ ಪಾನೀಯ ವಸಿಯಿಸ್ತೆನ್ನುದಯ ಶೈಲಾವಾಸಕೆಂದಲ್ಲಿ ತುಂ ॥
ಬುವ ಪೊಳ್ತೊಂದು ಮಹೋಗ್ರ ಕಾಲ ಮಕರಂ ತತ್ಕುಂಭಮಂ ಕರ್ಚಿ ಪೋ।
ಯ್ತವಳಂ ಕೂಡಿಯೆನಲ್ಕೆ ಪಂಕಜ ಸಖಂ ಪೊಕ್ಕ ಪ್ರತೀಚ್ಯಬ್ಧಿಯಂ ॥

(ಅಭಿನವ ದಶಕುಮಾರ ಚ ತೆ— ೧೦—೨೨)

[ದಿವಸ ಶ್ರೀಯು ಉತ್ಸಾಹವುಳ್ಳವಳಾಗಿ ಸೂರ್ಯನೆಂಬ ರತ್ನದ ಕೊಡದಿಂದ ಪಶ್ಚಿಮ ಸಮುದ್ರದ ನೀರನ್ನು ಜನಯನಾತಲವೆಂಬ ತನ್ನ ವಾಸಸ್ಥಳಕ್ಕೆ ಒಯ್ಯುವೆನೆಂದು ಆನಂದ ಭರದಲ್ಲಿ ಅದನ್ನು ತುಂಬುವ ವೇಳೆಗೆ ಕಾಲವೆಂಬ ಒಂದು ಉಗ್ರವಾದ ಮೊಸಳೆಯು ಆ ಕೊಡವನ್ನೂ, ಅವಳನ್ನೂ ಕೂಡಿಯೇ ಕಚ್ಚಿಕೊಂಡು ಹೋಯಿತೆಂಬಂತೆ ಕಮಲ ಬಾಂಧವನು (ಸೂರ್ಯನು) ಪಶ್ಚಿಮ ಸಮುದ್ರವನ್ನು ಸೇರಿದನು.]

ಇಲ್ಲಿ ಕವಿಯು ಹಗಲನ್ನು ಲಕ್ಷ್ಮಿಯನ್ನಾಗಿಯೂ, ರವಿಯನ್ನು ರತ್ನ ಕುಂಭವನ್ನಾಗಿಯೂ, ಕಾಲವನ್ನು ಮೊಸಳೆಯನ್ನಾಗಿಯೂ ವರ್ಣಿಸಿದ್ದಾನೆ.

॥ ಕಂದ ॥

ಜನಿಸಿದ ಮಾತ್ರದೆ ತನ್ನಂ |
ತಿನಲುದ್ಯೋಗಿಸಿದ ನೀತನೀ ಜವ್ವನದೊಳ್ ॥
ತಿನದುಳಿಯನೆಂದು ದಿನಪಂ।
ತನುವಂ ಮರೆಗೆಯ್ವನೆಂಬೊಲಬ್ಧಿಯೊಳಿಳಿದಂ ॥

[ಹನುಮದ್ರಾಮಾಯಣ—೫—೨೩]

[ಹುಟ್ಟಿದೊಡನೆಯೇ ತನ್ನನ್ನು ತಿನ್ನಲುದ್ಯುಕ್ತನಾದ ಹನುಮನು ಈ ಯೌವನದಲ್ಲಿ ತಿನ್ನದೆ ಬಿಡಲಾರನೆಂದು ಸೂರ್ಯನು ಅಡಗಿಕೊಳ್ಳುವುದಕ್ಕಾಗಿ ಸಮುದ್ರವನ್ನು ಸೇರಿದನು.]

ಇಲ್ಲಿ ಸಹಜವಾದ ಕಾರಣವನ್ನು ಮರೆಯಿಸಿ, ಕಾರಣಾಂತರವನ್ನು ಆರೋಪಿಸಿದುದೇ ಆಶ್ಚರ್ಯ ಕಾರಕವು.

ಹನುಮಂತನು ಹುಟ್ಟಿದೊಡನೆಯೇ ಸೂರ್ಯನ ಬಿಂಬವನ್ನು ಹಣ್ಣೆಂದು ತಿಳಿದು ತಿನ್ನಲೆಳಸಿ ಆಕಾಶಕ್ಕೆ ಹಾರಿದ ಕಥೆಯು ಪ್ರಸಿದ್ಧವಿದೆ.

॥ ಚಂಪಕಮಾಲಾ ॥

ನವನಳಿನೀ ವನಂಗಳ ಪರಾಗ ರಜಂಗಳನುಂಡು ಮುನ್ನಮಾ।
ತವಸಿ ವಿಯತ್ತಳ ಭ್ರಮಣ ವಿಹ್ವಲನಾಗಿ ಬಳಲ್ದು ಕಾದುವಂ ॥
ತೆ ಪೊಲರೆ ಕೆಂಪು ತತ್ಪಮಾಕ ಶಾಸನ ಕಂಟಕ ಲಗ್ನ ಪಾದನಾ।
ವ ಪೊಂಬಡುಗುತ್ತುನಸಾತ್ತ ಕರಮಾ ರವಿ ಪೊರ್ದಿದನಸ್ತ ಶೈಲಮಂ॥

(ಪಂಪ ಭಾರತ-೬-೬೮)

[ಸೂರ್ಯನು ಮೊದಲು ಕಮಲ ವನಗಳಲ್ಲಿಯ ಹೂಗಳ ಹೊಸ ಹುಡಿಯನ್ನು ಉಂಡು ಆಕಾಶದಲ್ಲಿ ಸಂಚರಿಸಿದನಾದುದರಿಂದ ಭ್ರಮಣ ಪಿತ್ತ ವಿಕಾರಕೊಳ್ಳಗಾಗಿ, ಬಳಲಿ ಆ ಹುಡಿಯನ್ನೇ ಕಾರಿದನೆಂಬಂತೆ ಕೆಂಪು (ಸಂಧ್ಯಾರಾಗವು) ಇರಲು, ಆ ಕಮಲ ವನಗಳ ಮುಳ್ಳುಗಳಲ್ಲಿ ತನ್ನ ಪಾದಗಳು (ಕಿರಣಗಳು) ಸಿಕ್ಕಿಕೊಂಡಿರಲು ಅವುಗಳನ್ನು (ಆಕುಂಚನ ಪೂರ್ವಕವಾಗಿ) ಸೆಳೆದುಕೊಂಡು ಅಸ್ತಾಚಲವನ್ನೈದಿದನು.]

ಸೂರ್ಯನು ಕಮಲ ಬಾಂಧವನು. ಉದಯವಾದ ಕೂಡಲೆ ಅವನು ತನ್ನ ಕರಗಳನ್ನು ಕಮಲವನದ ಕಡೆಗೆ ನೀಡುವನು. ಈ ಸಂಗತಿಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಈ ಪದ್ಯವನ್ನೋದಿದರೆ, ಸೂರ್ಯನು ತನ್ನ ಕರಗಳಿಂದ ಹೂವಿನೊಳಗಿನ ಬಂಡನ್ನುಂಡನೆಂದೂ, ಸಂಜೆಗೆಂಪೇ ಅವನ ವಾಂತಿಯೆಂದೂ ಕವಿಯು ವರ್ಣಿಸಿರುವುದು ಸ್ಪಷ್ಟವಾಗಿ ತಿಳಿಯುವುದು. ಉಂಡೊಡನೆ ವಿಶ್ರಾಂತಿಯಿಲ್ಲದೆ ಬಹಳ ಹೊತ್ತು ಶ್ರಮ ಮಾಡುವುದರಿಂದ ಉಂಡ ಅನ್ನವು ಜೀರ್ಣವಾಗುವುದಿಲ್ಲ; ವಾಂತಿವಿಕಾರವಾಗುತ್ತದೆ. ಕೆಂದಾವರೆಯ ಹುಡಿಯನುಂಡನಾದುದರಿಂದ ಸೂರ್ಯನು 'ಕೆಂಪು' ಕಾರಿದನು.

ಮುಳ್ಳು ಕಂಟಿಯಲ್ಲಿ ಕಾಲು ಸಿಕ್ಕಿಕೊಂಡರೆ ನಾವು ಮೆಲ್ಲನೆ ಬಿಡಿಸಿಕೊಳ್ಳುತ್ತೇವೆ. ಅದರಂತೆಯೇ ಕಮಲನಾಳಗಳ ಕಂಟಕಗಳಲ್ಲಿ ತೊಡಕಿರುವ ತನ್ನ ಪಾದ (ಕಿರಣ) ಗಳನ್ನು ಸೂರ್ಯನು ಮೆಲ್ಲನೆ ಬಿಡಿಸಿಕೊಂಡು ಹೋದನು (ಸೂರ್ಯನು ಮುಳುಗಿದನು; ಅವನ ಕಿರಣಗಳೂ ಕೂಡ ಅಡಗಿದುವು)

ಕಮಲದ ನಾಲಕ್ಕೆ ಮುಳ್ಳುಗಳಿರುತ್ತವೆ. '' ಭುವನ ಕಂಟಕನೆಂಬುದಂ ಬುಜದ ನಾಳದೊಳ್''—(ಕಾಶ್ಮೀರ ವರ್ಣನಾ— ಕವಿ ಚರಿತೆ)"

॥ ಕಂದ ॥

ಪಡುವೆಟ್ಟನೆಡೆಯೊಳೊಪ್ಪುವ
ಕಡಲೊಡೆಯನ ಮಡದಿ ತೀವ ಸಿಂದೂರದ ಕೆಂ ॥
ಪಿಡಿದೆಸೆವ ಸಾಣೆಗೆಯಿದೆನೆ ।
ಪಿಡಂಗುವಡೆದಿರ್ದುದಸ್ತ ಭಾಸ್ಕರ ಬಿಂಬಂ ॥

(ರಾಜಶೇಖರ ವಿಳಾಸ—೧೧—೩)

[ಪಶ್ಚಿಮಾದ್ರಿಯ (ಅಸ್ತಾಚಳದ) ಸಮೀಪದಲ್ಲಿ ಒಪ್ಪುವ ಸಮುದ್ರನಾಥನ (ವರುಣನ) ಮಡದಿಯು ತೀವ ಸಿಂದೂರದ ಕೆಂಪಿನಿಂದ ಕೂಡಿ

ಶೋಭಿಸುವ ಸಾಣೆಕಲ್ಲಿನಂತೆ ಅಸ್ತಮಯ ಸಮಯದಲ್ಲಿ ಸೂರ್ಯನ ಬಿಂಬವು ಸುಂದರವಾಗಿ ಶೋಭಿಸಿತು.]

ಸೂರ್ಯನು ಮುಳುಗುವ ಮುಂದೆ ಪಶ್ಚಿಮ ಸಮುದ್ರದಲ್ಲಿ ಬೀಳುವನು. ವರುಣನು ಸಮುದ್ರದ ಒಡೆಯನು. ಪಶ್ಚಿಮ ದಿಕ್ಕೇ ಅವನ ವಾಸಸ್ಥಳವು. ಆದುದರಿಂದಲೇ ಪಶ್ಚಿಮ ದಿಕ್ಕಿಗೆ 'ವರುಣಾಶಾ' ಎಂಬ ಹೆಸರು ಬಂದಿರುತ್ತದೆ. ಸೂರ್ಯ ಬಿಂಬವು ಮುಳುಗುವ ಮುಂದೆ ಕೆಂಪಗಾಗಿಯೂ, ದುಂಡಗಾಗಿಯೂ ಇರುವದರಿಂದ, ವರುಣನ ಹೆಂಡತಿಯು ವಿಲಾಸಾಲಂಕಾರಕ್ಕಾಗಿ ಸಿಂದೂರವನ್ನು ತೇದ ಸಾಣೆಯ ಕಲ್ಲಿನಂತೆ ಕಂಡಿತು.

ಕಡಲೊಡೆಯ=ಸಮುದ್ರಕ್ಕೆ ಒಡೆಯ (ವರುಣ) "ಪ್ರಚೇತಾ ವರುಣಃ ಪಾಶೀ ಯಾದಸಾಂ ಪತಿರಪ್ಪತಿಃ" — (ಅಮರ ಕೋಶ.)

ಪ್ರಚೇತ, ವರುಣ, ಪಾಶೀ, ಯಾದಸಾಂಪತಿ (ಜಲಜಂತುಗಳಿಗೊಡೆಯ), ಅಪ್ಪತಿ (ನೀರಿನೊಡೆಯ) ಇವು ವರುಣನ ಹೆಸರುಗಳು.

॥ ವಾರ್ಧಿಕಷಟ್ಪದಿ ॥

ಅನ್ನೆಗಂ ಪಶ್ಚಿಮಾಂಗನೆ ಲೀಲೆಯಿಂ ಪಿಡಿದ।
ರನ್ನದಿಂವ್ಯೈಗನ್ನಡಿಯೊ ವಾರುಣಿಯ ಮಸ್ತ।
ಕೋನ್ನತ ನವೀನ ಮಾಣಿಕ್ಯವೋ ಬಡಬಾಗ್ನಿಯಿಂ ಪಿಡಿದ ಪೆರ್ಗಿಡಿಯಿದೊ ॥
ಮುನ್ನೀರ ಸತಿ ಪತಿಗೆ ಯಾರತಿಯ ನೆತ್ತಿ ಜವ।
ದಿಂ ನೆಗಪಿ ಚಲ್ಲಲಾಕೆಯ ಕೈಯ್ಯೊಳಿರ್ಪ ಪೊಸ।
ಪೊನ್ನ ಪರಿಯಾಣ ಮೆನಲಸ್ತ ಗಿರಿ ಮಸ್ತಕದೊಳಿನ ಬಿಂಬಮೆಸೆದಿರ್ದುದು ॥

(ಚೆನ್ನಬಸವ ಪುರಾಣ ಕಾಂಡ. ೧--೯-೨

[(ಆಗ) ಪಶ್ಚಿಮ ದಿಕ್ಕೆಂಬ ಸ್ತ್ರೀಯು ಲೀಲೆಯಿಂದ ಕೈಯ್ಯಲ್ಲಿ ಹಿಡಿದ ರತ್ನದ ಇಮ್ಮೈಗನ್ನಡಿಯೋ, ವರುಣನ ಹೆಂಡತಿಯ ತಲೆಯಲ್ಲಿದ್ದ ಶ್ರೇಷ್ಠವಾದ ಹೊಸ ಮಾಣಿಕವೋ, ಸಮುದ್ರದ ಕಿಚ್ಚಿನಿಂದ ಸಿಡಿದೆದ್ದ ದೊಡ್ಡ ಕಿಡಿಯೋ, ಸಮುದ್ರನ ಹೆಂಡತಿಯು ತನ್ನ ಗಂಡನಿಗೆ ಆರತಿಯನೆತ್ತಿ (ನಿವಾಳಿಸಿ) ಒಗೆಯಲು ಅವಳ ಕೈಯ್ಯಲ್ಲಿ ಉಳಿದ ಬಂಗಾರದ ತಟ್ಟೆಯೋ ಎಂಬಂತೆ ಅಸ್ತಾ! ಚಲದ ಶಿಖರದ ಮೇಲಿದ್ದ ಸೂರ್ಯಬಿಂಬವು ಶೋಭಿಸಿತು.]

ಎರಡು+ಮೈ=ಇಮ್ಮೈ.

॥ ಭಾಮಿನೀ ಷಟ್ಪದಿ ॥

ಜಗದೊಳಿರ್ದ ಸುರಾರಿ ಸಂಘವ ।
ದಿಗು ಬಲಿಯ ಕೊಟ್ಟಮಲ ಚಕ್ರವ ।
ನಗ ಧರನು ಮುನ್ನಿನಪೊಲಸಿತಾಂಬರದಿ ವಿರಚಿಸಿದ ॥
ಝಗಝಗಿಪ ಗವಸಣಿಗೆಗೈದಿಸಿ ।
ಬಿಗಿದನೆಂಬೊಲು ಪಶ್ಚಿಮಾಬ್ಧಿಯ ।
ಬಗೆದು ಹೊಕ್ಕನು ಕಮಲ ಬಾಂಧವನತಿ ಸರಾಗದಲಿ ॥

(ಗದಾ ಚರಿತ್ರ-೩-೨೦.)

[ಲೋಕದಲ್ಲಿದ್ದ ಸುರಶತ್ರುಗಳನ್ನೆಲ್ಲ (ರಾಕ್ಷಸರನ್ನೆಲ್ಲ) ಕೊಂದು ಎಲ್ಲ ದಿಕ್ಕುಗಳಿಗೂ ಬಲಿಯನ್ನು ನೀಡಿ ನಗಧರನು (ಗೋವರ್ಧನ ಧಾರಿಯಾದ ಕೃಷ್ಣನು) (ತನ್ನ ಕೈಯ್ಯಲ್ಲಿದ್ದ) ತೇಜಃಪುಂಜವಾದ ಚಕ್ರವನ್ನು ನೀಲ ವಸ್ತ್ರದಿಂದ ಮಾಡಿದ ಹೊಳೆಯುವ ಗವಸಣಿಗೆಯಲ್ಲಿ ಮೊದಲಿನಂತೆ ಇರಿಸಿ ಬಿಗಿದನೆಂಬಂತೆ ಸೂರ್ಯನು ರಾಗದಿಂದ (ಕೆಂಪಿನಿಂದ) ಕೂಡಿ ಪಶ್ಚಿಮ ಸಮುದ್ರವನ್ನು ಬಗೆದು (ಇಬ್ಭಾಗ ಮಾಡಿ) ಹೊಕ್ಕನು.]

ಸೂರ್ಯನು ಮುಳುಗುವಾಗ ಕೆಂಪಗಿರುವುದರಿಂದ ಕವಿಯು ಅವನನ್ನು ರಾಕ್ಷಸರ ರಕ್ತದಿಂದ ಕೆಂಪೇರಿದ ವಿಷ್ಣುವಿನ ಚಕ್ರಕ್ಕೆ ಹೋಲಿಸಿದ್ದಾನೆ.

ನಗಧರಃ-

ವರ್ಷ ವರ್ಷದ ಕೊನೆಯಲ್ಲಿ ನಂದ ಮುಂತಾದ ಗೊಲ್ಲರು ಇಂದ್ರ ಯಜ್ಞವೊಂದನ್ನು ಮಾಡುವ ಪದ್ಧತಿಯಿದ್ದಿತು. ಇದಕ್ಕಾಗಿ ಬಲು ಸಡಗರ ಪಡುತ್ತಿರಲು ಶ್ರೀಕೃಷ್ಣನು ಇದೇನು ಸಡಗರವೆಂದು ಕೇಳಿದನು. ಇಂದ್ರನು ಮಳೆಯನ್ನು ಕೊಡತಕ್ಕವನು; ಮಳೆಯಿಂದ ಸಸ್ಯಗಳಾಗುವವು; ಸಸ್ಯಗಳಿಂದಲೇ ನಾವೆಲ್ಲ ಜೀವಿಸುವೆವು; ದನಕರುಗಳು ಹಾಲು ಕರೆಯುವವು. ಆದುದರಿಂದ ಇಂದ್ರನನ್ನು ಪೂಜಿಸುವುದು ನಮ್ಮೆಲ್ಲರ ಕರ್ತವ್ಯವೆಂದು ನಂದನು ಹೇಳಿದನು. ಇದಕ್ಕೆ ಕೃಷ್ಣನು “ನಾವು ಬೇಸಾಯಗಾರರಲ್ಲ; ದನಕರುಗಳೇ ನಮ್ಮ ಆಧಾರವು. ಆದುದರಿಂದ ನಮ್ಮ ಕರ್ತವ್ಯವು ಹಸುಗಳನ್ನು ಪೂಜಿಸುವುದು. ಎಂದರೆ ಅವುಗಳಿಗೆ ಒಳ್ಳೇ ತಿಂಡಿಯನ್ನು ತಿನ್ನಿಸಿ ನಮಗೆ ಆಶ್ರಯವಾದ ಈ ಗೋವರ್ಧನ ಗಿರಿಯನ್ನು ಪೂಜಿಸೋಣ” ಎಂದು ಹೇಳಿದನು. ಇದರಂತೆಯೇ ನಡೆಯಿತು. ಇಂದ್ರಯಜ್ಞವು ನಿಂತು ಹೋಯಿತು, ಇದರಿಂದ ಇಂದ್ರನಿಗೆ ಬಹಳ ಕೋಪವುಂಟಾಗಿ ಮಳೆಗರೆದು ವೃಂದಾವನವನ್ನು ತೇಲಿಸಿ ಬಿಡುವಂತೆ ಮೇಘಗಳಿಗೆ ಅಪ್ಪಣೆ ಮಾಡಿದನು. ಮೇಘಗಳು ಹಾಗೆಯೇ ಮಾಡಲು ವೃಂದಾವನವು ತೇಲಿ ಹೋಗುವಂತಾಯಿತು. ದನಕರುಗಳ ಮತ್ತು ಗೊಲ್ಲರ ದುಃಖಕ್ಕೆ ಪಾರವೇ ಇಲ್ಲದಂತಾಯಿತು. ಆಗ ಶ್ರೀಕೃಷ್ಣನು ಗೋವರ್ಧನಗಿರಿಯನ್ನು ಕಿತ್ತು ಬೃಂದಾವನದ ಮೇಲುಗಡೆಗೆ ಎತ್ತಿ ಹಿಡಿದನು. ಏಳು ದಿವಸಗಳವರೆಗೆ ಕಲ್ಲ ಮಳೆಗರೆಯಿತು. ಈ ಏಳು ದಿನಗಳೂ ಕೃಷ್ಣನು ಪರ್ವತವನ್ನು ಒಂದೇ ಕೈಯಿಂದ ಎತ್ತಿ ಹಿಡಿದಿದ್ದನು; ವೃಂದಾವನವು ಉಳಿದುಕೊಂಡಿತು.

— ಶ್ರೀಕೃಷ್ಣ ಚರಿತೆ

ಸಮುದ್ರದ ನೀರು ನೀಲ ವರ್ಣದಿಂದೊಪ್ಪುವುದರಿಂದ ಅದು ಗವಸಣಿಗೆಯಂತೆ ಕಂಡಿತು. ಸೂರ್ಯನು ಗವಸಣಿಗೆಯಲ್ಲಿರಿಸುತ್ತಲಿರುವ ಸುದರ್ಶನ ಚಕ್ರದಂತೆ ಕಂಡನು.

॥ **ಕಂದ** ॥

ಪೂಡುವ ಕುದುರೆ ಬಿಸಂಗೊಂ।
ಡೋಡುವ ತೇರ್ಗೊಂದೆ ಗಾಲಿಯೆಸಪಂ ಪೆಳವಂ।
ಕೇಡಿಂಗಲಸಿದೊಡಕ್ಕುಮೆ।
ನೋಡಿರೆ ರವಿಕೆಡೆದನಸ್ತ ಗಿರಿ ಮಸ್ತಕದೊಳ್ ॥

(ಲೀಲಾವತಿ-೧೦-೧೭)

(ಸೂರ್ಯನ ರಥಕ್ಕೆ) ಹೂಡುವ ಕುದುರೆಗಳು ಬಿಸ (ವಿಷಮ) ಅವನನ್ನು ಕೂಡಿಸಿಕೊಂಡೋಡುವ ತೇರಿಗೆ ಗಾಲಿಯು ಒಂದೇ. ಸಾರಥಿಯು ಹೆಳವನು. ಕೇಡು ಬರಬಾರದೆಂದು (ಬಯಸಿದರೆ) ಏನು ಪ್ರಯೋಜನ? ನೋಡು ನೋಡುವಷ್ಟರಲ್ಲಿಯೇ ಸೂರ್ಯನು ಪಶ್ಚಿಮಾಚಳದ ಶಿಖರದ ಮೇಲೆ ಬಿದ್ದನು.

ಸೂರ್ಯನ ಕುದುರೆಗಳು ಏಳು. (೭) ಇದು ವಿಷಮ ಸಂಖ್ಯೆಯು(=ಬಿಸ)

“ಸಪ್ತ ತ್ವಾ ಹರಿತೋ ರಥೇ ವಹಂತಿ ದೇವ ಸೂರ್ಯ” (ಸೂರ್ಯನನ್ನು ಏಳು ಕುದುರೆಗಳು ತೆಗೆದುಕೊಂಡು ಹೋಗುತ್ತವೆ.) ಎಂದು ಶ್ರುತಿ ಪ್ರಮಾಣವು.

“ಸಪ್ತ ಯುಂಜಂತಿ ರಥಮೇಕ ಚಕ್ರಮೇಕೋ ಅಶ್ವೋವಹತಿಸಪ್ತನಾಮಾ” ಋಗ್ವೇದದಲ್ಲಿಯ ಈ ಋಕ್ಕಿನಿಂದ ಸೂರ್ಯನ ರಥವು ಒಂದು ಗಾಲಿಯು (ಏಕಚಕ್ರ) ಉಳ್ಳದೆಂದೂ, ಅದಕ್ಕೆ ಏಳು ಕುದುರೆಗಳೆಂದೂ ಕಲ್ಪನೆಯಾದಂತೆ ಕಂಡು ಬರುತ್ತದೆ. ಸಂವತ್ಸರವೇ ಏಕಚಕ್ರವು.

“ಎಸಪಂ ಪೆಳವಂ” :- ಇವನೇ ಅರುಣನು. ವಿನತಾ ಮತ್ತು ಕಾಶ್ಯಪ ಇವರ ಮಗನು ವಿನತೆಯು ತತ್ತಿಯನ್ನಿಕ್ಕಿ ಮರಿಯು ಪೂರ್ಣವಾಗಿ ಬೆಳೆಯುವುದಕ್ಕೆ ಮೊದಲೇ ಅದನ್ನು ಒಡೆದು ಬಿಟ್ಟಳು. ಆದುದರಿಂದ ಹುಟ್ಟಿದವನಿಗೆ ಕಾಲಿಲ್ಲದಂತಾಯಿತು. ಇದರಿಂದಲೇ ಆ ಅರುಣನಿಗೆ ‘ಅನೂರು’ ‘ವಿಪಾದ’ ಎಂಬ ಹೆಸರುಗಳು ಬಂದಿರುತ್ತವೆ ಇವನು ಸೂರ್ಯನ ಸಾರಥಿಯು:—

ಸಿಡಿಲು ಮಿಂಚುಗಳರುಣ ತಾನಿವ।
ರೊಡನೆ ಹುಟ್ಟಿದ ಗರುಡದೇವರು।
ಮಡದಿ ವಿನತಾ ದೇವಿಗಾದರು ಶುದ್ಧ ಸಾತ್ವಿಕರು॥

ಹೊಡೆದನೊಬ್ಬನು ಸೂರ್ಯ ರಥವನು।
ಬಿಡದೆ ಲಕ್ಷ್ಮೀಪತಿಯ ವರ ಮೆ।
ಲ್ಲಡಿಯ ಸೇವಿಸನೊಬ್ಬ ಪೊಡವಿಯ ಮೇಲೆ ಸೌಪರ್ಣ॥

(ಮಹಾಭಾರತ-ಆದಿಪರ್ವ-ಸಂಧಿ ೫-ಪದ್ಯ ೪೦)

"ಪೂಡುವ ಕುದುರೆ ಬೆಸಂ" ಎಂಬ ಪದ್ಯದಲ್ಲಿರುವ ಕಲ್ಪನೆಯೇ ಕೆಳಗಣ ಎರಡು ಪದ್ಯಗಳಲ್ಲಿಯೂ ಕಂಡು ಬರುತ್ತದೆ:—

ಗಾಲಿಯೊಂದೇ ರಥಕೆ ಜೋಡಾಗಿ ಪೂಡುವೊಡೆ।
ಸಾಲದೇಳೇ ಹಯಂ ನಡೆಸುವೊಡೆ ಸಾರಥಿಗೆ।
ಕಾಲಿಲ್ಲ ಲೋಕ ಯಾತ್ರೆಯ ನೊಲ್ಲೆನೆಂದೊಡಾಗದೆ ತನಗೆ ತಿರುಗಲೇಕೆ॥

ಕಾಲಗತಿಯಂ ವಿಚಾರಬಾರದಿಂತೆಂಬುದಂ।
ಮೂಲೋಕ ಕೆಚ್ಚರಿಸುವಂತೆ ಪೂರ್ವಾಚಲದ।
ಮೇಲೆಮೂಡಿದನೆಂದಿನವೊಲಬ್ಜ ಬಾಂಧವಂ ನಯನಾಂಧ ಮಂದಡಗಲು॥

(ಜೈಮಿನಿಭಾರತ ೨೬-೨೬)

ಹೆಳವ ಸಾರಥಿ ಗಾಲಿಯೊಂದೇ।
ಬಲುರಥಕೆ ಹಯವೇಳು ಸಾಲದು।
ಜಲಜಭವನಾಜ್ಞೆಯಲಿ ಮೇರುವ ತಿರುಗಲರ್ಯಮಗೆ॥

ಅಳವಹುದೊ ಅಳವಡದೊ ವೇಗದಿ।
ತಿಳಿದು ಬಹುದೆಂದೀಶ ಕಳುಹಲು।
ಚಳಕದಲಿ ಬೆಂಬಿಡದೆ ಬಂದಂತಿಂದು ವುದಯಿಸಿದ॥

(ಗಂಟುಚರಿತ್ರೆ ೩. ೬೫)

॥ ಕಂದ ॥

ಒದೆಯೆ ನಭೋ ಲಕ್ಷ್ಮೀವಧು।
ಪದಪಿಂ ವರುಣಾಶೆಯಂಬಶೋಕೆಲತೆ ಕೆಂ ।
ಪೊದವಿದ ತಳಿರಂ ತಳೆದಂ।
ಪದೆ ತಳ್ತೆಸೆದಿರ್ದುದಪರೆ ಸಂಧ್ಯಾರಾಗಂ ॥

(ರಾಜಶೇಖರ ವಿಳಾಸ-೧೧-೬)

[ಆಕಾಶವೆಂಬ ಲಕ್ಷ್ಮಿಯು ವಿಲಾಸದಿಂದ ಒದೆಯಲಾಗಿ ಪಶ್ಚಿಮದಿಕ್ಕೆಂಬ ಅಶೋಕಲತೆಯು ಕೆಂಪಾದ ತಳಿರುಗಳನ್ನು ತಳೆದಂತೆ ಸಂಜೆಗೆಂಪು ಮನೋಹರವಾಗಿ ಕಂಡಿತು.] ಸೂರ್ಯನು ಮುಳುಗಿದಾಗ ಪಶ್ಚಿಮ ದಿಕ್ಕಿನಲ್ಲಿ ಹಬ್ಬಿದ ಸಂಜೆಗೆಂಪಿನ ವರ್ಣನೆಯಿದು.

ಸ್ತ್ರೀಯರ ಪಾದ ತಾಡನದಿಂದ ಅಶೋಕದಲ್ಲಿ ಪಲ್ಲವ ಕುಸುಮೋತ್ಪತ್ತಿಯು ಅಕಾಲದಲ್ಲಿ ಉಂಟಾಗುವದೆಂಬುದು ಕವಿಸಮಯ. ಈ ಕವಿಸಮಯವನ್ನನುಸರಿಸಿಯೇ ಕವಿಯು ಪಶ್ಚಿಮದಿಕ್ಕನ್ನು ಅಶೋಕಲತೆಗೆ ಹೋಲಿಸಿ ಅದು ಆಕಾಶ ಲಕ್ಷ್ಮಿಯ ಪಾದತಾಡನದಿಂದ ಕೆಂವಳಿರುಗಳನ್ನು ತಳೆದಿತೆಂದು ವರ್ಣಿಸಿದ್ದಾನೆ. ಸಂಧ್ಯಾರಾಗವೇ ಕೆಂದಳಿರು.

ಅಶೋಕ, ಬಕುಲ ಮೊದಲಾದ ವೃಕ್ಷಗಳ ಸಂಬಂಧದಿಂದಿರುವ ಕವಿಸಮಯವು ಬಹಳೇ ಹೃದಯಂಗಮವಾದುದಿರುತ್ತದೆ. ಅದನ್ನು ಈ ಕೆಳಗಣ ಪದ್ಯಗಳಿಂದ ತಿಳಿದುಕೊಳ್ಳತಕ್ಕುದು:—

ವನಿತಾ ಪಾದ ಪ್ರಸಾರಂ ಬಡೆದು ತಳಿರ್ವಶೋಕಂ ವಧೂಟೀ ಕುಚಾಲಿಂ ।
ಗನಲೀಲಾ ಸಾರದಿಂದುಳ್ಳಲರ್ದ ಕುರವಕಂ ಕಾಮಿನೀ ಕೇಳರಾಶೋ ॥
ಕನದಿಂ ಮೆಯ್ವೆಚ್ಚುತಿರ್ಪುತ್ಕಳಿಕೆಯ ತಿಳಕಂ ಸ್ತ್ರೀಮುಖಾಜ್ಯ ಸವಾಸೇ।
ಚನದೆತ್ತಂ ಬಲ್ಮುಗುಳ್ಕೆತ್ತಿಸಿವ ಬಕುಳಮೊಪ್ಪಿರ್ಪುದಲ್ಲಲ್ಲಿಗೆಲ್ಲಂ ॥

(ಕುಸುಮಾವಳೀ ಕಾವ್ಯ-೧-೮೮)

ನೋಡಿ ತಿಲಕವನಪ್ಪಿ ಕುರವಕವ ನೆಳನಗೆಯೊ ।
ಳೂಡಿ ಸಂಪಗೆಯಂ ಪ್ರಿಯಂಗುವಂ ಸೋಂಕಿ ಮುರಿ ।
ದಾಡಿ ಚೂತಮನೊದೆದಶೋಕೆಯಂ ಬಕುಳಮಂ ಮುಕ್ಕುಳಿಸಿ ಮದ್ಯದಿಂದ ॥
ಪಾಡಿ ಪುನ್ನಾಗಮಂ ಕರ್ಣಿಕಾರವನೆ ಕೊಂ ।
ಡಾಡಿ ಮಂದಾರಮಂ ಜಾಣ್ನುಡಿದು ಪುಷ್ಪಿತಂ ।
ಮಾಡಿ ತೋರಿದರಂಬುಜಾಕ್ಷಿಯರ್ನಾನಾ ವಿಲಾಸದಿಂದಾ ಬನದೊಳು ॥

(ಜೈಮಿನಿ ಭಾರತ—೮—೧೬)

॥ ಕಂದ ॥

ಪರಿಣತ ದಿನ ಶಿರದಂತಿಗೆ ।
ಖರ ಕಿರಣಂ ಕಾಲಚಕ್ರ ಹತಿಯಿಂ ಕೆಡೆಯಲ್ ॥
ಸುರಿದು ಪರೆದರುಣ ಜಲದಂ ।
ತಿರೆ ಪಸರಿಸುತಿರ್ದುದಪರ ಸಂಧ್ಯಾರಾಗಂ ॥

(ಲೀಲಾವತಿ-ಆ, ೧೦-ಪ. ೧೯)

[ಬಲಿತ ದಿವಸವೆಂಬ (ಪುರುಷನ) ತಲೆಯಂತಿದ್ದ ಸೂರ್ಯನು (ಖರ ಕಿರಣನು) ಕಾಲಚಕ್ರದ ಹೊಡತದಿಂದ ಕೆಳಗುರುಳಲು, ಅದರಿಂದ ಸುರಿದು ಹರಿದ ರಕ್ತದಂತೆ ಸಂಜೆಗೆಂಪು ಪಸರಿಸುತ್ತಲಿದ್ದಿತು]

ಖರ—ಕಿರಣ=ಉಷ್ಣವಾದ ಕಿರಣವುಳ್ಳವನು.

॥ ಉತ್ಪಲ ಮಾಲಾ ॥

ಎನ್ನ ತನೂಜೆ ನಿನ್ನರಸಿಯೊಳ್ಕೆಳೆಗೊಂಡೊಡನಿರ್ಪಳಾಗಳುಂ ।
ನಿನ್ನ ತನೂಜೆಯೆನ್ನರಸಿ ಕೇಳದರಿಂದೆಮಗಿಲ್ಲ ಭೇದಮಿ ॥
ನ್ನೆನ್ನ ಮಗಂಗೆ ಕಾಯದಿರೆನುತ್ತೆ ಸರೋನಿಧಿ ಬಂದ ಭಾನುವಂ ।
ಮನ್ನಿಸುತಿತ್ತ ಪೀತ ವಸನಂ ನಿಜಮೆಂದೆನೆ ಸಂಜೆ ರಂಜಿಕುಂ ॥

(ರಾಜಶೇಖರ ವಿಳಾಸ—೧೧-೯)

[ನನ್ನ ಮಗಳು (ಲಕ್ಷ್ಮಿಯು) ನಿನ್ನ ಅರಸಿಯಲ್ಲಿ (ಪದ್ಮಿನಿಯಲ್ಲಿ) ಯಾವಾಗಲೂ ಸ್ನೇಹ ಭಾವದಿಂದ ಕೂಡಿ ಇರುತ್ತಾಳೆ. ನಿನ್ನ ಮಗಳೇ (ಕಾಲಿಂದಿಯೇ, ಯಮುನಾ ನದಿಯೇ) ನನ್ನ ಅರಸಿಯು. ಆದುದರಿಂದ ನಮ್ಮಲ್ಲಿ ಭೇದ ಭಾವನೆಯಿಲ್ಲ. ನನ್ನ ಮಗನಾದ ಚಂದ್ರನಿಗೆ ತಾಪವನ್ನುಂಟು ಮಾಡಬೇಡ. ಎನುತ್ತೆ ಸಮುದ್ರವು (ಪಶ್ಚಿಮಕ್ಕೆ) ತನ್ನೆಡೆಗೆ ಬಂದ ಸೂರ್ಯನಿಗೆ ಆದರ ಪೂರ್ವಕವಾಗಿ ಪೀತಾಂಬರವನ್ನು ಕೊಟ್ಟಿತೆಂಬಂತೆ ಸಂಜೆಗೆಂಪು ರಂಜಿಸಿತು]

ಲಕ್ಷ್ಮಿಯು ಕ್ಷೀರಸಾಗರ ಕನ್ನಿಕೆಯು.

ಸೂರ್ಯನ ಹೆಂಡತಿಯು ಕಮಲಿನಿಯು. " ಕಾಲಿಂದೀ ಸೂರ್ಯತನಯಾ ಯಮುನಾ ಶಮನಸ್ವಸಾ " ಇವು ಯಮುನಾ ನದಿಯ ಹೆಸರುಗಳು. ಸೂರ್ಯ ತನಯಳಾದ ಈ ಯಮುನೆಯು ಸರಿತ್ಪತಿಯಾದ ಸಮುದ್ರನ ಹೆಂಡಂದಿರಲ್ಲೊಬ್ಬಳು

ಕ್ಷಾರ ಸಮುದ್ರಕ್ಕೂ ಕ್ಷೀರ ಸಮುದ್ರಕ್ಕೂ ಭೇದವಿಲ್ಲ:-

ಕ್ಷಾರ ಕ್ಷೀರಾಂಬುಧಿಗಂ।
ಕ್ಷೀರೋದಭವಾತ್ರಿಜೇಂದುಗಳ್ಗಂ ಮುರಜ॥
ನ್ನಾರಾಯಣರ್ಗಂ ಸಿರಿಗಂ।
ಶ್ರೀರಾಮೆಗಮತನುಗಂ ಭವಾರಿಗಮೈಕ್ಯಂ॥

(ಕಾವ್ಯಾವಲೋಕನ ಸೂತ್ರ ೭೩೦)

(ಸೂರ್ಯನಿಗೆ ಸಂಜ್ಞಾ ಎಂಬ ಹೆಂಡತಿಯಲ್ಲಿ ಯಮ, ಯಮುನಾ ಅಶ್ವಿನೀಕುಮಾರರು ಮತ್ತು ಶನಿ ಇವರುಗಳು ಹುಟ್ಟಿದರು.)

॥ ಕಂದ ॥

ದಿನ ವಣಿಜಂ ದಿನ ಮಣಿಯಂ।
ಜನಮಱಿವಂತೀಯೆ ಚರಮ ಭೂಭೃತ್ತಿಂಗಾ॥
ತನುಮದನೊಡನಪಲಪಿಸ।
ಲ್ಕನುಗೆಟ್ಟೀನುಟ್ಟನೋ ಕಷಾಯಾಂಬರಮಂ॥

(ಚಿಕದೇವರಾಜ ವಿಜಯ-೬ ೯)

[ದಿವಸವೆಂಬ ವಣಿಜನು ಸೂರ್ಯನೆಂಬ ರತ್ನವನ್ನು ಅಸ್ತಾಚಲನಿಗೆ (ಅರಸನಿಗೆ) ಎಲ್ಲ ಜನರ ಸಮಕ್ಷವಾಗಿ ಕೊಡಲು, ಅವನು ಅದನ್ನು ಕೂಡಲೆ ಬೈತಿಡಲುದ್ಯುಕ್ತನಾಗಿ ವೇಷವನ್ನು ಬದಲಿಸಿ ಕೆಂಪು ವಸ್ತ್ರವನ್ನು ಉಟ್ಟನೆಂಬಂತೆ (ಸಂಜೆಗೆಂಪು ಶೋಭಿಸಿತು)]

॥ ಚಂಪಕಮಾಲಾ ॥

ಬಳಸಿದುದರ್ಕವಾಜಿ ಖುರ ಘಟ್ಟಿತ ಮಾದಪರಾದ್ರಿಯಿಂದ ಮು।
ಚ್ಚಳಿಸಿದ ಧಾತು ರೇಣುವೆನೆ ಚಕ್ರಯುಗಂಗಳಗಲ್ಕೆಗಿಚ್ಚು ಪಾಂ॥
ಸುಳಿಯುರ ರಾಗದೇಳ್ಗೆ ದೆಸೆವೆಣ್ಗಳ ರತ್ನ ವಿಭೂಷಣಾಂಶುವು।
ಚ್ಛಳಿನಿಯ ಕುಂಕುಮೋದಕದ ಸಿಂಪಿಣಿ ಸಂಜೆಯ ಕೆಂಪು ಲೋಕಮಂ॥

(ಚಂದ್ರ ಪ್ರಭ ಪುರಾಣ-೮-೪)

[ಸೂರ್ಯನ ಕುದುರೆಗಳ ಖುರಗಳ ಹೊಡತದಿಂದ ಮೇಲಕ್ಕೆದ್ದ ಪಶ್ಚಿಮಾಚಳದ ಸಿಂದೂರ ಧೂಳಿಯಂತೆಯೂ, ಚಕ್ರವಾಕಯುಗಲದ ವಿರಹಾಗ್ನಿಯಂತೆಯೂ, ಸ್ವೈರಿಣಿಯರ ಅನುರಾಗದ ಪೆಚುಗೆಯಂತೆಯೂ, ದಿಕ್ಕಾಮಿನಿಯರ ರತ್ನದ ಆಭರಣಗಳ (ಅರುಣ) ಕಾಂತಿಯಂತೆಯೂ, ಉತ್ಪಲಿನಿಯ =ರಾತ್ರಿಯಲ್ಲರಳುವ ಕಮಲ) ಕುಂಕುಮ ಜಲದ ಎರಚಾಟದಂತೆಯೂ ಇದ್ದ ಸಂಜೆಗೆಂಪು ಭೂಮಂಡಲವನ್ನೆಲ್ಲ ವ್ಯಾಪಿಸಿತು.]

ಚಕ್ರವಾಕ ಪಕ್ಷಿಗಳಿಗೆ ಇರುಳಲ್ಲಿ ವಿರಹವಾಗುತ್ತದೆ ಏಕೆಂದರೆ:— ರಾಮಚಂದ್ರನು ಸೀತಾವಿರಹದಿಂದ ಶೋಕ ಮಾಡುತ್ತಲಿರುವಾಗ ಚಕ್ರವಾಕಗಳು ಅವನನ್ನು ನೋಡಿ ನಕ್ಕವು. ಆದುದರಿಂದ ಅವನು "ನಿಮಗೆ ರಾತ್ರಿಯಲ್ಲಿ ವಿರಹವ್ಯಥೆಯಾಗಲೆಂದು ಶಾಪ ಕೊಟ್ಟನು. ಚಕ್ರವಾಕ ಪಕ್ಷಿಗಳು ಯಾವಾಗಲೂ ಜೋಡಾಗಿಯೇ ತಿರುಗುವುದರಿಂದ ಅವುಗಳಿಗೆ ದ್ವಂದ್ವಚರವೆಂಬ ಹೆಸರು ಬಂದಿದೆ. ಇಂತಹ ಪರಸ್ಪರ ಪ್ರೇಮ ಪರವಶವಾದ ಪಕ್ಷಿಗಳ ವಿರಹಾಗ್ನಿಯು ಅತ್ಯಂತ ಪ್ರಜ್ವಲಿತವಿರುವುದು ಸಹಜವು.

॥ ಪರಿವರ್ಧಿನಿಷಟ್ಪದಿ ॥

ಕಡಲುರಿ ತನ್ನಯ ಮರೆವೊಕ್ಕಾ ಪಗ ।
ಲೊಡೆಯನ ನಿರಿಸಿ ಪೆರಗೆ ಮೊದಲೇ ಬೆಂ ।
ಬಿಡದೆ ಕರುತ್ತಿದಿರೇಳ್ವಿರುಳೊಡ್ಡಣಮಂ ಕಂಡಿದಿರೊಳಗೆ ॥
ಬಿಡಮೊಡ್ಡಿದ ಮೋಹರಮೆನೆ ಮಾಣಿಕ ।
ವಡೆದ ವರುಣ ದಿಗ್ವಧು ಸಿಂಗರಿಸಿದ ।
ಕಡುಗೆಂಪಿನ ಪಸದನಮೆನೆ ಸಂಧ್ಯಾರುಚಿ ಸಲೆ ಸೊಗಯಿಸಿತು ॥

(ಮಂಗರಸನ ಜಯನೃಪಕಾವ್ಯ—೧೩—೫೯)

[ಸಮುದ್ರದ ಕಿಚ್ಚು, ತನಗೆ ಮರೆಹೊಕ್ಕ ಸೂರ್ಯನನ್ನು ತನ್ನ ಹಿಂದೆ ಇಟ್ಟುಕೊಂಡಿರಲು, ಬೆನ್ನು ಬಿಡದೆ ಅವನನ್ನುದ್ದೇಶಿಸಿ ಇದಿರಿಗೆ ಬರುವಂತಹ ಕತ್ತಲೆಯ ಸಮೂಹವನ್ನು ಕಂಡು (ಅವನ್ನು ತಿರಿಗಿ ಕಳುಹಿಸುವುದಕ್ಕಾಗಿ) ಮುಂದೆ ಒಡ್ಡಿದ ಕಣಿಕೆಯಂಬಂತೆ (ಬಂಗಾರದ ನಾಣ್ಯಗಳ ರಾಶಿಯಂತೆ) ಯೂ, ಪದ್ಮರಾಗಮಣಿಯಿಂದಲಂಕೃತಳಾದ ಪಶ್ಚಿಮ ದಿಕ್ಕೆಂಬ ಅಂಗನೆಯು ಸಿಂಗರಿಸಿದ ಕೆಂದೊಡಿಗೆಯೆಂಬಂತೆಯೂ, ಸಂಧ್ಯಾರಾಗವು ಸಲೆ ಸೊಗಯಿಸಿತು.]

ಸೂರ್ಯನು ಸಾಯಂಕಾಲದಲ್ಲಿ ತನ್ನ ತೇಜವನ್ನು ಅಗ್ನಿಯಲ್ಲಿ ಇಡುವನು. " ಸೌರಂ ತೇಜಃ ಸಾಯಂ ಅಗ್ನಿಂ ಸಂಕ್ರಮತೆ " ಆದಿತ್ಯೋವಾ ಅಸ್ತಂಯನ್ನಗ್ನಿಮನುಪ್ರವಿಶತಿ " ಅಗ್ನಿಂ ವಾ ಆದಿತ್ಯಃ ಸಾಯಂ ಪ್ರವಿಶತಿ " (ಮುಳುಗುವಾಗ ಸೂರ್ಯನು ಅಗ್ನಿಯಲ್ಲಿ ಪ್ರವೇಶಿಸುತ್ತಾನೆ.) ಇವೇ ಮೊದಲಾದ ಶ್ರುತಿ ವಾಕ್ಯಗಳು ಪ್ರಮಾಣಗಳಿರುತ್ತವೆ. ಆದುದರಿಂದ ಸೂರ್ಯನು ಕಡಲುರಿಗೆ ಮರೆ ಹೊಕ್ಕಂತಾಯಿತು.

ಗೋದಾನ, ಭೂದಾನ, ಅನ್ನದಾನ ಮೊದಲಾದುವುಗಳಿಗಿಂತ ಅಭಯ-ಪ್ರದಾನವು ಶ್ರೇಷ್ಠವೆಂದು ಬಲ್ಲವರು ಹೇಳುತ್ತಾರೆ. ಆದುದರಿಂದ ಕಡಲುರಿಯು ಮರೆ ಹೊಕ್ಕ ಸೂರ್ಯನನ್ನು ರಕ್ಷಿಸಲಿಕ್ಕೆ ಯತ್ನಿಸಿದುದು ಉಚಿತವೇ.

॥ ವಾರ್ಧಿಕ ಷಟ್ಪದಿ ॥

ದಿನಪನಪರಾಂಗನಾ ಸಂಗಿಯಾದಂದಮಂ ।
ನೆನೆದು ಪದ್ಮಿನಿಯುದರ ಮುಗಿದು ಕಪ್ಪಾಯ್ತೊ ಮೇ ।
ಣ್ಮನಸಿಜಂ ವಿಟರನಿಡೆ ಕತ್ತುರಿಯ ಗುಂಡನಬ್ಜದ ಕೋವಿಯೊಳ್ಜಡಿದನೊ ॥
ದಿನಲಕ್ಷ್ಮಿ ವಿಧುಗಂಜಿಯಂಬುಜಕರಂಡದೊಳ್ ।
ತನಗುಳ್ಳ ನೀಲಮಂ ಬೈತು ಪೋದಳೊ ಎನಲ್ ।
ವನಜಗಳು ಮುಗಿಯೆ ಗರ್ಭದಿ ಸಿಲ್ಕಿದಿಂದಿಂದಿರಂ ಕರಂಚೆಲ್ವಾದುದು ॥

(ಚೆನ್ನಬಸವ ಪುರಾಣ ಕಾಂಡ ೧-೪-೬

[ಸೂರ್ಯನು ಅಪರಾಂಗನಾಸಂಗಿಯಾದನು (೧ ಪರಸ್ತ್ರೀಯ ಸಂಗ ಬಯಸಿದನು. ೨ ಪಶ್ಚಿಮ ದಿಕ್ಕಿಗೆ ತೆರಳಿದನು) ಎಂದು ಪದ್ಮಿನಿ (ಸೂರ್ಯನ ಹೆಂಡತಿ) ಯು ಅಂತರಂಗವು ಶೋಕಾಗ್ನಿಯ ಧೂಮದಿಂದ ಕಪ್ಪಾದಂತೆಯೂ, ಕಾಮನು ವಿಟ ಪುರುಷರನ್ನು ಹೊಡೆಯಲಿಕ್ಕೆ ಕಸ್ತೂರಿಯ ಗುಂಡನ್ನು ಕಮಲವೆಂಬ (ತುಪಾಕಿಯು) ಕೊಳವಿಯಲ್ಲಿಟ್ಟು ಜಡಿದನೆಂಬಂತೆಯೂ, ದಿವಸ ಲಕ್ಷ್ಮಿಯು ಚಂದ್ರನಿಗೆ ಅಂಜಿ ಕಮಲದ ಕರಡಿಗೆಯಲ್ಲಿ ತನ್ನ (ಅಮೌಲ್ಯವಾದ) ನೀಲಮಣಿಯನ್ನು ಮುಚ್ಚಿಟ್ಟು ಹೋದಳೆಂಬತೆಯೂ, ಕಮಲೋದರದಲ್ಲಿ ಸಿಕ್ಕಿಬಿದ್ದ ಭ್ರಮರವು, ಕಮಲಗಳು ಮುಕುಲಿತವಾಗಲು ಸೊಗಸಾಗಿ ಶೋಭಿಸಿತು.

ದುಃಖಕ್ಕೆ ಕಪ್ಪು ಬಣ್ಣವನ್ನು ಹೇಳುವುದು ಕವಿಸಮಯ. ಸೂರ್ಯನ ಅಪರಾಂಗನಾ ಸಂಗಿಯಾದುದನ್ನು ನೋಡಿ ಪದ್ಮಿನಿಗೆ ದುಃಖವಾಗಿ ಅವಳ ಅಂತರಂಗವು ಕಪ್ಪಾಯಿತು.

ಸೂರ್ಯನು ಅಸ್ತವಾದ ಮೇಲೆ ಕಮಲಗಳು ಮುಕುಳಿತವಾಗುತ್ತವೆ; ನೈದಿಲೆಗಳು ಕಾಸ ಹೊಂದುತ್ತವೆ. ಇದು ಕವಿಸಮಯ.

ಪುಷ್ಪ ರಸವನ್ನು ಸವಿಯಲು ಬಂದ ಭ್ರಮರಗಳು ಸೂರ್ಯಾಸ್ತ ಸಮಯದಲ್ಲಿ ಮುಕುಲಿತವಾಗುವ ಕಮಲಗಳಲ್ಲಿ ಸಿಕ್ಕಿಕೊಳ್ಳುವವು. ಇದನ್ನೇ ಕವಿಯು ಆಹ್ಲಾದಕರವಾಗಿ ವರ್ಣಿಸಿದ್ದಾನೆ. ತುಂಬಿಗಳಿಗೆ ಕಮಲಬಂಧನವಾಗುವ ವಿಷಯವನ್ನು ರಸಿಕ ಜನ ರಮಣೀಯವಾಗುವಂತೆ ಕಾಲಿದಾಸನು ವರ್ಣಿಸಿದುದು ಹೇಗೆಂದರೆ:-

ದುಷ್ಯಂತನು ಶಕುಂತಲೆಯ ಚಿತ್ರವನ್ನು ನೋಡುತ್ತಿರಲು, ಅದರಲ್ಲಿ ಒಂದು ಮರಿದುಂಬಿಯು ಅವಳ ಮುಖಕ್ಕೆ ಎರಗಲೆಳಸುತ್ತಿರುವುದನ್ನು ನೋಡಿ,

ನೋಯಿಸದಿರ್ ಬಾಲತರು ಪಲ್ಲವದಂತೆ ಮನೋಜ್ಞವಾದ ಮ।
ತ್ಪ್ರೀಯಸಿಯಿಂಪುವೆತ್ತ ತುಟಿಯಂ ದಯೆಯಿಂದಮೆ ಪೀರ್ದೆನಲ್ತೆ ಪು॥
ಷ್ಪಯುಧ ಕೇಳಿಯೊಳೆಲೆ ಮಧುವ್ರತ ನೀನದ ಸೋಂಕೆ ನಿನ್ನ ಕೇಳ್।
ತೋಯಜ ಗರ್ಭವೆಂದೆನಿಪ ಬಂಧನ ಮಂದಿರಕಿಂದು ಸೇರಿಪೆಂ॥

(ಇಂದಿಂದಿರ=ಭ್ರಮರ.)

॥ ಕಂದ ॥

ಇನ ವಿರಹಾನಲನಿಂ ಪ।
ದ್ಮಿನಿಯುದರಮುರಿದು ಕರಿಕುಪೋದತ್ತೆನೆ ಭೋಂ॥
ಕನೆ ಮುಗಿವ ವನಜ ಮಧ್ಯದೊ।
ಳಿನಸುಂ ಸಿಲ್ಕಿದ ಮದಾಳಿಯೇನೊಪ್ಪಿದುದೋ॥
ಇನನಗಲಿ ಪೋದೊಡಾ ಪ।
ದ್ಮಿನಿ ಜೀವನ ವೈದೆ ಕೊರಲ ವರೆಗಂ ಕರೆದಂ॥
ಜನ ಮಿಶ್ರ ಬಾಷ್ಪ ಬಿಂದುಗ।
ಳೆನೆ ಮುಗಿದಂಬುಜದೆ ಸಿಲ್ಕಿದಳಿ ಕುಲಮೆಸೆಗುಂ॥

(ದಮಯಂತೀ ಸ್ವಯಂವರ ಆ ೩-ಪದ್ಯ ೨೦, ೨೧)

[ಸೂರ್ಯನ ವಿರಹದಿಂದುತ್ಪನ್ನವಾದ ಅಗ್ನಿಯಿಂದ ಪದ್ಮಿನಿಯ ಉದರವು ಬೆಂದು ಕರಕಾಯಿತೆಂಬಂತೆ (ಸೂರ್ಯಾಸ್ತಮಯವಾದ) ಒಡನೆ ಮುಕುಲಿತವಾಗುವ ಕಮಲಗಳ ಮಧ್ಯದಲ್ಲಿ ಸಿಕ್ಕಿಬಿದ್ದ ಉನ್ಮತ್ತ ಭ್ರಮರವು ಒಪ್ಪಿತು; ಸೂರ್ಯನು ಅಗಲಿ ಹೋಗಲು, ಅವನ ಜೀವವು (ಹೋಗಬೇಕೆಂದು)

ಕೊರಳವರೆಗೆ ಬರಲು (ಶೋಕೋದ್ರೇಕದಿಂದ) ಸುರಿದ ಕಾಡಿಗೆಯಿಂದ ಕೂಡಿದ ಅವಳ ಕಂಬನಿಗಳಂತೆ ಮುಕುಲಿತ ಕಮಲದಲ್ಲಿ ಸಿಲ್ಕಿದ ಭ್ರಮರ ಸಮೂಹವು ಚೆಲ್ವಾಯ್ತು.]

॥ ಕಂದ ॥

ಒಳಗಿರ್ದು ಮೊರೆಯೆ ಮಧುಕರ।
ಕಳಭಂ ನಿಜಗಂಧ ಲೋಭದಿಂ ಸಂಧ್ಯಾಕು॥
ಟ್ಮಳಿತ ಸರೋಜಂ ತಳೆದುದು।
ಜಳ ದೇವತೆಯರ ಶಕುಂತಿಕಾ ವಿಳಸನಮಂ॥

(ಮಲ್ಲಿನಾಥ ಪುರಾಣ ೭-೯.)

[ಎಳದುಂಬಿಗಳು ಕಮಲ ಪರಿಮಳದಲ್ಲಿ ಲೋಭವುಳ್ಳವುಗಳಾಗಿ ಒಳಗಿರ್ದು ಗುಂಜಾರವವನ್ನು ಮಾಡಲು, ಸಂಧ್ಯಾ ಸಮಯದಲ್ಲಿ ಮುಕುಲಿತವಾದ ಕಮಲವು ಜಲದೇವತೆಯರ ಶಕುಂತಿಕಾ (ಪಕ್ಷಿ) ವಿಲಾಸ ಕ್ರೀಡೆಯ ಸೊಬಗನ್ನು ತಾಳಿತು] ಉದರದಲ್ಲಿದ್ದ ದುಂಬಿಗಳ ಗುಂಜಾರವದೊಡನೆ ಕೂಡಿದ ಮುಕುಲಿತ ಪದ್ಮಗಳು ಜಲದೇವತೆಯರ ಕೈ ಬೆರಳುಗಳ ಮೇಲೆ ಕುಳಿತ ಪಕ್ಷಿಗಳಾದುವು. ಗುಂಜಾರವವೇ ಆ ಪಕ್ಷಿಗಳ ಮೊಲ್ನುಡಿಗಳು.

॥ ಉತ್ಪಲ ಮಾಲಾ ॥

ಏಕೆಲೆ ದೇವ ನಿನ್ನೊಳೆಡಗಣ್ ಬಲಗಣ್ ಸರಿಯೆನ್ನದಿಂತು ದೋ।
ಷಾಕರನಂ ಸಮುಂತು ತಲೆಗೇರಿಸಿಕೊಂಡು ಮದೀಯ ಕಾಂತನಂ॥
ಪ್ರಾಕೃತನಂತಿರಸ್ತಗಿರಿಗೆಯ್ದಿಪೆ ಯೆಂದಭವಂಗೆ ವಾಸರ।
ಶ್ರೀಕರ ಕಂಜಮಂ ಮುಗಿದವೋಲ್ ಮುಗಿದಿರ್ದುವು ಪದ್ಮಸಂಕುಳಂ॥

(ಅಭಿನವ ದಶಕುಮಾರ ಚರಿತೆ-೨-೪೦)

["ಎಲೈ ದೇವರೇ, ಎಡಗಣ್ಣು-ಬಲಗಣ್ಣುಗಳನ್ನು ಸರಿಯೆಂದೆಣಿಸದೆ ಹೀಗೆ ದೋಷಾಕರ (ಚಂದ್ರ) ನನ್ನು ಒಲ್ಮೆಯಿಂದ ತಲೆಗೇರಿಸಿಕೊಂಡು ನನ್ನ ನಲ್ಲನಾದ ಸೂರ್ಯನನು ಕೀಳನೆಂದು ಬಗೆದು ಅಸ್ತಾಚಲಕ್ಕೆ ಅಟ್ಟುವೆ" ಎಂದು ದಿವಸ ಲಕ್ಷ್ಮಿಯು ಕಮಲಗಳಂತೆ ಕೋಮಲವಾದ ಕೈಗಳನ್ನು ಮುಗಿದಳೋ ಎಂತೆ ಕಮಲ ಸಮೂಹವು ಮುಗಿದಿರ್ದಿತು.]

ಈಶ್ವರನಿಗೆ ಸೂರ್ಯ ಚಂದ್ರಮರು ಬಲಗಣ್ಣೆಡಗಣ್ಣಾಗಿರುತ್ತಾರೆ.

ಕ್ಷೀರ ಸಾಗರವನ್ನು ಮಥಿಸುವಾಗ ಹೊರಟ ಹಾಲಾಹಲ ವಿಷವನ್ನು ಈಶ್ವರನು ಲೋಕಕಲ್ಯಾಣಾರ್ಥವಾಗಿ ಕುಡಿದನು. ಅದರ ಸಂತಾಪವು ಅಸಹ್ಯವಾಗಲು ಅವನು ಅದರನಿವಾರಣೆಗಾಗಿ ಶೀತಲ ಕಿರಣನಾದ ಚಂದ್ರನನ್ನು ಶಿರೋಭಾಗದಲ್ಲಿ ಧರಿಸಿದನು. ಚಂದ್ರನಿಗೆ ಉಚ್ಚಸ್ಥಾನವು ಸಿಕ್ಕಹಾಗಾಯಿತು. ಇದನ್ನು ನೋಡಿ ಕಮಲಿನಿಯು ತನ್ನ ಗಂಡನಾದ ಸೂರ್ಯನಿಗೆ ಅಪಮಾನವಾಯಿತೆಂದು ಬಗೆದು ಖಿನ್ನಳಾಗಿ " ಎಡಗಣ್ಣು ಬಲಗಣ್ಣುಗಳಲ್ಲಿಯೂ ಕೂಡ ಭೇದವೆ? ದೇವರ ಮನೆಯ ನ್ಯಾಯವೆಂದರೆ ಇದೆಯೇ? " ಎಂದು ಈಶ್ವರನನ್ನು ದ್ವೇಷಿಸಿ ನುಡಿದಳೆಂಬುದೇ ಭಾವವು. " ದೋಷಾಕರ " (೧ ಚಂದ್ರ, ೨ ದೋಷವುಳ್ಳವ) ಎಂಬ ಶಬ್ದವನ್ನಾದರೂ ಕವಿಯು ಹೇತು ಪೂರ್ವಕವಾಗಿಯೇ ಉಪಯೋಗಿಸಿದ್ದಾನೆ.

॥ ಮತ್ತೇಭ ವಿಕ್ರೀಡಿತ ॥

ಇನನಸ್ತಂಗತನಾಗೆಯುತ್ಪಲಿನಿ ಪೇಳ್ಗುಂ ಲಕ್ಷ್ಮಿಯುಂಟೆಂಬುದ ।
ರ್ಕೆನಗಂ ತಪ್ಪದು ರಾಜಬಾಧೆ ಬಳಿಯುಂ ಲೇಸಲ್ತು ತಾನೆನ್ನ ಜೀ ॥
ವನಮೆಂಬುಬ್ಬೆಗದಿಂವೆ ನಂಜುರುಳಿಯಂ ಪೋ ನುಂಗಿದಳ್ ಪೇಳದ ।
ಬ್ಬನಿಯೆಂಬಂತೆ ವೊಲಾಯ್ತು ಕುಟ್ಮಳಿತ ಕಂಜಾತೋದರೇಂದಿಂದಿರಂ ॥

(ಚಂದ್ರಪ್ರಭ ಪುರಾಣ-೮-೧೫)

[" ಇನನು (೧ ಸೂರ್ಯನು, ೨ ಒಡೆಯುನು) ತೆರಳಿದನು. ಉತ್ಪಲಿನಿಯು (ನೆನ್ನನ್ನು ಮತ ರಿಸುವವಳು) ಹೇಳಿಯೇ ಹೇಳುವಳು. ಲಕ್ಷ್ಮಿಯು (೧ ಸಂಪತ್ತು, ೨ ಕಾಂತಿಯು) ಇಲ್ಲದರಿಂದಲೇ ನನಗೆ ರಾಜನ (೧ ಚಂದ್ರನ ೨ ಅರಸನ) ಬಾಧೆಯು ತಪ್ಪದು. ಇನ್ನು ಮೇಲೆ ಜೀವಿಸಿರುವದು ಒಳ್ಳೆಯದಲ್ಲ ಎಂದು ಮನಸ್ಸಿನ ಉದ್ವೇಗದಿಂದ ಕಮಲಿನಿಯು ಆರಿಗೂ ತಿಳಿಯದಂತೆ ವಿಷದ ಗುಳಿಗೆಯನ್ನು ನುಂಗಿದಳೆಂಬಂತೆ ಮುಕುಲಿತ ಕಮಲದ ಉದರದಲ್ಲಿದ್ದ ಭ್ರಮರವು ಕಾಣಿಸಿಕೊಂಡಿತು.

ಸೂರ್ಯನು ಅಸ್ತಂಗತನಾಗಲು ಭ್ರಮರಗಳು ಕಮಲಗರ್ಭದಲ್ಲಿ ಸಿಕ್ಕಿಕೊಳ್ಳುವವು. ಕಮಲಿನಿಯು ಸೂರ್ಯನ ಹೆಂಡತಿಯು; ಉತ್ಪಲಿನಿಯು ರಾಜನ (ಚಂದ್ರನ) ಹೆಂಡತಿಯು. ಸೂರ್ಯನು ಮುಳುಗಲು ಕಮಲಿನಿಯ ಉಲ್ಲಾಸವು ಉಕ್ಕೇರಿತು. " ಒಡೆಯನಂತೂ ಹೊರಟು ಹೋದನು. ಹೊಸದಾಗಿ ಬರುವ ರಾಜನಂತೂ ಅಸೂಯಾನ್ವಿತಳಾದ ಈ ಉತ್ಪಲಿನಿಯ ಹೇಳಿಕೆಯಿಂದ ನನ್ನ ಲಕ್ಷ್ಮಿಯನ್ನು ಅಪಹರಿಸದೆ ಬಿಡನು. ನನ್ನ ಜೀವದ ಸರ್ವಸ್ವವಾದ ಲಕ್ಷ್ಮಿಯೇ

ಹೋದ ಮೇಲೆ ನನ್ನ ಬಾಳ್ವೆಯೇತಕ್ಕೆ ?" ಎಂದು ಕಮಲಿನಿಯು ಸಂತಾಪದಿಂದ ವಿಷದ ಗುಳಿಗೆಯನ್ನು ನುಂಗಿದಳೆಂಬಂತೆ ಅವಳ ಗರ್ಭದಲ್ಲಿ ಭ್ರಮರವು ಕ್ಷೋಭಿಸಿತೆಂದು ಕವಿಯು ವರ್ಣಿಸಿದ್ದಾನೆ. "ಏನಗ್ಗಳವೋ ಕವೀಂದ್ರರಾ!"

॥ ಕಂದ ॥

ಒಂದಿದಳಿನಿನದದಿಂದಭಿ ।
ವಂದಿಸುತುಂ ಮುಗಲ್ಕೆಯೊಳ್ ಪುನರ್ದರ್ಶನಮು ॥
ಕ್ಕೆಂದು ದಿನಪಂಗೆ ಕೆಯ್ಮುಗಿ ।
ವಂದವೆ ಮುಗಿದಿರ್ದುವಲರ್ದ ತಾವರೆಯರಲ್ಗಳ್ ॥

(ಅಜಿತನಾಥ ಪುರಾಣ-೯-೩೮.)

[ತಾವರೆಗಳು ಸೂರ್ಯನಿಂದ ಅಗಲುವಾಗ "ಪುನರ್ದರ್ಶನವಾಗಲಿ" ಎಂದು ವಂದನಾ ಪೂರ್ವಕವಾಗಿ ಭ್ರಮರ ರವವೆಂಬ ಮೆಲ್ನುಡಿಯಿಂದ ಅರುಹಿ ಅವನಿಗೆ ಕೈಮುಗಿಯುವಂತೆ ಮುಗಿದಿದ್ದುವು.]

॥ ಮತ್ತೇಭ ವಿಕ್ರೀಡಿತಂ ॥

ಪದೆಪಿಂದಂಬರ ಲಕ್ಷ್ಮಿಯೆಚ್ಚಿಕೊಳಲೆಂದೌತ್ಸುಕ್ಯದಿಂ ಕಜ್ಜಳಂ ।
ಪುದಿದೊಪ್ಪಿರ್ದ ಕರಂಡಮಂ ತೆಗೆದು ತನ್ನುತ್ಸಾಹದಿಂ ಮುಚ್ಚಳಂ ॥
ಮುದದಿಂದಂ ತೆಗೆಯುತ್ತುಮಿರ್ಪ ಪದದೊಳ್ ಕೈತಪ್ಪಿ ಬಿಳ್ದಂಜನಂ ।
ಕೆದರಿತ್ತೆಂಬಿನಮುರ್ಬಿ ಮರ್ಬು ಪರಿದತ್ತಿತ್ತಂ ದಿಶಾಭಿತ್ತಿಯೊಳ್ ॥

(ಅಭಿನವ ದಶಕುಮಾರ ಚರಿತೆ ೩-೩೨)

[ವಿಲಾಸವತಿಯಾದ ಆಕಾಶ ಲಕ್ಷ್ಮಿಯು ಕಣ್ಣುಗಳಿಗೆ ಕಾಡಿಗೆಯನ್ನು ಹಚ್ಚಿಕೊಳ್ಳಬೇಕೆಂದು ಅಂಜನದ ಶೃಂಗಾರ ಕರಂಡಕವನ್ನು ತೆಗೆದುಕೊಂಡು, ಸಂಭ್ರಮದಿಂದ ಅದರ ಮುಚ್ಚಳವನ್ನು ತೆಗೆಯುತ್ತಿರುವಾಗ ಕೈ ತಪ್ಪಿ ಕಾಡಿಗೆಯು ಬಿದ್ದು ಎಲ್ಲ ಕಡೆಗೆ ಪಸರಿಸಿತೆಂಬಂತೆ ಕತ್ತಲೆಯು ವಿಸ್ತೀರ್ಣವಾದ ದಿಕ್ಕುಗಳಲ್ಲೆಲ್ಲ ಸಾಂದ್ರವಾಗಿ ವ್ಯಾಪಿಸಿತು.]

॥ ಕಂದ ॥

ಇರುಳರಸಿ ಸಿಂಗರಂಗೊಳೆ ।
ಪರಿಣತ ರವಿ ದೀಪಮಿಟ್ಟು ಬಾಸಣಿಸಿದೊಡಂ ॥
ಬರಪೃಥು ಶರಾವಮಂ ಕುಡಿ ।
ವರಿದುದೊ ಕಾಡಿಗೆಯೆನಲ್ಕೆ ಪರಿದುದು ತಿಮಿರಂ ॥

(ದಮಯಂತೀಸ್ವಯಂವರ ಆ—೩, ಪ—೨೪)

[ರಾತ್ರಿಯೆಂಬ ವಿಲಾಸಿನಿಯು ಶೃಂಗರಿಸಿಕೊಳ್ಳಲೆಂದು ಅಸ್ತಮಯ ಸಮಯದ ಸೂರ್ಯನೆಂಬ ದೀವಿಗೆಯನ್ನಿಟ್ಟು ಆಕಾಶವೆಂಬ ಹಳವಾದ ಪರಿವಾಣವನ್ನು ಅವರ ಮೇಲೆ ಮುಚ್ಚಲು ಕಾಡಿಗೆಯ ಕುಡಿಯು ಹಬ್ಬಿತೆಂಬಂತೆ ಕತ್ತಲೆಯು ವ್ಯಾಪಿಸಿತು.]

॥ ಸಾಂಗತ್ಯ ॥

ಪೊಡವಿವೆಣ್ಣಾದಿತ್ಯ ಮಂಡಲವೆಂದೆಂಬ।
ಸೊಡಗುಣಡಿಯಿಂ ಕಜ್ಜಳವನು ||
ಹಿಡಿವ ಹಂಚಿನ ತೆರನೆಂದೆನೆ ಕಾವಳ।
ವಡಸಿ ಕಪ್ಪಾದುದಾಗಸವು ॥

(ಮಂಗರಸನ ಶ್ರೀಪಾಲ ಚರಿತೆ-ಕವಿಚರಿತೆ)

[ಪದ್ಯಾರ್ಥವು ಸ್ಪಷ್ಟವು.]

॥ ಚಂಪಕ ಮಾಲಾ ॥

ರವಿಕರ ತಾಪದಿಂದೆ ಹೃದಯಂ ಮಿಗೆ ಹೊತ್ತಿ ಧರಿತ್ರಿಯಾಸ್ಯದಿಂ।
ದವಿರಳವಾಗಿ ಮಿಕ್ಕೊಗೆವ ಕರ್ವೊಗೆ ತಾನೆನೆ ತನ್ಮಹೀ ಗುಹಾ ||
ನಿವಹದಿನುಣ್ಮಿ ಪೊಣ್ಮಿ ಪೊರ ಪಾಯ್ದುರದಾಗಳೆ ನೋಡೆ ನೋಡೆ ಭೂ।
ಭವನ ಮನೆಯ್ದೆ ಪರ್ವಿದುದು ದುಷ್ಟ ಮಹಾಂಜನ ಪುಂಜವೆಂಬಿನಂ ॥

(ಶಾಂತೀಶ್ವರ ಪುರಾಣ—೧೧-೬೧)

[ಸೂರ್ಯನ ಕಿರಣಗಳ ಸಂತಾಪದಿಂದ ಹೃದಯವು ಅತಿಶಯವಾಗಿ ಹೊತ್ತಿ ಪೃಥ್ವಿಯ ಮುಖದಿಂದ ದಟ್ಟವಾಗಿ ಹೊರಬೀಳುವ ಕಪ್ಪು ಹೊಗೆಯೆಂಬಂತೆ ಕತ್ತಲೆಯು ಆ ಭೂಮಿಯ ಉದರ ಪ್ರದೇಶಗಳಿಂದ ಹೊರಟು ಹೊರಗೆ ಹಬ್ಬಿ ನೋಡು ನೋಡುವಷ್ಟರಲ್ಲಿಯೇ (ಇಂದ್ರಜಾಲಿಕನು) ಹರಡಿದ ದುಷ್ಟವಾದ ಅಂಜನ ಸಮೂಹವಂತೆ ಭೂಮಂಡಲದಲ್ಲೆಲ್ಲ ಹಬ್ಬಿತು.

॥ ವಾರ್ಧಿಕ ಷಟ್ಪದಿ ॥

ಗರತಿ ಯಾಗಿರುತಿರ್ದ ಯಾಮಿನಿಗೆ ಬಿರುಸಾದ।
ಸುರವೀಧಿ ನಡೆಯಲತಿ ಕಠಿಣ ವಾಗುವುದೆಂದು।
ತರಣಿಯಾ ನೀಲಾಂಬರವನೆಳೆದೆಳೆದಿನು ಹಾಸಿ ಕುಳ್ಳಿರ್ದ ಜಾಣ್ಮೆಯಿಂದೆ॥
ಸರಸ ಕೌಶಲ್ಯ ತೋರಲ್ಕೆ ಬಹು ಸುಮಗಳಂ।
ಸರಸರನೆ ತೆಗೆದರುಂ ಪರಪುರುಷನಿರಲವಳು।
ಬರಳೆಂದೆ ರವಿಯು ಮರೆಯಾಗಲಾ ಬೆಳಕಡಗಿ ಕತ್ತಲಾಯ್ತೆಂದರಿಪೆನು॥

(ಶ್ರೀ. ಅಚ್ಯುತ ಕೃಷ್ಣರಾವ್ ಹುಯಿಲಗೋಳ.-ಪ್ರಭಾತ)

[ಸಾಧ್ವಿಯಾದ ಯಾಮಿನಿಗೆ (ರಾತ್ರಿವಧುವಿಗೆ) ಬಿರುಸಾದ ಆಕಾಶ ಮಾರ್ಗದಲ್ಲಿ ನಡೆಯುವುದು ಅತ್ಯಂತ ಕಠಿನವಾಗುವುದೆಂದು ಬಗೆದು ಸೂರ್ಯನು ನೀಲವಾದ ಅಂಬರವನ್ನು (= ವಸ್ತ್ರವನ್ನು) ಎಲ್ಲೆಡೆಯಲ್ಲಿಯೂ ಹಾಸಿ, (ಮೃದು ಮಾರ್ಗವನ್ನುರಚಿಸಿ) ವಿಲಾಸದಿಂದ [ಒಂದೆಡೆಯಲ್ಲಿ] ಕುಳಿತುಕೊಂಡು ತನ್ನ ಶೃಂಗಾರ ಸಾರವನ್ನರುಹಿ (ಅವಳ ಚಿತ್ತವನ್ನು ಸೆಳೆಯುವುದಕ್ಕಾಗಿ) ಪುಷ್ಪಗಳನ್ನು (ನಕ್ಷತ್ರಗಳನ್ನು) ಒಂದರಹಿಂದೊಂದು ಚೆಲ್ಲಿದರೂ ಕೂಡ (ಅವಳು ಬರಲಿಲ್ಲ) ಇದನ್ನು ನೋಡಿ ಸೂರ್ಯನು " ಪರಪುರುಷನಿರಲು ಅವಳು ಬಾರಳು " ಎಂದೆಂದುಕೊಂಡು (ನಿರಾಶನಾಗಿ) ಮರೆಯಾಗಲಾಗಿ ಪ್ರಕಾಶವಡಗಿ ಕತ್ತಲಾಯಿತು.]

ಪುಷ್ಪವು ಶೃಂಗಾರೋದ್ದೀಪನವು.

ರವಿಯು ಕೋಮಲಾಂಗಿಯಾದ ಯಾಮಿನೀ ಕಾಮಿನಿಯನ್ನು ಕಾಮಿಸಿ ತನ್ನ ವಿಲಾಸ ಚೇಷ್ಟೆಗಳಿಂದ ಅವಳನ್ನು ಮೋಹಿಸಲು ಯತ್ನಿಸಿದನು. ಆದರೆ ಯಾಮಿನಿಯು ಸಾಧ್ವೀ ಶಿಖಾಮಣಿಯಾದುದರಿಂದ ಅವನ ತಂತ್ರಕ್ಕೊಳಪಡಲಿಲ್ಲ. ಸಾಧ್ವೀ ಸ್ತ್ರೀಯರು ಬಾಹ್ಯ ವ್ಯಾಮೋಹಕ್ಕೊಳಗಾಗಿ ತಮ್ಮ ಚಾರಿತ್ರ್ಯ ಹಾನಿಯನ್ನೆಂದೂ ಮಾಡಿಕೊಳ್ಳುವುದಿಲ್ಲವೆಂಬುದೇ ಕವಿಯ ಆಶಯವು.

॥ ವಾರ್ಧಿಕ ಷಟ್ಪದಿ ॥

ತೋರ ಮುತ್ತಿನ ಹಾರವಂ ತೊಟ್ಟು ಚಂದ್ರಮುಖಿ ।
ಕಾರಗತ್ತಲೆಯೊಳತಿಯಿಡಲಂಜಿ ಪಣೆಗೆ ಕ ।
ಸ್ತೂರಿಯಂ ಕಣ್ಗೆ ಕಾಡಿಗೆಯಂ ಕೊರಲ್ಗೆ ಹರಿನೀಲಮಣಿ ಭೂಷಣವನು॥
ಸೇರಿಸಲ್ಕದು ನೈಜವಾಗೆ ಬೆರಗಾಗಿ ಬಳಿ ।
ಕೋರೆಮುಗುಳಂ ತೆಗೆದು ಜಡೆಗಟ್ಟಿ ಪೊರಮಟ್ಟು ।
ಕೇಳಿಗೊಂಡೈದಿದಳ್ ಸಂಕೇತ ಭವನದೊಳ್ ಕಾದಿರ್ದ ಕಾಂತನೆಡೆಗೆ ॥

(ಜೈಮಿನೀ ಭಾರತ-೨೬-೯)

ಇಲ್ಲಿ ಕವಿಯು ಅಭಿಸಾರಿಕಾ ಸ್ತ್ರೀಯ ಗಮನವನ್ನು ವರ್ಣಿಸುತ್ತಾನೆ.

[ಚಂದ್ರಮುಖಿಯೊರ್ವಳು ತೋರ ಮುತ್ತಿನ ಹಾರವನ್ನು ಧರಿಸಿ ಕತ್ತಲೆಯಲ್ಲಿ ಹೋಗಲಂಜಿ, (ಮೌಕ್ತಿಕ ಮಾಲೆಯ ಹೊಳಪಿನಿಂದ ತನ್ನ ಗಮನವು ಜನರಿಗೆ ತಿಳಿದೀತೆಂದಂಜಿ) ಹಣೆಗೆ ಕಸ್ತೂರೀ ತಿಲಕವನ್ನಿಟ್ಟು, ಕಣ್ಣಿಗೆ ಕಾಡಿಗೆಯನ್ನು ಹಚ್ಚಿಕೊಂಡು, ಕೊರಳೊಳಗೆ ಇಂದ್ರನೀಲ ಮಣಿ ಮಾಲೆಯನ್ನು

ಧರಿಸಿ, ಓರೆಮುರುಬನ್ನು ಬಿಟ್ಟಿ ಜಡೆಗಟ್ಟಿ ಆರಿಗೂ ತಿಳಿಯದಂತೆ ಸಾಂದ್ರವಾದ ತಿಮಿರ ಪಟಲದೊಳ್ ಕೂಡಿ ಓಣಿಗೊಂಡು ನಡೆದು, ಸಂಕೇತ ಗೃಹದಲ್ಲಿ ಕಾದಿರ್ದ ತನ್ನನಲ್ಲನೆಡೆಗೆ ಬಂದಳು.] ಇಲ್ಲಿ ತನ್ನ ಸಂಚಾರವು ಆರಿಗೂ ಊಹಿಸಲು ಶಕ್ಯವಾಗಿರಕೂಡದೆಂಬುದೇ ಅಭಿಸಾರಿಕೆಯ ಆಶಯವು. ತದನುಗುಣವಾಗಿ ತನ್ನ ರೂಪವನ್ನೂ, ಗಮನವನ್ನೂ ಮರೆಯಿಸಲು ಸಾಮರ್ಥ್ಯವುಳ್ಳ ಕಸ್ತೂರಿ. ಕಾಡಿಗೆ, ಇಂದ್ರನೀಲಮಣಿ ಮೊದಲಾದುವುಗಳನ್ನು ಧರಿಸಿಕೊಂಡು ಕಪ್ಪಾಗಿ ಕವಿದು ಬರುವ ಕಗ್ಗತ್ತಲೆಯಲ್ಲಿ ಹೊರಟಿರುವಳು. ಏಕೆಂದರೆ, ಕಪ್ಪಾದ ತನ್ನದೇಹವು ಕಾಣದೆಂಬ ಭಾವದಿಂದ. ಹೀಗಿರಲು ತೋರ ಮುತ್ತಿನ ಹಾರವನ್ನು ಧರಿಸಲಿಲ್ಲೆಂಬುದು ಔಚಿತ್ಯವನ್ನು ತೋರ್ಪಡಿಸುತ್ತದೆ. "ಕಾಂತಾರ್ಥಿನೀ ತು ಯಾ ಯಾತಿ ಸಂಕೇತಂ ಸಾಭಿಸಾರಿಕಾ" (ಪ್ರಿಯನಿದ್ದ ಸಂಕೇತ ಸ್ಥಾನಕ್ಕೆ ಹೋಗುವವಳು ಅಭಿಸಾರಿಕೆಯು.)

ಹಿತ್ವಾ ಲಜ್ಜಾಭಯೇ ಶ್ಲಿಷ್ವಾ ಮದನೇನ ಮದೇನ ಯಾ ।
ಅಭಿಸಾರಯತೇ ಕಾಂತಂ ಸಾ ಭವೇದಭಿಸಾರಿಕಾ ॥

ಲಜ್ಜೆಯನ್ನೂ, ಭೀತಿಯನ್ನೂ ತೊರೆದು ಕಾಮವಶಳೂ, ಉನ್ಮತ್ತಳೂ ಆಗಿ ಕಾಂತನೆಡೆಗೆ ಹೋಗುವವಳು ಅಭಿಸಾರಿಕೆಯು.)

ಕೆಳಗಣ ಪದ್ಯಗಳಲ್ಲಾದರೂ ಅಭಿಸಾರಿಕಾಸ್ತ್ರೀಯ ವರ್ಣನೆಯು ಇದೇ ಪ್ರಕಾರವಿದೆ:-

ಧವಳಾಂಬರಮನವುಳ ಮೌಕ್ತಿಕಾಭರಣಮಂ ।
ನವಚಂದನಾನುಲೇಪನಗಳಂ ಬಿಟ್ಟು ಸೊಗ ।
ಸುವ ನೀಲ ವಸನ ನೀಲಾಭರಣ ಮೃಗ ಮದಂಗಳನುಟ್ಟು ತೊಟ್ಟುಪೂಸಿ ॥
ತವೆ ತಮಂ ಬಿಹು ರೂಪಮಂ ಧರಿಸಿದಂತೆ ವಾ ।
ಪವೆ ನಾಡೆ ಪಡ್ ಪರಿಜನಿಂಚರಿಸುವಂತಧಿಕ ।
ತವಕದಿಂದೈದಿರ್ ಸಂಕೇತ ಭವನದೊಳ್ ಕಾದಿರ್ದ ಕಾಂತರೆಡೆಗೆ ॥

(ಚೆನ್ನಬಸವ ಪುರಾಣ ೧-೮-೧೩)

ಉಟ್ಟು ತವಲಾ ಪಟ್ಟೆಯನೆ ಕತ್ತುರಿಯುಂ ನಿಜದೇಹದಲ್ಲಿಗ ।
ಳ್ತೆಟ್ಟು ಸುರೇಂದ್ರ ನೀಲಮಣಿ ಭೂಷಣಮಂ ತಳೆದುತ್ಪಳ ಸ್ರಜಂ ॥
ಬಿಟ್ಟದುರುಂಬಿನೊಳ್ ಮೆರೆಯೆ ನೀಲದ ಚೇಲದ ಮೇಲುದಾಂತು ಕ ।
ಣ್ಗೆಟ್ಟಳ ಮಾಡಳೊರ್ವಳೆಳೆಯುಳ್ ತಮಮಂ ಪರೆದಪ್ಪಿದಂತೆವೋಲ್ ॥

(ರಾಜಶೇಖರ ವಿಳಾಸ ೩೧-೨೮)

ಬೆಳದಿಂಗಳಲ್ಲಿ ಸಂಚರಿಸುವ ಅಭಿಸಾರಿಕೆಯ ವರ್ಣನೆಯು:-

ದುಗುಲಮನುಟ್ಟು ತೊಟ್ಟು ಪೊಸ ಮುತ್ತನೆ ಚಂದನದಣ್ಪನಿಕ್ಕಿ ಮ।
ಲ್ಲಿಗೆಯ ಸರಂಗಳಂ ಮುಡಿದು ಚಂಪಕ ಮಾಲೆಯನೆತ್ತಿ ಮೇಲೆ ತುಂ॥
ಬಿಗಳೊಲೆದಾಡದಂತರಿಯಲಾಗದವೋಲ್ ನವ ಚಂದ್ರಿಕಾಚ್ಛ ವಿ।
ಚಗಳೊತಗೂಡಿ ಪೋದಳಭಿಸಾರಿಕೆ ಮುತ್ತಿನ ಬೊಂಬೆಯೆಂಬಿನಂ॥

(ಲೀಲಾವತಿ ೨-೩೭)

॥ ಕಂದ ॥

ದಿನಕರ ನೆಸೆವಾಕಾಶಾ।
ವನಿಯೊಳ್ ದಶ ಶತಕರಾನುಕೂಲಂ ಮನದೊಂ॥
ದನುನಯದಿಂ ಬಿತ್ತಿದ ಬೆಳ।
ಗಿನ ಬೀಜಾಂಕುರಗಳೆನಿಸಿದುವು ತಾರಗೆಗಳ್॥

(ಗಿರಿಜಾಕಲ್ಯಾಣ ೪-೯೧]

[ಆಕಾಶವೆಂಬ ಭೂಮಿಯಲ್ಲಿ ಸಹಸ್ರ ಕಿರಣಗಳಿಗೆ ಅನುಕೂಲವಾಗುವಂತೆ ಸೂರ್ಯನು ಒಳ್ಳೆಯ ಪ್ರೀತಿಯಿಂದ ಬಿತ್ತಿದ ಪ್ರಕಾಶ ಬೀಜಗಳ ಅಂಕುರಗಳಂತೆ ನಕ್ಷತ್ರಗಳು ಹೊಳೆದುವು.]

ಸೂರ್ಯನಿಗೆ ಸಹಸ್ರಾಂಶುವೆಂದು ಹೆಸರಿದೆ ("ಭಾನುರ್ಹಂಸಃ ಸಹಸ್ರಾಂಶುಃ" ಅಮರಕೋಶ) ಅವನಿಗೆ ಇಷ್ಟು ಕಿರಣಗಳು ಎಲ್ಲಿಂದ ಬಂದುವು ? ಸೂರ್ಯನು ಮೊದಲು ಆಕಾಶ ಭೂಮಿಯಲ್ಲಿ ಪ್ರಕಾಶದ ಬೀಜಗಳನ್ನು ಬಿತ್ತಿದನು. ಅವುಗಳೇ ಮೊಳೆತು ಅಂಕುರಗಳಾಗಿ ನಕ್ಷತ್ರಗಳ ರೂಪದಿಂದ ಹೊರಬಿದ್ದುವು. ಬೆಳಗಾದೊಡನೆ ಅವುಗಳೇ ಸೂರ್ಯನಿಗೆ ಕಿರಣಗಳಾಗುವವೆಂದು ಕವಿಯು ವಿಚಿತ್ರ ರೀತಿಯಿಂದ ಆಕಾಶದೊಳಗಣ ನಕ್ಷತ್ರಗಳನ್ನು ವರ್ಣಿಸಿದ್ದಾನೆ.

॥ ಉತ್ಪಲ ಮಾಲಾ ॥

ಪಿಂಗದೆ ಬಂದು ಬಂದು ಬರೆ ಪೀರುತುಮಿರ್ಪ ಚಕೋರಪಕ್ಷಿಜಾ।
ಲಂಗಳಿಸೊರ್ಮೆ ತೀರ್ಗುಮಿರದೀ ಶಶಿ ಚಂದ್ರಿಕೆಯೆಂದು ಪದ್ಮಗ॥
ರ್ಭಂ ಗಗನೋರ್ವಿಯೊಳ್ಪಡೆದು ಮುನ್ನಮೆ ತಾಂ ನೆರೆ ಬಿತ್ತಿದಚ್ಛ ಬೆ।
ಳ್ದಿಂಗಳ ಬೀಜರಾಜಿಯೆನೆ ಕಣ್ಗೆಸೆದಿರ್ದುದು ತಾರಕೋತ್ಕರಂ॥

(ಶಾಂತೀಶ್ವರ ಪುರಾಣ ೧೧-೨೮)

[ಎಡೆಬಿಡದೆ ಬಂದು ಜ್ಯೋತ್ಸ್ನಾಪಾನ ಮಾಡುವ ಚಕೋರ ಪಕ್ಷಿಗಳಿಗೆ ಚಂದ್ರನ ಬೆಳದಿಂಗಳು ಒಂದೇ ಸಲಕ್ಕೆ ತೀರಿ ಹೋಗುವುದು (ಚಂದ್ರಿಕಾ ಸಂಚಯವು ಇಷ್ಟು ಪಕ್ಷಿಗಳಿಗೆ ಸಾಲುವುದೆಂತು ?) ಎಂದು ಬ್ರಹ್ಮದೇವನು ಆಕಾಶ ಭೂಮಿಯಲ್ಲಿ ಮುಂಚೆಯೇ ಬಿತ್ತಿದ ಬೆಳ್ದಿಂಗಳಿನ ಬೀಜಗಳ ಸಮೂಹವೆಂಬಂತೆ ನಕ್ಷತ್ರ ಸಮುದಾಯವು ಒಪ್ಪುತ್ತಲಿದ್ದಿತು.] ಬೆಳ್ದಿಂಗಳು ಚಕೋರಗಳ ಆಹಾರವುಃ—

" ಅಲಘುತ್ವಂ ಬೆತ್ತು ಪರ್ವಿತ್ತೆಸೆದು ಮಿಸುಪ ಜೊನ್ನಂ ಚಕೋರಾ ವೃತಾನ್ನಂ "

॥ ಕಂದ ॥

ಓಸರಿಸೆ ಸಂಜೆ ಜವನಿಕೆ ।
ಯೋಸರಿಸಿದ ತೆರದೆ ರಾತ್ರಿ ನರ್ತಕಿ ಮೊಗುಳುಂ ॥
ಸೂಸಿದ ಪುಷ್ಪಾಂಜಳಿಯೆನೆ ।
ಭಾಸಿಸಿದುವು ಗಗನ ರಂಗದೊಳ್ ತಾರಗೆಗಳ್ ॥

[ತೆರೆಯು ತೊಲಗಿದಂತೆ ಸಂಜೆಯು ಹರಿಯಲು, ರಾತ್ರಿ ನರ್ತಕಿಯು ನಭೋರಂಗದ ಮೇಲೆ ಬಂದು ಸೂಸಿದ ಪೂಜೆಗೊಂಚೆಯೆಂಬಂತೆ ಅಲ್ಲಿ ನಕ್ಷತ್ರಗಳು ರಂಜಿಸಿದುವು] ಸಂಧ್ಯಾ=ಸಂಜೆ (ತದ್ಭವ); ಯವನಿಕಾ=ಜವನಿಕೆ (ತ-)

॥ ಕಂದ ॥

ಅವಿರಳ ತಿಮಿರಾದ್ರ್ರ ಮೃಗೋ ।
ದ್ಭವ ಸಿಕ್ತ ನಭೋಂಗಣಕ್ಕೆ ರಾಜಾಗಮನೋ ॥
ತ್ಸವದೊಳ್ ಬಿತ್ತರಿಸಿದ ರಂ ।
ಗವಲಿಯ ಮುತ್ತುಗಳೆನಿಸಿದುವು ತಾರಗೆಗಳ್ ॥

(ವರ್ಧಮಾನ ಪುರಾಣ-ಕವಿಚರಿತೆ ೧)

[ಅಂಧಃಕಾರವೆಂಬ ಸಾಂದ್ರವಾದ ಕಸ್ತೂರೀ ಜಲದಿಂದ ಗಗನಾಂಗಣಕ್ಕೆ ತಳಿಯ ಹಾಕಿ ಚಂದ್ರೋದಯ ಮಹೋತ್ಸವ ಸಮಯದಲ್ಲಿ ವಿಸ್ತಾರವಾಗಿ ರಚಿಸಿದ ರಂಗವಲ್ಲಿಯ ಮುತ್ತುಗಳೆಂಬಂತೆ ನಕ್ಷತ್ರಗಳು ಕಂಗೊಳಿಸಿದುವು]

ಪುರ ಜನರು ರಾಜನ ಆಗಮನ ಕಾಲದಲ್ಲಿ ಪಟ್ಟಣದ ಬೀದಿಗಳನ್ನು ಜಲ ಸೇಚನೆಗೆಯ್ದು ರಂಗವಲ್ಯಾದಿಗಳಿಂದಲಂಕರಿಸುವುದುಂಟು ಇಲ್ಲಿಯಾದರೂ ರಾಜನ (ಚಂದ್ರನ) ಆಗಮನಾರ್ಥವಾಗಿ ಆಕಾಶಾಂಗಣವು ಅಲಂಕರಿಸಲ್ಪಟ್ಟಿತು.

ಅಲ್ಲಲ್ಲಿ ಅಕ್ಕಿಗಳನ್ನಿಟ್ಟು ರಂಗವಲ್ಲಿಯನ್ನು ರಚಿಸುವದನ್ನು ಎಲ್ಲರೂ ಬಲ್ಲರು. ಇಲ್ಲಿ ನಕ್ಷತ್ರಗಳೇ ರಂಗವಲ್ಲಿಯ ಅಕ್ಕಿಗಳು.

॥ ಸಾಂಗತ್ಯ ॥

ಹಳಗಾಲದಂಬರವಿಳೆಗೆಯ್ದಿಯವನಿಯ ।
ಮುಳುಗಿಪದೆಂದಾಜಿಯಜನು ॥
ಎಳಸಿ ಮಾಡಿಸಿ ಬೆಳ್ಳಿ ಮೊಳೆವೆಟ್ಟಿದನೊ ಎನೆ ।
ಪೊಳೆದುವಾ ಭಗಣವಭ್ರದೊಳು ॥

(ಭುಜಬಲಿ ಚರಿತೆ-ಕವಿಚರಿತೆ ೨)

[ಆಕಾಶವು ಹಳೆಯದು. ಅದು (ಆಕಾಶವು) ಭೂಮಿಗೆ ಇಳಿದು ಅದನ್ನು ನಾಶಪಡಿಸುವುದೆಂದು ಭೀತಿಯುಳ್ಳವನಾಗಿ ಬ್ರಹ್ಮನು ಬೆಳ್ಳಿಯ ಮೊಳೆಗಳನ್ನು ಮಾಡಿಸಿ ಭದ್ರಪಡಿಸಿದನೆಂಬಂತೆ ನಕ್ಷತ್ರ ಸಮೂಹವು ಥಳಥಳಿಸಿತು] ಇದರಡಿಯಲ್ಲಿ ಕೊಟ್ಟಿರುವ ರುದ್ರಭಟ್ಟನ ತಾರಕಾ ವರ್ಣನೆಯನ್ನು ಇದರೊಡನೆ ಹೋಲಿಸಿ ನೋಡತಕ್ಕುದು:--

ಇಳೆಗೆ ಪಳಗಾಲದಂಬರ ।
ಮೊಳಸೋರ್ಗುಂ ಬೀಳ್ಗುಮೆಂದು ಧಾತ್ರಂ ಬಲ್ಪಿಂ ॥
ದಳವಡೆ ಬೆಟ್ಟಿದ ಬೆಳ್ಳಿಯ ।
ಮೊಳೆಗಳೆನಲ್ ತೋರ್ಗಿ ಬೆಳಗಿದುವು ತಾರಗೆಗಳ್ ॥

(ಧಾತ್ರ=ಬ್ರಹ್ಮನು)

ವಾರ್ಧಿಕ ಷಟ್ಪದಿ

ಕಡಲ ಸಿಡಿವನಿಯೊ ಮೇಘಾವಳಿಯ ತತ್ತಿಗಳೊ ।
ಪೊಡವಿಯೆಡೆಯನು ನೋಳ್ಪ ಗಗನ ರಂಧ್ರವೊ ಅಲುಗ ।
ಗೊಡಪಂತೆ ಕೀಲಿಸಿದ ವಜ್ರದಮೊಳೆಯೊ ನಭದ ಲತೆ ಹಬ್ಬಿಯೊಗೆದ ನನೆಯೋ ॥
ಕಡು ಹಸಿದವೆಂದು ಸಸಿಯೆಲ್ಲಾ ಚಕೋರಕ್ಕೆ ।
ಕೊಡುವ ಸವಿದುತ್ತುಗಳೊ ಸಿಡಿದ ಸೀಮುರ್ತುತ್ತುಗಳೊ ।
ತಡೆಯದೆ ವಿಚಾರಿಸೆನೆ ತಾರಾಳಿ ಸೆಗೆದವಾ ಜಗದ ಜನವರಿವುತಿರಲು ॥

(ಆದಿಸೆಟ್ಟಿ ಪುರಾಣ-೨-೨೯)

[ಸಮುದ್ರದಿಂದ ಸಿಡಿದು (ಮೇಲ್ನೆಗೆದ) ಸೀರ್ಪನಿಗಳೊ, ಮೇಘ ಸಮೂಹವೆಂಬ ಪಕ್ಷಿಕುಲದ ತತ್ತಿಗಳೊ, ಭೂಲೋಕವನ್ನು ನೋಡುವ ಗಗನರಂಧ್ರಗಳೊ,

ಪರಿದಾಡದಂತೆ ಕೀಲಿಸಿದ ವಜ್ರದ ಮೊಳೆಗಳೊ, ಆಕಾಶವಲ್ಲರಿಯು ಹಬ್ಬ ಚೆಲ್ಲಿದ ಪುಷ್ಪಗಳೊ, ಚಕೋರಗಳು ಬಹಳ ಹಸಿದವೆಂದು ಚಂದ್ರನು ನೀಡಿದ ಸವಿದುತ್ತುಗಳೊ, ಸಿಡಿಯುವ ಸೀಮುರ್ಹುತ್ತುಗಳೊ ಎಂಬಂತೆ ತಾರಕೆಗಳು ಜಗಕ್ಕೆ ಕಾಣಿಸಿಕೊಂಡುವು]

ಅನಂತವಾದ ಆಕಾಶವನ್ನು ಆವರಿಸುವ ಮೇಘಗಳ ತತ್ತಿಗಳು ಅಸಂಖ್ಯವಾಗುವದು ಸ್ವಾಭಾವಿಕ. ಮೇಘಗಳು ತತ್ತಿಗಳನ್ನಿಟ್ಟು ಅಡಗಿಹೋಗಿವೆ. ಈ ತತ್ತಿಗಳಿಂದ ಹೊರಟ ಮರಿಗಳು (ಮೇಘಗಳು) ಆಕಾಶವನ್ನು ವ್ಯಾಪಿಸುವವು. ತತ್ತಿಗಳ ಕವಚಗಳನ್ನೊಡೆದು ಮರಿಗಳು ಹೊರಬೀಳುವವಷ್ಟೇ. ಮೇಘಗಳು ಹುಟ್ಟಲು ಸುರಿಯುವ ಮಳೆ ಹನಿಗಳೇ ಕವಚದ ತುಣುಕುಗಳು ಎಂಬ ಕಲ್ಪನೆಗೆ ಅವಕಾಶವಿದೆ. ಆಕಾಶದಮೇಲೆ ಮಹರ್ಲೋಕ, ಜನೋಲೋಕ, ತಪೋಲೋಕ, ಸತ್ಯಲೋಕ, ಇವುಗಳೇ ಮೊದಲಾದ ಲೋಕಗಳಿರುವವು. ಅಲ್ಲಿರುವ ದೇವತೆಗಳಿಗೆ ಭೂಲೋಕವನ್ನು ನೋಡುವ ಇಚ್ಛೆಯಾಗಲು ಅವರು ಗಗನದಲ್ಲಿ ಅನೇಕ ರಂಧ್ರಗಳನ್ನು ನಿರ್ಮಿಸಿದರು. ಮೇಲಣ ಲೋಕಗಳಲ್ಲಿ ಜ್ಯೋತಿರ್ಮಯವಾದುದರಿಂದ ರಂಧ್ರಗಳು ತೇಜದಿಂದ ತುಂಬಿ ರಂಜಿಸುವವು. ಆದುದರಿಂದಲೇ ನಮ್ಮ ಚರ್ಮ ಚಕ್ಷುಗಳಿಗೆ ಅವು ರಂಧ್ರಗಳೆಂದು ತೋರುವದಿಲ್ಲ.

॥ ಕಂದ. ॥

ಗಗನಂ ಮಿತ್ರ ವಿಯೋಗದಿ ।
ನೆಗೆವಂತಃಶೂನ್ಯ ಭಾವದಿಂದಳೆ ಮೆಯ್ಯೊಳ್ ॥
ಮಿಗೆ ಪನಿತ ಕಣ್ಬನಿಯಿದೆನೆ ।
ಸೊಗಯಿಸಿದುವು ತರದಿನೊಗೆದು ತಾರಗೆ ಪಲವುಂ ॥

(ಚಂದ್ರಪ್ರಭ ಪುರಾಣ—೮—೨೩)

[ಆಕಾಶವು ಮಿತ್ರನ ವಿಯೋಗದಿಂದ ಕಳವಳಗೊಂಡು ಶೂನ್ಯ ಭಾವದಿಂದ ಅಳಲು ಮೈಮೇಲೆ ಬಿದ್ದ ಕಂಬನಿಗಳೆಂಬಂತೆ ತಾರಗೆಗಳು ಕ್ರಮದಿಂದುದಯಿಸಿ ಸೊಗಯಿಸಿದುವು.

ಮಿತ್ರ=ಸೂರ್ಯ ಮತ್ತು ಗೆಳೆಯ ಎಂದೆರಡರ್ಥ

॥ ಚಂಪಕ ಮಾಲಾ ॥

ಇನನಪರಾಂಬು ರಾಶಿಯೊಳೆ ಬಿದ್ದಳಿಯುತ್ತಿರೆ ಕಂಡಗಲ್ಕೆಗಿ ।
ರ್ದಿನ ಸೆಕೆ ಪತ್ತೆ ತಾಳಲಳವಲ್ಲದೆ ವಾಸರ ಲಕ್ಷ್ಮಿ ಕಣ್ಣನೀ ॥
ರ್ವನಿಗಳನೈದೆ ಸೆಳ್ಳುಗುರ್ಗಳಿಂ ಮಿಡಿಯಲ್ಕಿಡಿದಲ್ಲಿ ತಳ್ತುವೆಂ ।
ಬೆನೆ ರಮಣೀಯಮಾದುವನುಕಾಶದೊಳೆಲ್ಲೆಡೆಯಲ್ಲಿ ತಾರೆಗಳ್ ॥

(ರಾಜಶೇಖರ ವಿಳಾಸ—೧೧—೪೧)

[ಸೂರ್ಯನು [ಪತಿಯು] ಪಶ್ಚಿಮ ಸಮುದ್ರದಲ್ಲಿ ಬಿದ್ದು ಸಾಯುತ್ತಿರಲು, ದಿವಸ ಲಕ್ಷ್ಮಿಗೆ ವಿರಹಾಗ್ನಿಯು ತಗಲಿ ಅದರ ಸಂತಾಪವು ತಾಳಲಾರದಾಯಿತು. ಅವಳ ಕಣ್ಣುಗಳಿಂದ ಅಶ್ರುಧಾರೆಯು ಪ್ರವಹಿಸಹತ್ತಿತು. ಅವಳು ಆ ಧಾರೆಯನ್ನೊರಿಸಿ ತನ್ನ ಬೆಳ್ಳುಗುರುಗಳಿಂದ ಚಿಮ್ಮಲು ಸಿಡಿದ ಅದರ ಹನಿಗಳು ಅಲ್ಲಿ ಅಂಟಿಕೊಂಡವೆಂಬಂತೆ ನಕ್ಷತ್ರಗಳು ಆಕಾಶದಲ್ಲಿ ರಮಣೀಯವಾದುವು.]

|| ಕಂದ. ||

ಪುದಿದಿರೆ ಪಣ್ತೆಂದುವ ಬಿಂ।
ಬದಾಲದಿಂ ಪಣ್ಗಳುದಿರ್ದುವೆನೆ ಸೊಗಯಿಸಿದ ||
ತ್ತುದಯದೊಳೊದವಿದಕೆಂಪಿಂ।
ಪುದಿದೊಪ್ಪುವ ತಾರಕೆ ಗೋತ್ಕರಂ ಕೆಲಗೆಲದೊಳ್ ||

(ಚಂದ್ರ ಪ್ರಭ ಪುರಾಣ ೮-೨೮)

ಚಂದ್ರ ಬಿಂಬದಲ್ಲಿದ್ದ ಫಲ ಭರಿತವಾದ ಆಲದ ಮರದಿಂದ ಹಣ್ಣುಗಳು ಉದುರಿದುವೇಬಂತೆ ನಕ್ಷತ್ರಗಳು ಉದಯ ಕಾಲದಲ್ಲಿ ಕೆಂಪಿನಿಂದ ಕೂಡಿ ಅಲ್ಲಲ್ಲಿ ಒಪ್ಪುತ್ತಲಿದ್ದುವು.] ಕವಿಯು ಚಂದ್ರನಲ್ಲಿಯ ಕಲಂಕವನ್ನು ಆಲದ ಮರಕ್ಕೆ ಹೋಲಿಸಿ ನಕ್ಷತ್ರಗಳನ್ನು ಅದರ ಹಣ್ಣುಗಳೆಂದು ಹೇಳಿದ್ದಾನೆ.

|| ವಾರ್ಧಿಕ ಷಟ್ಪದಿ ||

ಆಕಾಶವೆಂಬಾನೆಯುಮಮರಾವತಿಯೊಳಿರ್ದ।
ನೇಕಪಮನಂಡಲೆವುದೆಂದು ಮುನಿಸಂ ತಳೆಯು।
ತಾ ಕುಲಿಶಧರನದರ ಮಸ್ತಕಂ ಬೋಯ್ಕೆ ಕೆದರಿದ ಮುತ್ತುಗಳ ಪೊತ್ತವೊ ||
ಆಕಾಶ ಕೇಶ ಸಾಟ್ಯಮುಮನೆಸಗಲ್ಕೆ ಗಂ।
ಗಾ ಕಾಂತೆ ಶಿರದೊಳ್ ತುಳುಂಕೆ ಜಲಬಿಂದುಗಳ।
ನೇಕ ವಿಧದಿಂ ನೆಗೆದುವೆನೆ ತಾರಕಾಳಿ ಸೊಗಸಿರ್ದುದಾಗಸದೊಳಿಡಿದು ||

(ಶಂಕರ ಸಂಹಿತೆ—ಕವಿಚರಿತೆ ೨.)

[ಆಕಾಶವೆಂಬ ಆನೆಯು ಅಮರಾವತಿಯಲ್ಲಿದ್ದ ಐರಾವತವೆಂಬ (ತನ್ನ) ಆನೆಯನ್ನು ಪೀಡಿಸುವುದೆಂದು ಇಂದ್ರನು [ಕುಲಿಶಧರನು] ಕೋಪವುಳ್ಳವನಾಗಿ (ಅದರ ಮಸ್ತಕಕ್ಕೆ ವಜ್ರದಿಂದ) ಹೊಡೆಯಲು (ಅದರ ಗಂಡಸ್ಥಲದಿಂದ)

ಉದುರಿದ ಮುತ್ತುಗಳ ರಾಶಿಯೆಂಬಂತೆಯೂ, ಈಶ್ವರನು (ಆಕಾಶ ಕೇಶನು) ತಾಂಡವ ನರ್ತನವನೆಸಗಲು (ಅವನ) ಶಿರೋಭಾಗದಲ್ಲಿ ಗಂಗೆಯು ತುಳುಕಲು ಅನೇಕ ಪ್ರಕಾರವಾಗಿ ಸಿಡಿದ ಜಲಬಿಂದುಗಳೆಂಬಂತೆಯೂ ನಕ್ಷತ್ರಗಳು ಆಕಾಶದಲ್ಲಿ ರಮಣೀಯವಾಗಿ ಕಂಡವು.]

ಆನೆಯ ಗಂಡಸ್ಥಲದಲ್ಲಿ ಮುತ್ತುಗಳಿರುತ್ತವೆಂದು ಕವಿಗಳು ವರ್ಣಿಸುತ್ತಾರೆ:-

"ಗಿರಿ ಗಿರಿಯೊಳ್ ಮಾಣಿಕಮುಂ | ಕರಿಕರಿಯೊಳ್ ಮುತ್ತು ಚಂದನಂ ವನವನದೊಳ್ ॥ಧರೆಧರೆಯೊಳ್ ಕಸ್ತೂರಿಯುಂ......ಉಂಟೇ ?"

"ದ್ವಿಪೇಂದ್ರ ಜೀಮೂತ ವರಾಹ ಶಂಖ ಮತ್ಸ್ಯಾಹಿ ಶುಕ್ತ್ಯುದ್ಭವ ವೇಣುಜಾನಿ। ಮುಕ್ತಾಫಲಾನಿ ಪ್ರಥಿತಾನಿ ಲೋಕೇ ತೇಷಾಂ ತು ಶುಕ್ತ್ಯುದ್ಭವಮೇವ ಭೂರಿ" (ಅಗಸ್ತ್ಯ) [ಆನೆ, ಮೋಡ, ವರಾಹ, ಶಂಖ, ಮತ್ಸ್ಯ, ಅಹಿ, ಶುಕ್ತಿ, ಬಿದರು ಇವುಗಳಿಂದ ಮುತ್ತುಗಳು ಹುಟ್ಟುತ್ತವೆ. ಆದರೆ ಶುಕ್ತಿಯಿಂದಲೇ ಹೆಚ್ಚು.]

ಅಮರಾವತಿಯು ಇಂದ್ರನ ರಾಜಧಾನಿಯು. ಅನೇಕಪ=ಆನೆ (ನ ಏಕೇನ ಪಿಬತಿ=ಕರೇಣ ಆಸ್ಯೇನ ಪಿಬತಿ (ಒಂದರಿಂದಲೇ ನೀರು ಕುಡಿಯುವುದಿಲ್ಲ; ಸೊಂಡಿಲಿನಿಂದಲೂ ಮುಖದಿಂದಲೂ ನೀರು ಕುಡಿಯುತ್ತದೆಂದು 'ಅನೇಕಪ') ಕುಲಿಶಧರ=ವಜ್ರವನ್ನು ಧರಿಸಿದವನು, ಇಂದ್ರನಿಗೆ ವಜ್ರಿಯೆಂಬ ಹೆಸರು ಬಂದ ಕಾರಣವಾದರೂ ಇದೇ. ಆಕಾಶ—ಕೇಶ=ಈಶ್ವರ. (ಬ್ರಹ್ಮದೇವನು ವಾಮನನ ಪಾದವನ್ನು ಕಮಂಡಲ ನೀರಿನಿಂದ ಅರ್ಚಿಸಲು ಗಂಗೆಯು ಜನಿಸಿ ಸತ್ಯಲೋಕದಿಂದ ಕೆಳಗಣ ಲೋಕಗಳಲ್ಲಿ ಹರಿಯ ಹತ್ತಿದಳು ಅವಳ ಪ್ರವಾಹದಿಂದ ಲೋಕಗಳೆಲ್ಲ ವೈಕಲ್ಯವನ್ನು ಹೊಂದಿದುವು. ಸುರಾಸುರರು ಈಶ್ವರನನ್ನು ಪ್ರಾರ್ಥಿಸಲು ಅವನು ಆಕಾಶವಲ್ಲೆಲ್ಲ ತನ್ನ ಜಡೆಗಳನ್ನು ಪಸರಿಸಿ ಅವಳನ್ನು ಬಂಧಿಸಿ ಲೋಕ ಕಲ್ಯಾಣವನ್ನು ಮಾಡಿದನು. ಆಕಾಶದಲ್ಲೆಲ್ಲ ಜಡೆಗಳನ್ನು ಹರವಿದ್ದುದರಿಂದ ಈಶ್ವರನಿಗೆ ಆಕಾಶ ಕೇಶ, ವ್ಯೋಮ-ಕೇಶ ಎಂಬ ಹೆಸರುಗಳುಂಟಾದುವು)

॥ ವಾರ್ಧಿಕ ಷಟ್ಪದಿ ॥

ನಿಶಿಯೆಂಬ ಗಜಮಂ ವಿದಾರಿಸಲು ಹರಿ ಪೂರ್ವ।
ದಿಶೆಯುದ್ರಿ ಶಿಖರದಿಂ ನೆಗೆಯಲು ಸುಧಾ ಕಿರಣ।
ವಿಸರವೆಂದೆಂಬ ಕೇಸರ ಕೆದರಿ ಘರ್ಜಿಸುತ ಪೀಳಲ್ಕೆ ಗಗನತಳಕೆ॥
ಪಸರಿಸಿದ ಮೌಕ್ತಿಕವೊ ಯೆಂಬಂತೆ ನಕ್ಷತ್ರ|
ಮುಸಮುಸನೆ ತೋರುತಿರೆ ಮೂಡಿದಂ ಸಸಿ ನಾಲ್ಕು|
ದೆಸೆಯ ದಿಗುಭಿತ್ತಿಯಂ ಧವಳಿಸುತ ಕಣ್ಗೆ ಮಂಗಳವಾಗಲೊಪ್ಪಿತಂದು॥

(ಸೋಮನಾಥ ಚರಿತೆ ೨-೩೦)

[ಚಂದ್ರನೆಂಬ ಸಿಂಹವು ನಿಶಾಗಜವನ್ನು ಭೇದಿಸಲಿಕ್ಕೆ ಪೂರ್ವಾದ್ರಿ ಶಿಖರಕ್ಕೆ ನೆಗೆದು ಬಂದು, ಕಿರಣ ಸಮೂಹವೆಂಬ ಆಯಾಲವನ್ನು ಪಸರಿಸಿ, ಗರ್ಜನೆಯನ್ನು ಮಾಡಿ ಸೀಳಲು, ಅದರಿಂದ ಆಕಾಶದಲ್ಲಿ ವಿಸ್ತಾರವಾಗಿ ಉದುರಿದ ಮುತ್ತುಗಳ ಸಮೂಹವೆಂಬಂತೆ ನಕ್ಷತ್ರಗಳು ಥಳಥಳಿಸುತ್ತಿರಲು, ಚಂದ್ರನು ಎಲ್ಲ ದಿಕ್ಕುಗಳನ್ನು ಧವಳ ಕಾಂತಿಯಿಂದ ಬೆಳಗುತ್ತ ಕಣ್ಣಿಗೆ ಮಂಗಳಾಕರನಾಗಿ ಮೂಡಿದನು.] ಹರಿಯೆಂದರೆ ಸಿಂಹ ಮತ್ತು ಚಂದ್ರ ಎಂದರ್ಥ.

॥ ಕಂದ ॥

ಅಪ್ಪುವಿನೊಯ್ಲಿನೊಡೆದು ತೊ।
ಳಪ್ಪುರು ಮೌಕ್ತಾಳಿ ಸೂಸಲದರೆಡೆಯೊಳ್ ಶೋ ॥
ಭಿಪ್ಪೆಳ ಮುತ್ತಿನ ಸಿಪ್ಪೆನ।
ಲೊಪ್ಪಿದುದುಡುರಾಜಿ ಮಧ್ಯದೊಳ್ ಶಶಿ ಬಿಂಬಂ ॥

(ಶೃಂಗಾರಸಾರ-೧೦-೩೩.)

[ನೀರಿನ ಹೊಡೆತದಿಂದ (ಸಿಪ್ಪು)ಒಡೆದು (ಅದರಿಂದ) ಥಳಥಳಿಸುವ ಮುತ್ತುಗಳು ಹೊರಸೂಸಲು ಅವುಗಳ ಸಮೀಪದಲ್ಲಿಯೇ ಅಂದವಾಗಿ ಕಾಣುವ ಎಳೆ ಮುತ್ತಿನ ಸಿಂಪೆಂಬಂತೆ ಚಂದ್ರ ಬಿಂಬವು ನಕ್ಷತ್ರ ಮಧ್ಯದಲ್ಲಿ ಒಪ್ಪಿದುದು.]

॥ ಶಾರ್ದೂಲ ವಿಕ್ರೀಡಿತ ॥

ಚಂಚಚ್ಛಾರದ ನೀರದಂ ನೊರೆ ಲಸತ್ತಾರಾಗಣಂ ಪಿಪ್ರುಷಂ।
ಪ್ರಾಂಚಚ್ಚಂದ್ರಿಕೆ ಶಂಬರಂ ಗ್ರಹಗಣಂ ಯಾದಂ ಸಮಂತಾಗಲು ॥
ದುಂಕಂಬಿತ್ತು ನಭಃಪಯೋನಿಧಿಯೊಳುದ್ಯತ್ಕಾಲ ಸಾಂಯಾತ್ರಿಕಂ।
ತಾಂ ಚೆಲ್ವಿಂ ನಡೆಯಿಪ್ಪ ಚೈತ್ರಮೆನೆ ಬಿಂಬಂ ರಂಜಿಕುಂ ಚಂದ್ರನಾ ॥

(ಉದ್ಭಟಕಾವ್ಯ-೧೦-೬೭.)

[ಎಸೆಯುವ ಶರತ್ಕಾಲದ ಮೋಡಗಳೇ ನೊರೆ, ಉಜ್ಜ್ವಲವಾದ ನಕ್ಷತ್ರಗಳೇ ಜಲಬಿಂದುಗಳು, ಶುಭ್ರ ಚಂದ್ರಿಕೆಯೇ ನಿರ್ಮಲ ಜಲವು, ಗ್ರಹಗಳೇ ಜಲಜಂತುಗಳು ಆಗಿರಲಾಗಿ ಕಾಲನೆಂಬ ಕರ್ಣಧಾರನು ಪೆಂಪಿನಿಂದ ಆಕಾಶವೆಂಬ ಸಮುದ್ರದಲ್ಲಿ ಲೀಲೆಯಿಂದ ನಡೆಯಿಸುವ ಹಡಗವೆಂಬಂತೆ ಚಂದ್ರಬಿಂಬವು ರಂಜಿಸಿತು.]

ಶರತ್ಕಾಲದ ಮೇಘಗಳು ಬಿಳ್ಳಗಿರುತ್ತವೆ. ಚೈತ್ರವೆಂಬುದು ಬಹಿತ್ರವೆಂಬುದರ ತದ್ಭವವು. ಸಾಂಯಾತ್ರಿಕನೆಂದರೆ ದ್ವೀಪಾಂತರಗಳಿಗೆ ಹೋಗಿ ವ್ಯಾಪಾರ ಮಾಡುವವನು.

॥ ಭಾಮಿನೀ ಷಟ್ಪದಿ ॥

ಸೆಲೆದಿಗಂಗನೆಯಿಟ್ಟ ಚಂದನ ।
ತಿಲಕವೋ ಮನುಮಥನ ರಾಣಿಯ ।
ಚೆಲುವಗೈಗನ್ನಡಿಯೊ ಮದನನ ಬಿರುದಿನೊಡ್ಡಣವೋ ॥
ತಳಿತ ವಿರಹಿಯ ಸುಡುವ ಕೆಂಡದ ।
ಹೊಳಹೊ ಬೆಸಗೊಳಲೇನು ರಜನೀ ।
ವಳಯದಲಿ ಶಶಿಯುದಯವಾದನು ಜಗವನುಜ್ಜ್ವಳಿಸಿ ॥

ಮಹಾಭಾರತ-ವಿರಾಟ ಪರ್ವ-ಸಂಧಿ ೨—ಪದ್ಯ ೫೨.

[ದಿಗ್ವಧುವು ಒಪ್ಪಾಗಿ ಇಟ್ಟ ಚಂದನ ತಿಲಕವೋ, ರತಿದೇವಿಯ ವಿಲಾಸ ದರ್ಪಣವೋ ಮನ್ಮಥ ರಾಜನ ಬಿರುದಿನ ಸಮೂಹವೋ, ವಿರಹಿಯನ್ನು ಸುಡುವ ಅಗ್ನಿಯ ಜ್ವಾಲೆಯೋ ಎಂಬಂತೆ ಚಂದ್ರನು ಜಗತ್ತನ್ನು ಬೆಳಗುತ್ತ ರಾತ್ರಿಯಲ್ಲಿ ಉದಯವಾದನು.] ಚಂದ್ರನನ್ನು ಅನೇಕ ವಸ್ತುಗಳಿಗ ಹೋಲಿಸಿ ವರ್ಣಿಸುವುದು ಕೆಳಗಣ ಪದ್ಯದಿಂದ ಸ್ಪಷ್ಟವಾಗುತ್ತದೆಃ—

ಇದು ಪೂರ್ವ ದಿಗ್ವಧೂ ಸಿಂದೂರ ತಿಲಕವೋ ।
ಇದು ಸುರಪನೋಲಗದೊಳುಪ್ಪರಿಗೆ ಗಳಸವೋ ।
ಇದುವೆ ಐರಾವತದ ಕೊರಳ ಹೊಂಘಂಟೆಯೋ ಅಮರಪುರದಾಲವಟವೋ ॥
ಇದು ವಿರಹಿಗಳ ಹೃದಯದುರಿಯ ವುಕ್ಕಿನ ಗುಂಡೊ ॥
ಇದು ರತಿಯಲಂಕಾರವಿಪ್ಪ ಬೆಳ್ಗರಡಿಗೆಯೊ ।
ಇದು ಜಾರ ಚೋರರೆಡೆಯಾಟ ಬೇಡೆಂದು ಯಮ ಹೊಡೆವ ಡಂಗುರವೆನಿಸಿತೂ॥

(ಆದಿಸೆಟ್ಟಿ ಪುರಾಣ –೨-೩೩)

॥ ಉತ್ಪಲ ಮಾಲಾ ॥

ದಾಂಗುಡಿವಿಟ್ಟು ದಳ್ಳಿಸುವ ಕೆಂದಳದಿಂದೊಸೆದೆತ್ತಿ ಲಕ್ಷ್ಮಿ ಕಾ ।
ಮಂಗೆ ಮಗಂಗೆ ಶೈಶವನಿರೀಕ್ಷಣ ಕೇಳಿಗೆ ನೇತ್ರಸೂತ್ರದಿಂ ॥
ದಿಂಗಡಲೆಂಬ ಸೆಜ್ಜೆವನೆಯೊಳ್ ತೆರೆದೊಟ್ಟಿಲ ಮೇಲೆ ಕೆಂಬರ ।
ಲ್ದಿಂಗಣಿಗಟ್ಟಿದಂತುದಯಶೈಲಶಿಖಂಡದೊಳಿಂದು ಮಂಡಳಂ ॥

(ಮಲ್ಲಿನಾಥ ಪುರಾಣ ೭-೨೯)

[ಕಾಂತಿಯ ಕುಡಿಯನ್ನು ದೂರದ ವರೆಗೆ ಪಸರಿಸಿ ಪ್ರಜ್ವಲಿಸುವ ಅರುಣ ವಾದ ಕರತಳದಿಂದ ಲಕ್ಷ್ಮಿಯು ಪ್ರೇಮನಿರ್ಭರಳಾಗಿ ಎತ್ತಿ ತನ್ನ ಮಗನಾದ ಕಾಮನಿಗೆ ಬಾಲ್ಯ ಸುಲಭವಾದ ನಿರೀಕ್ಷಣ ವಿಲಾಸದ ಸಲುವಾಗಿ ನೇತ್ರಸೂತ್ರದಿಂದ ಕ್ಷೀರಸಾಗರವೆಂಬ ಶಯ್ಯಾಗೃಹದಲ್ಲಿ ತೆರೆ (ತರಂಗ) ಯೆಂಬ ತೊಟ್ಟಿಲ ಮೇಲೆ ರತ್ನದ ಹರಳಿನ ಚೆಂಡನ್ನು ಕಟ್ಟಿದಳೋ ಎಂಬಂತೆ ಉದಯಗಿರಿ ಶಿಖರದ ಮೇಲೆ ಚಂದ್ರ ಮಂಡಲವು ಶೋಭಿಸಿತು.]

ಚಂದ್ರನ ಉದಯಾಸ್ತಮಯಗಳನ್ನು ನಾವು ಅನುಭವಿಸದೆ ಇಲ್ಲ. ಕವಿಗಳು ನಿರೂಪಿಸುವ ಅನುಭವವು ಮಾತ್ರ ಬಹಳ ಆಹ್ಲಾದಕರವಿರುತ್ತದೆ. ಕೂಸುಗಳನ್ನು ತೊಟ್ಟಿಲದಲ್ಲಿ ಮಲಗಿಸಿ, ಅದು ನೋಡಿ ಕೌತುಕದಿಂದ ಆಡಲೆಂದು ತೊಟ್ಟಿಲ ಮೇಲೆ ಮುತ್ತಿನ ಗುಬ್ಬಿಗಳನ್ನೂ ಕೆಂಪುಹರಳಿನ ಚಂಡನ್ನೂ ಕಟ್ಟುವದು ಸರ್ವರಿಗೂ ಗೊತ್ತಿದ್ದ ಮಾತು. ನಿತ್ಯದಲ್ಲಿ ನೋಡುತ್ತಿದ್ದರೂ ಇಂಥ ಆಹ್ಲಾದಕರವಾದ ಅನುಭವವು ನಮ್ಮಲ್ಲಿ ಎಂದೂ ಹುಟ್ಟಲಿಲ್ಲ. ಚಂದ್ರನು ತೊಟ್ಟಲಮೇಲೆ ಕಟ್ಟಿದ ಕೆಂಪು ಹರಳಿನ ಚಂಡು (ತಿಂಗಣಿ) ಎಂಬ ಭಾವವು ಸಾಮಾನ್ಯರಾದ ನಮ್ಮ ಕಣ್ಣಿಗೆ ಗೋಚರಿಸುವದಿಲ್ಲ. ಕವಿಗಳ ಒಳ ದೃಷ್ಟಿಗೆ ಅದು ಗೋಚರಿಸುತ್ತದೆ. ಸಾಮಾನ್ಯವಾದ ಲೌಕಿಕ ದೃಷ್ಟಾಂತದಿಂದ ತಮ್ಮ ಭಾವವನ್ನು ಸ್ಪಷ್ಟ ಪಡಿಸುವದು ಕವಿಸಾಮರ್ಥ್ಯಕ್ಕೆ ನಿದರ್ಶಕವಲ್ಲವೇ? (ಮೂಡುವಾಗ ಚಂದ್ರ ಬಿಂಬವು ಕೆಂಪು ಇರುತ್ತದೆ.)

* ॥ ಮತ್ತೇಭ ವಿಕ್ರೀಡಿತ ॥

ಸ್ಫುರದುಡ್ಡೀನ ಮರೀಚಿ ರಾಜಿ ವಿಲಸತ್ ಸೂತ್ರಂಗಳಂದಾಗೆ ಬಂ।
ಧುರದಂಡಂ ನಭಮಾಗೆ ಕಾಲಮೆನಿಪು ದ್ಯತ್ಕಾಸ ಪಾತ್ರಂಗಳೊಳ್॥
ಸರಸೀಜೋದ್ಭವ ನಿಂದುವಂ ತರಣಿಯಂ ತೂಗಲ್ಕಿನಂ ಭಾರದಿಂ।
ಧರೆಗಿಳ್ಪಂತಿಳಿಪಂ ಹಿಮಾಂಶು ಚಿಗಿಯಲ್ ಬೆಳ್ಪಾದನಾ ನೋಪಿನಿಂ ॥

(ಶೃಂಗಾರ ಸಾರ-ಆ. ೧೦-ಪ. ೨೦)

[ನೆಗೆದು ಬರುತ್ತಲಿದ್ದ ಕಿರಣಗಳ ಸಮೂಹವೇ (ತಕ್ಕಡೆಯ) ದಾರಗಳಾಗಿಯೂ, ಆಕಾಶವೇ ಗಟ್ಟಿ ಮುಟ್ಟಾದ ದಂಡಿಗೆಯಾಗಿಯೂ (ಇರಲು) ಸೃಷ್ಟಿಕರ್ತನು ಸೂರ್ಯ ಚಂದ್ರರನ್ನು (ಎರಡು) ಕಾಲ (ಹೊತ್ತು) ಗಳೆಂಬ ಶೋಭಿಸುವ ಪರಡಿಗಳೊಂದೊಂದರಲ್ಲಿರಿಸಿ ತೂಗಲು, ಸೂರ್ಯನು ಬಲು ಭಾರದಿಂದ (ಪಶ್ಚಿಮ ದಿಕ್ಕಿಗಿರುವ) ಭೂಭಾಗಕ್ಕಿಳಿಯಲು, ಚಂದ್ರನು (ಹಗುರಾಗಿ)

ನೋಲಕ್ಕೆ ಜಿಗಿದನು. ಆಗ "ಸೂರ್ಯನಿಗಿಂತಲೂ ತಾನು ಕೀಳಾದೆನಲ್ಲ;" ಎಂಬ ಚಿಂತೆಗೊಳಗಾದುದರಿಂದಲೋ ಏನೋ ಎಂದೆನ್ನುವಂತೆ ಚಂದ್ರನ ಮುಖವು ಬೆಳ್ಳಗಾಗಿ ಹೋಯಿತು.] ಚಿಂತೆಯಿಂದ ಕೊರಗುವವರ ಮುಖಕಾಂತಿಯು ನಿಸ್ತೇಜವಾಗಿ ಬೆಳ್ಳಗಾಗುವುದು ಸರ್ವಜನ ವಿದಿತವು. ಜನರಲ್ಲಿ ಅಪಮಾನ ವಾದರೂ ಮೋರೆಯು ಕಳೆಗುಂದುತ್ತದೆ.

*** ॥ ಉತ್ಪಲ ಮಾಲಾ ॥**

ಸೂಸಿದ ಸೇಸೆಯಕ್ಕಿಗಳವೋಲಿರೆ ಮೂಡಿದ ತಾರಕಾಳಿಯು।
ಲ್ಲಾಸಿಪ ನೈದಿಲೊಳ್ಮೊರೆವಳಿಧ್ವನಿ ಮಂಗಳ ವಾದ್ಯವಾಗೆ ತೇ॥
ರೈಸಿದ ಸಂಜೆಯೋಸರಿಸೆ ಕಾನಕ ಕಾಂಡಪಟಂಬೊಲಾಗಳು।
ದ್ಭಾಸಿತರಾಗನಿಂದು ಪಸೆನಿಂದನುದಂಚಿತ ರಾತ್ರಿ ಕನ್ಯೆಯೊಳ್॥

(ಕೀರ್ತಿಶೇಷರಾದ ಬಸವಪ್ಪ ಶಾಸ್ತ್ರಿಗಳು.)

" ದಮಯಂತೀ ಸ್ವಯಂವರ–೮.೩-ಪ. "

[ಉದಿಸಿದ ನಕ್ಷತ್ರಗಳ ಸಾಲು ಎರೆದ ಸೇಸೆಯ ಅಕ್ಕಿಯು ಕಾಳುಗಳಂತೆಯೂ, ಶೋಭಿಸುವ ನೈದಿಲೆಗಳಲ್ಲಿ ಧ್ವನಿಗೆಯ್ವ ತುಂಬಿಗಳ ಝೇಂಕಾರವು ಮಂಗಳ ವಾದ್ಯ ಸ್ವನದಂತೆಯೂ, ಸರಿದು ಹೋಗುತ್ತಲಿರುವ ಸಾಂದ್ರ ಸಂಧ್ಯಾರಾಗವು (ಮಧ್ಯದಲ್ಲಿ ಹಿಡಿದಿರುವ) ಬಂಗಾರದ ಅಂತಃಪಟವನ್ನು ಜಗ್ಗಿದಂತೆಯೂ ಶೋಭಿಸುತ್ತಿರಲು, ರುಚಿರ ಕಾಂತಿಯಿಂದ ಕೂಡಿದ ಚಂದ್ರನು ಅಲಂಕರಿಸಲ್ಪಟ್ಟ ರಾತ್ರಿಯೆಂಬ ವಧುವಿನೊಡನೆ ಮದಿವೆಯ ಜಗುಲಿಯ ಮೇಲೆ ನಿಂತನು.] ಮಂಗಳ ಕಾರ್ಯಗಳಲ್ಲಿ ಅಕ್ಕಿಯ ಸೇಸೆಯನ್ನೆರೆಯುವ ಪದ್ಧತಿಯು ನಮ್ಮಲ್ಲಿ ಬಹುಕಾಲದಿಂದ ರೂಢವಾಗಿದೆ. (" ಅಸಿತರೊಳ್ ಕುವಲಿಯೆಂಬವಳೊರ್ವಳಾ ಸುಧನ್ವನ ಸಹೋದರಿ ತಂದಳಾರತಿಯ ನನುಜಕೇಳ್ ... ... ವನಜಾಕ್ಷನಂ ಮೆಚ್ಚಿಸಾಹವದೊಳೆಂದು...ಕಳುಹಿದಳ್ ಸೇಸೆವಳೆದು. " ಜೈಮಿನಿ ಭಾರತ. ಸಂಧಿ-೧೧. ಪದ್ಯ-೬.) ಮುಗಿಲಲ್ಲಿ ಮೂಡಿದ ಚುಕ್ಕೆಗಳೇ ಅಕ್ಕಿಯಾದುವು.

ಚಂದ್ರೋದಯಕ್ಕೆ ಮೊದಲು ಮೂಡಣ ದಿಕ್ಕಿನಲ್ಲಿ ಕೆಂಬೆಳಗು ಪಸರಿಸಿರುತ್ತದಷ್ಟೇ. ಕವಿಯು ಆ ಕೆಂಬಳಗನ್ನೇ ವಧೂವರರಾದ ನಿಶಾ-ಶಶಿಗಳ ಮಧ್ಯದಲ್ಲಿ ಹಿಡಿದ ಕನಕ ಕಾಂಡಪಟವೆಂದೂ, ಆ ಕಾಂಡಪಟವು ಒಂದು

ಕಡೆಗೆ ಸರಿಸಲ್ಪಟ್ಟಿತೋ ಏನೋ ಎಂದೆನ್ನುವಂತೆ ಮಾಯೆಪೋಗ ಹತ್ತಲ್ ಚಂದ್ರನೆಂಬ ವರನು ತೋರಿದೋರಿದನೆಂಡೂ ವರ್ಣಿಸಿರುವುದು ಅತ್ಯಂತ ಸಮಂಜಸವಾಗಿದೆ. ಏಕೆಂದರೆ, ಮಧ್ಯದಲ್ಲಿರುವ ಕಾಂಡಪಟವು ತೊಲಗಿದೊಡನೆ ದಂಪತಿಗಳಿರ್ವರೂ ಸಾತಿಶಯ ಪ್ರೇಮದಿಂದ ಒಬ್ಬರನ್ನೊಬ್ಬರು ನೋಡುತ್ತಾರೆ. ["ತೊಲಗೆ ದುಕೂಲ ಕಾಂಡಪಟ ಮುತ್ತುಮ ಲಗ್ನದೊಳೊರ್ವ ರೊರ್ವರಂ ನಲಿದೊಲವಿಂದೆ ದಂಪತಿಗಳೀಕ್ಷಿಸಿದರ್"-ಜಗನ್ನಾಥ ವಿಜಯ ಆಶ್ವಾಸ ೧೦. ಪದ್ಯ-೧೩೦] ಇಲ್ಲಿ ಚಂದ್ರ-ರಜನಿಯರೇ ದಂಪತಿಗಳಿದ್ದಾರೆ. ಇವರಿಬ್ಬರು ಸಾತಿಶಯ ಪ್ರೇಮದಿಂದ ಒಬ್ಬರನ್ನೊಬ್ಬರು ನೋಡಿದರಾದುದರಿಂದಲೇ ಅವರ ಈ ಪ್ರೇಮಮಯ ದೃಷ್ಟಿ ಸಮ್ಮೇಲನವಾದ ಚಂದ್ರಿಕೆಯು (ಬೆಳ್ದಿಂಗಳು) ಜಗತ್ತಿಗೆಲ್ಲ ಆಹ್ಲಾದವನ್ನುಂಟು ಮಾಡುತ್ತದೆ. ಹೀಗಿಲ್ಲದಿದ್ದರೆ ಆ ಬೆಳ್ದಿಂಗಳಿಗೆ ಇಷ್ಟೊಂದು ಮಹತ್ವವೆಲ್ಲಿಂದ ಬಂದೀತು.

॥ ಚಂಪಕ ಮಾಲಾ ॥

ಸ್ಮಿತ ಮುಖದೊಳ್ ಮಹೋನ್ನತಿಯನಾಂತುದಯಾಚಲ ಶೃಂಗವೆಂಬ ಮಾ।
ರುತಿ ಕುಡೆ ತಳ್ತ ಮೆಯ್ಬೆಮರ ಬಿಂದುಗಳಂದದೆ ಸಂದ ತಾರಕಾ॥
ತತಿ ಪೊಗರೇರೆ ಸಾಂಧ್ಯ ರುಚಿ ವಲ್ಕಲ ಭಾಸುರನಭ್ರ ಜಾನಕೀ।
ಪತಿ ತಳೆದಿರ್ಪ ಬೈತಲೆಯ ನುಣ್ಮಣಿಯಂತೆಸೆದತ್ತು ಚಂದ್ರಮಂ॥

(ಚಿಕದೇವರಾಜ ವಿಜಯ-೬-೧೯.)

[ನಗೆಮೊಗದಲ್ಲಿ (ಅಭಿಮಾನ ಪೂರ್ವಕವಾದ) ಪೆಂಪನ್ನು ತಳೆ ಪೂರ್ವಾಚಲ ಶಿಖರವೆಂಬ ಮಾರುತಿಯು ಕೊಡಲು, (ಹರ್ಷದಿಂದ) ಉಂಟಾದ ಮೈಬೆಮರ ಹನಿಗಳಂತೆ ಶೋಭಿಸುವ ನಕ್ಷತ್ರಗಳ ಸಮೂಹವು ಹೆಚ್ಚಾಗಿ ಕಾಂತಿಯನ್ನು ಹೊಂದಲು, ಸಂಧ್ಯಾರಾಗವೆಂಬ (ಸಂಜೆಗೆಂಪೆಂಬ) ವಸ್ತ್ರದಿಂದ ಅಲಂಕೃತನಾದ ಆಕಾಶವೆಂಬ ರಾಮಚಂದ್ರನು ಧರಿಸಿದ ಸೀಮಂತರತ್ನ (ಚೂಡಾರತ್ನ)ದಂತೆ ಚಂದ್ರಮನು ಶೋಭಿಸಿದನು.]

ಹನುಮಂತನು ಅಪಾರವಾದ ಸಮುದ್ರವನ್ನು ದಾಂಟಿ ರಾಕ್ಷಸರಿಂತ ಪರಿವೃತಳಾದ ಸೀತೆಯನ್ನು ಅಶೋಕವನದಲ್ಲಿ ಕಂಡು, ಅವಳಿಗೆ ರಾಮ ಮುದ್ರಿಕೆಯನ್ನು ಕೊಟ್ಟು, ಅವಳಿಂದ ಚೂಡಾರತ್ನವನ್ನು ತಂದು ಶ್ರೀರಾಮನಿಗೊಪ್ಪಿಸಿದನು. ಮಾರುತಿಯ ಮುಖವು ಪ್ರಫುಲ್ಲವಾಗಿ ಉತ್ಕರ್ಷವನ್ನು ತಳೆಯುವದರಲ್ಲೇನಾಶ್ಚರ್ಯವು!

ಈ ವಿಷಯವನ್ನು ಕುರಿತು ಕೆಳಗಣ ಪದ್ಯಗಳನ್ನು ನೋಡತಕ್ಕುದು. ಅಂಜನಾ ಸುತಂ ಬರುತ್ತುಮಿರೆ——

ಚಂ ॥ "ವದನ ವಿಕಾಸದಿಂ ಬರವಿನೇಳ್ತರದಿಂದಮೆ ಕಾರ್ಯ ಸಿದ್ಧಿಯಾ।
ದುದನರಿದಂಜನಾಸುತ ನಿರೀಕ್ಷಣದಿಂ ರಘುಜಂಗೆ ಹರ್ಷಮಾ॥
ದುದು "

ಶಾ॥ ಆರತ್ನಕ್ಕಿದಿವರ್ಷಪೊಲ್ ನೃಪತಿಗಾನಂದಾಶ್ರುಗಳ್ ಬಂದುವಾ।
ಸ್ತ್ರೀ ರತ್ನಂಪಡೆದಪ್ಪಿದಂತೆ ಪುಲಕಂ ಚೂಡಾಮಣಿ ಸ್ಪರ್ಶದಿಂ॥
ಧೀರೋದಾತ್ತನ ಮೆಯ್ಯೊಳುಣ್ಮಿದುವು ಸೀತಾ ಸುದ್ದಿಯಂ ಕೇಳ್ವಚೀ।
ತೋರಾಗಂ ರಘು ನಂದನ ಶ್ರುತಿಗೆ ತಂದತ್ತಾಗಳೌತ್ಸುಕ್ಯಮಂ॥

——ಪಂಪ ರಾಮಾಯಣ.

ಚಂದ್ರನ ಪ್ರಕಾಶವು ಉದಯಾಚಲವನ್ನೆಲ್ಲ ವ್ಯಾಪಿಸಿದ್ದಿತು. ಅದೇ ಮಾರುತಿಯ ಮುಖದಲ್ಲಿಯು ನಗೆಯಾಯಿತು. "ಹಸಿತ ಯಶಃ ಪ್ರಭೃತಿಯೊಳು| ಲ್ಲಸಿತಂ ಸಿತಭಾವಂ" (ಕಾವ್ಯಾವಲೋಕನ ಸೂತ್ರ—೨೧೧) ಚೂಡಾರತ್ನವನ್ನು ಸ್ವೀಕರಿಸಿದೊಡನೆ ಮ್ಲಾನವಾದ ಜೀವಕುಸುಮಕ್ಕೆ ವಿಕಾಸವನ್ನುಂಟುಮಾಡುವ ಸಕಲೇಂದ್ರಿಯ ಮೋಹನವಾದ ಸೀತಾಸ್ಪರ್ಶವು ರಾಮನ ಸ್ಮರಣೆಗೆ ಬಂದಿತು. ಅದರಿಂದ ಹರ್ಷ ರೋಮಾಂಚಗಳುತ್ಪನ್ನವಾಗಿ ಮೈಮೇಲೆಲ್ಲ ಬೆವರು ಹನಿಗಳು ಮೂಡಿದುವು. ಇದನ್ನೇ ನೆನೆದು ಕವಿಯು ಆಕಾಶವೆಂಬ ಜಾನಕೀ ಪತಿಗೆ ನಕ್ಷತ್ರಗಳೇ ಬೆವರು ಹನಿಗಳಾದವೆಂದು ಹೇಳಿದ್ದಾನೆ.

॥ ಚಂಪಕ ಮಾಲಾ ॥

ಕುಮುದಿನಿ ಕಾಣದೀ ತೆರಪಿನೊಳ್ನೆರೆವೆಂ ಪದೆಪಿಂದಮೆಂದು ಚಂ।
ದ್ರಮನನುರಾಗದಿಂ ಸುರ ದಿಶಾಂಗನೆಯಂ ಪಿಡಿದಾದಮಪ್ಪಲಾ॥
ಪ್ರಮದೆಯ ಪೀವರಸ್ತನದ ಕುಂಕುಮ ಪಂಕಮೆ ಪತ್ತಿದತ್ತು ಗಾ।
ತ್ರಮನೆನೆ ಕೆಂಪಿನಿಂ ಪುದಿದು ಪೊಣ್ಮಿದುದಿಂತಮೃತಾಂಶು ಮಂಡಲಂ॥

(ಶಾಂತೀಶ್ವರ ಪುರಾಣ-೧೧-೩೩.)

["ಕುಮುದಿನಿಯು ನೋಡದಂತೆ ಈ ತೆರದಿಂದ ವಿಲಾಸವಲ್ಲಿ ರತಿ ಸುಖವನ್ನು ಉಪಭೋಗಿಸುವೆನು" ಎಂದು ಚಂದ್ರನು ಅನುರಾಗವುಳ್ಳನನಾಗಿ ಪೂರ್ವದಿಕ್ಕೆಂಬ ಸ್ತ್ರೀಯನ್ನು ಹಿಡಿದು ಅಪ್ಪಿಕೊಳ್ಳಲು, ಅವಳ ಘನಕುಚದ ಕುಂಕುಮದ ಕರ್ದಮವೇ ಅವನ ಶರೀರವನ್ನೆಲ್ಲ ಆವರಿಸಿತೆಂಬಂತೆ ಕೆಂಪಿನಿಂದ ಕೂಡಿದುದಾಗಿ ಚಂದ್ರ ಮಂಡಲವು ಉದಯಿಸಿತು.] ಪ್ರಮದೆಯರು ಕುಚಕ್ಕೆ ಕುಂಕುಮವನ್ನು ಬಳಿಯುವುದುಂಟು ಕುಮುದಿನಿಯು ತನ್ನ ಹೆಂಡತಿಯಾದುದರಿಂದ, ಅವಳು ಮತ್ಸರಕ್ಕೀಡಾಗಬಾರದೆಂದು ಚಂದ್ರನು ಈ ತೆರನಾಗಿ ಮಾಡಿದನು.

॥ ಚಂಪಕಮಾಲಾ ॥

ಮಿಸೆದುದು ಸಂಜೆಗೆಂಪೆನಿಪ ಕಾವನ ಚೊಳಿಯ ದೂಳ ದಾಳಿಗಂ ।
ಮುಸುಕುವ ಮರ್ಬೆನಿಪ್ಪಿಡುವ ಬಾಣ ತುಪಾಕದ ಧೂಮದುರ್ಬುಗಂ ॥
ಮಿಸುಪರಿಲೆಂಬರಲ್ಗಣೆಗಮಳ್ಕದ ಕಲ್ಮೆರ್ದೆ ವೆಣ್ಗಳೊಡ್ಡನಾ ।
ದಿಸೆಯುರಿಗೊಂಡು ಪೊಣ್ಮುವ ಪಿರಂಗಿಯ ಗುಂಡೆನೆ ಚಂದ್ರ ಮಂಡಲಂ॥

(ಚಿಕದೇವ ರಾಜ ವಿಜಯ-೬-೧೭)

[ಸಂಧ್ಯಾರಾಗವೆಂಬ ಕಾಮನ ಸೇನಾಗ್ರದ ಧೂಳಿಯ ಮುತ್ತುವಿಕೆಗೂ, ಮುಸುಕುವ ಕತ್ತಲೆಯೆಂಬ ಬಾಣ ತುಪಾಕದ ಹೊಗೆಯ ರಾಶಿಗೂ, ಹೊಳೆಯುವ ನಕ್ಷತ್ರಗಳೆಂಬ ಪುಷ್ಪ ಬಾಣಗಳಿಗೂ ಅಂಜದೆ ಇದ್ದ ಧೈರ್ಯವುಳ್ಳ (ವಿಕಾರ ವಶರಾಗದ) ಸ್ತ್ರೀಯರ ಸಮೂಹವನ್ನು ಭಯಪಡಿಸಲು ಜ್ವಾಲೆಗಳಿಂದ ಕೂಡಿಕೊಂಡು ಹೊರಡುವ ಪಿರಂಗಿಯ (ತೋಫಿನ) ಗುಂಡಿನಂತೆ ಚಂದ್ರಬಿಂಬವು ಶೋಭಿಸಿತು.]

ಚಂದ್ರ, ಚಂದನ, ಮಂದಾನಿಲ, ಕುಂದ, ಮಂದಾರ, ಮಾಕಂದಪಲ್ಲವ, ಮಲ್ಲಿಕಾ, ಉತ್ಫುಲ್ಲ ಕಮಲ, ಜಲಧಿಕಲ್ಲೋಲ, ಚಕ್ರವಾಕ, ರಕ್ತಕಮಲ, ಕೋಕಿಲ ಮೊದಲಾದುವುಗಳು ಮನ್ಮಥನ ಸೇನೆಯಲ್ಲಿಯ ಅಗ್ರವೀರರು. ಚಂದ್ರನಿಂದ ವಿರಹಾಗ್ನಿಯು ಪ್ರಜ್ವಲಿತವಾಗುತ್ತವೆ; ಅವನು ಅನಂಗ ಸಂಜೀವನನು.

सौमित्रे ननु सेव्यतां तरुतलं चंडांशुरुज्झृंभते ।
चंडांशोर्निशि का कथा रघुपते चंद्रोऽयमुन्मीलति ॥
वत्सैतद्विदितं कथं नु भवता धत्ते कुरंगं यतः ।
क्वासि प्रेयसि हा कुरंगनयने चंद्रानने जानकि ॥

[प्रसन्नराघव]

(" ಲಕ್ಷ್ಮಣನೇ, ಸೂರ್ಯನು ಚಂಡ ಕಿರಣಗಳಿಂದ ಸಂತಾಪವನ್ನು ಕೊಡುತ್ತಲಿದ್ದಾನೆ. ವೃಕ್ಷದ ನೆರಳಲ್ಲಿ ಕುಳಿತುಕೊಳ್ಳೋಣ " " ಎಲೈ ರಘುಪತಿಯೇ, ರಾತ್ರಿಯಲ್ಲಿ ಸೂರ್ಯನೆಲ್ಲಿಂದ ಬರುವನು? ತಂಪಾದ ಕಿರಣಗಳುಳ್ಳ ಚಂದ್ರನು ಉದಯಿಸುತ್ತಲಿದ್ದಾನೆ " " ವತ್ಸ—ಲಕ್ಷ್ಮಣ, ನಿನಗೆ ಇದು ಹೇಗೆ ತಿಳಿಯಿತು? " " ಅವನಲ್ಲಿ ಜಿಂಕೆಯು ಕಾಣುವುದರಿಂದ " ' ಎಲೈ ಎರಳೆಯಂತಹ ಕಣ್ಣುಗಳುಳ್ಳ

ಪ್ರಿಯೆ ಜಾನಕಿಯೇ, ಎಲ್ಲಿರುವೆ?" ಈ ಶ್ಲೋಕದಿಂದ ಚಂದ್ರನ ಕಿರಣಗಳು ವಿರಹಿಗಳಿಗೆ ಎಷ್ಟು ಸಂತಾಪಜನಕ ವಾಗಿರುತ್ತದೆಂಬುದನ್ನು ವಾಚಕರು ಊಹಿಸಬಹುದು. ರಾಮನು ಪೂರ್ಣವಾಗಿ ಉನ್ಮತ್ತನಾಗಿದ್ದಾನೆ.

ಕವಿಯು ಚಂದ್ರನನ್ನು ಫಿರಂಗಿಯ ಗುಂಡಿಗೆ ಹೋಲಿಸಿದ್ದಾನೆ. ಇದು ಉಚಿತವೇ. ಕೆಲವು ಹೆಣ್ಣುಗಳು ಕಲ್ಲಿನಂತೆ ಗಟ್ಟಿ ಇದ್ದವು. ಸಂಜೆಗೆಂಪು ಹಬ್ಬಿದರೂ ಅವರು ಅಂಜಲಿಲ್ಲ. (ಸಾಯಂಕಾಲದಲ್ಲಿ ವಿರಹ ವ್ಯಥೆಯು ಹೆಚ್ಚಾಗುವುದು. ಯಕ್ಷನು ಮೇಘದ ಮುಂದೆ ವಿರಹಿತಳಾದ ತನ್ನ ಪತ್ನಿಯ ಸ್ಥಿತಿಯನ್ನು ಹೀಗೆ ವರ್ಣಿಸಿದ್ದಾನೆ:—

ಪಗಲೊಳೀ ತೆರದಿನೆಂತಾದೊಡಮವಳ್ಗೆ ಗಳ।
ಗೆಗಳು ಮಿಗೆ ಪೋಗುವವು ಮದ್ವಿರಹಮುದು ಮರೆದು।
ಪಗಲಳಿದಿರುಳ್ಪರಲು ನಿರ್ವಿನೋದೆಯು ತಾಪದಿಂ ಮಿಡುಕುತಿರವೇಳ್ಕೆಲ್ಲೈ॥

(ಉತ್ತರ ಮೇಘ)

ಆ ಮೇಲೆ ಮಬ್ಬುಗತ್ತಲೆಯೆಂಬ ತುಪಾಕಿದ ಹೊಗೆಯು ಎಲ್ಲೆಲ್ಲಿಯೂ ಹಬ್ಬಿತು. ಇದರಿಂದಲೂ ಅವರಿಗೆ ವಿಕಾರವುಂಟಾಗಲಿಲ್ಲ. ಇಷ್ಟಾದರೂ ಅಂಜದಿರುವವನ್ನು ನೋಡಿ, ಕಾಮನು ನಕ್ಷತ್ರಗಳೆಂಬ ಬಾಣಗಳನ್ನು ಬಿಟ್ಟು ಇವರ ಎದೆಯೊಡಿಸಬೇಕೆಂಬ ಪ್ರಯತ್ನಕ್ಕೆ ಬಿದ್ದನು. ಇದೂ ನಿಷ್ಫಲವಾಯಿತು. "ಎಲೈ ಹೆಣ್ಣುಗಳಿರ, ಇನ್ನು ನೀವು ತಡೆಯಲಾರಿರಿ" ಎಂದವನೇ ಉರಿಯಿಂದ ಕೂಡಿದ ಫಿರಂಗಿಯ ಗುಂಡನ್ನೇ ಇವರಮೇಲೆ ಬಿಟ್ಟನೆಂಬಂತೆ ಕೆಂಪಾದ ಚಂದ್ರಬಿಂಬವು ಕಂಗೊಳಿಸಿತು. ಮೂಡುವಾಗ ಚಂದ್ರನು ಕೆಂಡದಂತೆ ಕೆಂಪಿರುವನು. ಆದುದರಿಂದ ಅದನ್ನು ಉರಿಗೊಂಡ ಫಿರಂಗಿಯ ಗುಂಡೆಂದು ಕವಿಯು ವರ್ಣಿಸಿದ್ದಾನೆ. ಫಿರಂಗಿಯ ಗುಂಡೆಂದೊಡನೆ ಅಬಲೆಯರ ಹೃದಯವೇಕೆ—ಕೆಚ್ಚೆದೆಯ ವೀರರ ಹೃದಯವೂ ಕೂಡ ತಲ್ಲಣಿಸುತ್ತದೆ.

॥ ಮತ್ತೇಭ ವಿಕ್ರೀಡಿತಂ ॥

ಅಲರ್ವಿಲ್ಲಂ ಮುಳಿದಂಬುಜಾತ ಶರಮಂ ಕೂರ್ಗೆಯ್ದು ಮೂಲೋಕಮಂ।
ಗೆಲಲುರ್ಬೆಳ್ದು ತೆರಳ್ವಿನಂ ಮಘವದಾಶಾಕನ್ಯೆ ನಕ್ಷತ್ರ ಸಂ॥।
ಕುಲ ಲಾಜೋತ್ಕರಮಂ ಕರಂ ತಳಿದು ಜೀವಂಜೀವ ಸಂರಾವಮಂ-।
ಗಲ ಗಾನಂ ಬೆರಸೆತ್ತುವಾರತಿಯ ಚೆಂಬೊಂಪಟ್ಟೆಯೋ ಚಂದ್ರನೋ॥

(ಚಿಕದೇವ ರಾಜವಿಜಯ ೬-೧೮)

[ಪೂಗಣೆಯನು (ಕಾಮನು) ಸಿಟ್ಟಾಗಿ ಅರವಿಂದ ಬಾಣಗಳನ್ನು ಹರಿತ ಮಾಡಿ, ಮೂರು ಲೋಕಗಳನ್ನು ಗೆಲ್ಲಲು ಪ್ರತಿಭಟಿಸಿ ಸಿದ್ಧನಾಗಲು, ಪೂರ್ವ ದಿಕ್ಕೆಂಬ ಕನ್ಯೆಯು ನಕ್ಷತ್ರ ರಾಶಿಯೆಂಬ ಅರಳುಗಳನ್ನು (ಲಾಜಾ ಸಮೂಹವನ್ನು) ಹಾಕಿ ಚಕೋರ ಧ್ವನಿಯೆಂಬ ಮಂಗಳಗಾಯನದಿಂದ ಕೂಡಿ ಎತ್ತಿದ ಆರತಿಯ ಕೆಂಪಾದ ಬಂಗಾರದ ತಟ್ಟೆಯಂತೆ ಚಂದ್ರನು ಶೋಭಿಸಿದನು.] ಮನ್ಮಥನು ಮೂಲೋಕದ ವಿಜಯಾರ್ಥವಾಗಿ ಹೊರಟು

ನಿಂತವನು. ರಾಜರು ದಿಗ್ವಿಜಯಕ್ಕೆ ಹೊರಟು ನಿಲ್ಲಲು ಪುರಾಂಗನೆಯರು ಉಲ್ಲಾಸವುಳ್ಳವರಾಗಿ, ಮಧುರ ಮಂಗಳ ಗೀತಗಳನ್ನು ಪಾಡಿ ಮಂಗಳಾಕ್ಷತೆಗಳಿಂದ ಕೂಡಿದ ಆರತಿಯನ್ನೆತ್ತುವಂತೆ ಮಘವದಾಶಾಕನ್ಯೆಯು, (ಮಘವತ್+ಆಶಾ= ಇಂದ್ರದಿಕ್ಕು= ಪೂರ್ವದಿಕ್ಕು) ಚಕೋರ ಪಕ್ಷಿಗಳು ಮಧುರವಾಗ ಮಂಗಳಗೀತಗಳನ್ನು ಪಾಡುತ್ತಿರಲು ನಕ್ಷತ್ರಗಳೆಂಬ ಅಕ್ಷತೆಗಳನ್ನು ಹಾಕಿ, ಚಂದ್ರನೆಂಬ ತಟ್ಟೆಯನ್ನು ತಗೆದುಕೊಂಡು ಮನ್ಮಥನಿಗೆ ಆರತಿಯನ್ನೆತ್ತಿರುವಳೆಂದು ಕವಿಯು ಉತ್ಪ್ರೇಕ್ಷಿಸಿದ್ದಾನೆ.

ಜೀವಂಜೀವ= ಚಕೋರ ಪಕ್ಷಿ (ಜೀವೇನ=ಸಹಚರನಿಂದ ಕೂಡಿ, ಜೀವತಿ=ಬಾಳುತ್ತದೆ. ಆದುದರಿಂದ, ಜೀವಂಜೀವಃ) ಚಕೋರ ಪಕ್ಷಿಗಳು ಚಂದ್ರಿಕಾಪಾನ ಮಾಡಿ ಜೀವಿಸತಕ್ಕವುಗಳು. ಆದುದರಿಂದ ಅವು ಚಂದ್ರೋದಯವಾದೊಡನೆ ಉಲ್ಲಾಸದಿಂದ ಹಾಡುತ್ತಲಿದ್ದವು. ಈ ವಿಷಯವನ್ನು ಕುರಿತು ಕೆಳಗಣ ಕವಿಸಮಯವನ್ನು ನೋಡತಕ್ಕುದು.

ಇರುಳೊಳ್ ಚಕ್ರಾಹ್ವಯ ಯುಗ ।
ವಿರಹಾರ್ತಿ ಚಕೋರ ಚಂದ್ರಿಕಾ ಪಾನಮಿವಿಂ ॥
ತೆರಡುಂ ಕ್ರಿಯಾತ್ಮಕಂಗಳ್ ।
ವಿರಚಿಸೆ ಪಡೆಗುಂ ಪ್ರಯೋಗ ಗತಿ ಲಕ್ಷ್ಯಂಗಳ್ ॥

ಕಾವ್ಯಾವಲೋಕನ ಸೂತ್ರ ೬೧೮

॥ ಚಂಪಕಮಾಲಾ ॥

ಒಡನೆ ಸುರಾಸುರರ್ ಕನಕ ಪರ್ವತಮಂ ಕಡೆಗೋಲ ಮಾಡಿ ಮೇಣ್ ।
ಪೆಡೆಪಲವಪ್ಪ ವಾಸುಕಿ ಮಹೋರಗನಂ ಕಡೆಗಣ್ಣೆ ಮಾಡಿ ಪಾ ॥
ಲ್ಗಡಲನುಪಾಯದಿಂ ಕಡೆಯೆ ರಾಹುಗೆ ವಾಯು ಪಥಾಗ್ರಮೆಂಬ ಪೆ ।
ರ್ಮಡಕೆಯೊಳಿಕ್ಕಿ ಕೊಟ್ಟ ಪೊಸಬೆಣ್ಣೆವೊಲಿರ್ದುದು ಚಂದ್ರಮಂಡಲಂ ॥

(ಗುಣವರ್ಮನ ಶೂದ್ರಕ-ಕವಿಚರಿತೆ)

[ದೇವತೆಗಳೂ ದೈತ್ಯರೂ (ಕೂಡಿ) ಮೇರು ಪರ್ವತವನ್ನು ಕಡೆಗೋಲ ಮಾಡಿ, ಹಲವು ಹೆಡೆಗಳುಳ್ಳ ವಾಸುಕಿ ಮಹಾಸರ್ಪವನ್ನು ಕಡೆಗೋಲಿನ ಹಗ್ಗವನ್ನಾಗಿ ಮಾಡಿ, ಕ್ಷೀರ ಸಾಗರವನ್ನು ಯುಕ್ತಿಯಿಂದ ಕಡೆಯಲು (ಹೊರಟ) ಚಂದ್ರಮಂಡಲವು ಆಕಾಶವೆಂಬ ದೊಡ್ಡ ಮಡಕೆಯಲ್ಲಿ ರಾಹುವಿಗಾಗ ಇಕ್ಕಿಕೊಟ್ಟ(ಅದೇ ಕಡೆದು ತೆಗೆದ) ಬೆಣ್ಣೆಯಂತೆ ಶೋಭಿಸಿತು।

॥ ಚಂಪಕ ಮಾಲಾ ॥

ಮಿಗೆ ಪರಿವಚ್ಚ ಪೊಚ್ಚ ಪೊಸ ಜೊನ್ನದ ಬಲ್ಸರಿ ಹೇಮಗರ್ಭನೊ।
ಲ್ಪುಗಿಸುವ ಪಾದ್ಯದೋಜೆಯನೊಡಂಬಡೆ ತಾರೆಗಳರ್ಚೆ ಪೊಳ್ಪರ॥
ಲ್ವೊಗರಿಡಿದೊಪ್ಪೆ ಚಂದ್ರನೆಸೆದತ್ತುದಯಾವನಿ ಭೃತ್ತ್ರಿವಿಕ್ರಮಂ।
ನೆಗಪಿದ ಪಾದದುಂಗುಟದ ಬಟ್ಟುಗುರೆಂಬಿನಮಂಬರಾಗ್ರದೊಳ್॥

(ಚಿಕದೇವರಾಜ ವಿಜಯ ೬-೨೨)

[ಚೆನ್ನಾಗಿ ಹರಿಯುವ ನೂತನವಾದ ನಿರ್ಮಲಚಂದ್ರಿಕೆಯ ಪ್ರವಾಹವು ಬ್ರಹ್ಮದೇವನು ಸುರಿಸುವ ಪಾದ್ಯ (ಅರ್ಘ್ಯಜಲ) ದ ರೀತಿಯನ್ನು ಹೊಂದಲು ನಕ್ಷತ್ರಗಳು ಪೂಜಾ ಪುಷ್ಪಗಳಂತೆ ಒಪ್ಪಲು, ಉದಯಾಚಲವೆಂಬ ತ್ರಿವಿಕ್ರಮನು ಆಕಾಶದ ಮೇಲ್ಭಾಗದಲ್ಲಿ ಎತ್ತಿದ ಕಾಲಿನ ಉಂಗುಟದ ದುಂಡಗಿನ ಉಗುರಿನಂತೆ ಚಂದ್ರಮಂಡಲವು ಶೋಭಿಸಿತು.]

ಬಲಿಯು ಧಾರೆಯೆರೆದು ಕೊಟ್ಟ ಮೂರಡಿ ನೆಲವನ್ನಳೆಯುವದಕ್ಕಾಗಿ ಕಾಲಿಡುವಾಗ ಎರಡನೆಯ ಹೆಜ್ಜೆಯನ್ನು ಸ್ವರ್ಗಲೋಕವನ್ನಾಕ್ರಮಿಸುವದಕ್ಕಾಗಿ ಮೇಲೆ ನೀಡಿದನು. ಅದು ದ್ಯುಲೋಕ, ಮಹರ್ಲೋಕ, ಜನೋಲೋಕ, ತಪೋಲೋಕಗಳನ್ನು ದಾಟಿ ಸತ್ಯಲೋಕವನ್ನು ಮುಟ್ಟಿತು, ಅಲ್ಲಿದ್ದ ಚತುರ್ಮುಖ ಬ್ರಹ್ಮನು ತನ್ನ ಉತ್ಪತ್ತಿಗೆ ಕಾರಣಭೂತನಾದ ಶ್ರೀ ಮಹಾ ವಿಷ್ಣುವಿನ ಪಾದವನ್ನು ಅರ್ಘ್ಯ ಪಾದ್ಯಾದಿಗಳಿಂದ ಅತ್ಯಾನಂದದಿಂದ ಪೂಜಿಸಿದನು. ತನ್ನ ಕಮಂಡಲ ಜಲದಿಂದ ಆ ತ್ರಿವಿಕ್ರಮನ ಪಾದವನ್ನು ತೊಳೆದಾಗ ಆ ಪಾದತೀರ್ಥವೇ ಒಂದು ನದಿಯಾಗಿ ಹೊರಟಿತು. ಆ ನದಿಯು ಭಗವಂತನ ಕೀರ್ತಿಯಂತೆ ನಿರ್ಮಲವಾಗಿ ಪ್ರವಹಿಸುತ್ತ, ಮೊದಲು ಧ್ರುವ ಮಂಡಲಮೇಲೆ ಬಿದ್ದು, ಆ ಬಳಿಕ ಕ್ರಮದಿಂದ ಕೆಳಗಣ ಲೋಕಗಳಲ್ಲಿ ಹರಿದು ಮೂರು ಲೋಕಗಳನ್ನು ಪಾವನ ಮಾಡುತ್ತಲಿರುವದು.

ಇಲ್ಲಿ ಉದಯಾಚಲವೇ ತ್ರಿವಿಕ್ರಮ. ಚಂದ್ರನೇ ಆ ತ್ರಿವಿಕ್ರಮನ ಕಾಲು-ಹೆಬ್ಬೆರಳಿನ ಉಗುರು. ಬೆಳದಿಂಗಳೇ ಬ್ರಹ್ಮನು ಕೊಟ್ಟ ಅರ್ಘ್ಯ ಜಲದಿಂದುಂಟಾದ ಗಂಗಾನದಿಯ ಪ್ರವಾಹವು. ಉಗುರಿನಿಂದ ಗಂಗಾನದಿಯು ಕೆಳಕ್ಕೆ ಬಂದಂತೆ ಚಂದ್ರನಿಂದ ಚಂದ್ರಿಕೆಯು ಭೂಲೋಕಕ್ಕೆ ಬರುವುದು. (ಹೇಮಗರ್ಭ=ಬ್ರಹ್ಮ; ಹೇಮವೆಂದರೆ ಹಿರಣ್ಮಯವಾದ ಅಂಡವು [ಬ್ರಹ್ಮಾಂಡವು] ಅದರ ಗರ್ಭ= ಉತ್ಪತ್ತಿಸ್ಥಾನ. ಆದುದರಿಂದ ಅವನಿಗೆ ಈ ಹೆಸರು ಬಂದಿತು.) ಈ ಬಗೆಗೆ ಕೆಳಗಣ ಪದ್ಯಗಳನ್ನು ನೋಡತಕ್ಕದು:-

॥ ಭಾಮಿನೀ ಷಟ್ಪದಿ ॥

ಲೋಕ ಮೂರಲಿ ಸತ್ಯ ಲೋಕವ ।
ನೂಕಿ ಮೇಲಣ ಕಮಲಜಾಂಡದ ।
ಜೋಕೆಯನು ನಖಸೋಕೆ ಬಿರಿಯಿತ್ತಾ ಕಟಾಹವದು ॥ ೨೬ ॥
ಆ ಮಹಾಕೌತುಕವ ಕಂಡನು ।
ತಾ ಮಹೋತ್ಸಾಹದಲಿ ಕಮಲಜ ।
ನಾ ಮಹಾಚರಣವನು ತೊಳೆದನು ಶ್ರೀತ್ರಿವಿಕ್ರಮನ ॥
ಆ ಮಹಾಪಾದದಲಿ ಪುಟ್ಟಿದ
ಳಾಮಹಾಗಂಗಾಭಿಧಾನದಿ
ಭೂಮಿಯನ್ನಾಕುಳಿಸಿ ಬಾರದೆಯಾಮಹೀತಳಕೆ ॥

(ಆದಿಪರ್ವ ಸಂಧಿ ೧೦-೨೬)

ಉದಯ ಕ್ಷ್ಮಾಭೃತ್ತಟಂ ರಂಗಮನುಡುತತಿ ಪುಷ್ಪಾಂಜಳಿಕ್ಷೇಪಮಂಪ ।
ರ್ವಿದ ಗುರ್ವಪ್ಪಂಧಕಾರಂ ನವ ಯವನಿಕೆಯಂ ನಾಲ್ಕು ಜಾವಂಗಳುಂ ತ ।
ಪ್ಪದೆ ನಾಲ್ಕಂಕಂಗಳಂ ಪೋಲ್ತಮರ್ದಿರೆ ಹಿಮಕೃನ್ನಾಟಕಾಸೂತ್ರಧಾರಾ ॥
ಭ್ಯುದಯಪ್ರಾರಂಭಮಿಂದ್ರಾಶೆಯೊಳೆನೆಯೆಸೆದಿಲ್ಸಾಯ್ತು ಶೀತಾಂಶುಬಿಂಬಂ

(ಶಾಂತಿ ಪುರಾಣ–ಕವಿಚರಿತೆ)

[ಉದಯಾಚಲದ ದಂಡೆಯು ರಂಗಸ್ಥಳವು; ನಕ್ಷತ್ರಗಳ ಸಮೂಹವು ಹೆರವಿದ ಹೂಬೊಗಸೆಯು; ಹಬ್ಬಿದ ಗಾಢಾಂಧಕಾರವು ನೂತನವಾದ ತೆರೆಯು; ನಾಲ್ಕು (ಪ್ರಹರ) ಜಾವಗಳು ನಾಲ್ಕು ಅಂಕುಗಳು. ಈ ತೆರನಾಗಿ ಒಂದೂ ಬಿಡದೆ ಹೊಂದಿಕೆಯಾಗಿರಲು ಪೂರ್ವದಿಕ್ಕಿನಲ್ಲಿ ಚಂದ್ರನೆಂಬ ನಾಟಕಾ ಸೂತ್ರಧಾರನ ಏಳ್ಗೆಯ ಪ್ರಾರಂಭವೆಂಬಂತೆ ಇಂದುಮಂಡಲವು ಅಂದವಾಗಿ ಶೋಭಿಸಿತು]

॥ **ವಾರ್ಧಿಕಷಟ್ಪದಿ** ॥

ದಿವಿಜ ಗಣ ಪೋಷಿತಂ ದ್ವಿಜನಿಕರ ಕಧಿನಾಥ ।
ಕುವಲಯ ಪ್ರಿಯ ಮೇಲೆ ಸಲೆ ನಿಶಾಕರ ರಾಜ ।
ನವೆದು ಮತ್ತಭಿವೃದ್ಧಿಯಾಗುತಿಹ ಶಾಂತನುಂ ಸುಖ ದುಃಖಗಳ ಬಲ್ಲನಂ ॥

ರವಿಯೆನ್ನ ಕೊಲಲೆಂದು ಬೆನ್ನಟ್ಟಿ ಬರುತಿರ್ಪಂ ।
ಕವಡಿಲ್ಲದುಳುಹೆಂದು ಕೊಂಡಾಡಿ ಚಂದ್ರನಂ ।
ದ್ರವಗುಂದಿ ಬಸುರನಾ ನಿಶಿ ಪೊರ್ದಿತೆಂಬಂತೆ ಲಾಂಛನಂ ಕಾಣಿಸಿದುದು ||
(ಪರಶುರಾಮ ರಾಮಾಯಣ-ಸಾಹಿತ್ಯ ಪರಿಷತ್ ಪತ್ರಿಕೆ.)

[ದಿವಿಜಗಣ ಪೋಷಿತ=ದಿವಿಜ ಗಣಃ ಪೋಷಿತಃ ಯೇನ (ದೇವತೆಗಳ ಸಮೂಹವು ಆವನಿಂದ ಪೋಷಿಸಲ್ಪಡುತ್ತದೆಯೋ ಆವನು—ಚಂದ್ರನು.) ದ್ವಿಜನಿಕರ=ನಕ್ಷತ್ರ ಸಮೂಹ. ಕವಡು=ಕಪಟ]

ಚಂ ॥ ಭುವನವನೆಲ್ಲಮಂ ಪುದಿದು ತೀವಿದ ಚಂದ್ರಿಕೆಯೆಂಬ ಪಾಲ್ಗಡಲ್ ।
ತವಕದಿನೆನ್ನ ಪುತ್ರನ ನಿಳಾಜನವೀಕ್ಷಿಸೆ ದೃಷ್ಟಿ ಪಾತದಿಂ ॥
ನವೆದಪನೆಂದು ತೂಪಿರಿದ ಶೀಕರದಂತಿರೆ ತಾರಕಾಳಿಯೊ ।
ಪ್ಪುವ ಪಣೆಗಿಟ್ಟ ಕಜ್ಜಳದ ಬೊಟ್ಟಿನ ಲೊಪ್ಪಿದುದಿಂದು ಲಾಂಛನಂ ॥
ಮ ॥ ತಿಮಿರೋದ್ಯದ್ಯಮುನಾ ತರಂಗಿಣಿ ಪಿತಂ ತಾನೆತ್ತ ಪೋದಂ ಗಡೆಂ ।
ದು ಮಹಾ ದುಃಖದಿನೆಂಟು ದಿಕ್ಕಿನೊಳಿ ನೋಡುತ್ತಿರ್ಪ್ಪುದುಂ ಕೂಡೆ ಚಂ॥
ದ್ರಮನಾರಕ್ತತೆವೆತ್ತು ಮತ್ತು ದಿಸೆ ತಾತಭ್ರಾಂತಿಯಿಂದಪ್ಪಿದಳ್ ।
ಕ್ರಮದಿಂದೆಂಬವೊಲಿಂಬುವೆತ್ತುದು ಕಳಂಕಂ ತತ್ಸುಧಾ ಧಾಮನಾ ॥
(ರಾಜಶೇಖರ ವಿಳಾಸ-೧೧-೫೮, ೫೯)

[ಸ್ತ್ರೀಯರು ಎಳೆ ಮಕ್ಕಳಿಗೆ ದೃಷ್ಟಿಯಾಗಬಾರದೆಂದು 'ಥೂ-ಥೂ' ಎಂದು ತೂಪಿರಿಯುವುದುಂಟ ; ಮತ್ತು ಹಣೆಗೆ ಕಜ್ಜಳದ ತಿಳಕವನ್ನಿಡುವುದುಂಟು' ತಿಮಿರ+ಉದ್ಯತ್+ಯಮುನಾ ತರಂಗಿಣಿ. ಯಮುನಾ ನದಿಯು ಕಪ್ಪು. ಚಂದ್ರನು ಮೂಡುವಾಗ ಬಳ್ಳೀ ಕೆಂಪಗಿದ್ದನಾದುದರಿಂದ ಆವಳು ತಂದೆಯೆಂದು (ಸೂರ್ಯನೆಂದು) ಭಾವಿಸಿ ಭ್ರಾಂತಳಾದಳು.]

॥ ವಾರ್ಧಿಕ ಷಟ್ಪದಿ ॥

ಸಸಿ ಬಟ್ಟು ಗಾಗಜವೊಳತನು ಕತ್ತುರಿ ಮಸಿಯೊ ।
ಕೊಸೆದು ಬರೆದಿರ್ದ ಮೋಹಾಂಗವೋಂಕಾರವೋ ।
ದೆಸೆಗೆಟ್ಟು ತಮವೋಡಿ ಭೀತಿಯಿಂ ಸಸಿವಸರ ಬಹೆನೆಂದು ಪೊಡೆವೊಕ್ಕುದೊ ॥
ಎಸೆವಿಂದುವೆಂಬಮೃತ ಕುಂಭಮಂ ವಜ್ರಿ ಲೋ ।
ಭಿಸಿ ಕುರುಹಿಗಿಟ್ಟರಗಿನೊಂದು ಮುದ್ರೆಯೊ ಯೆನಲ್ ।
ಪೊಸತಾಯ್ತು ವಿಧುಬಿಂಬ ಮಧ್ಯದಂಕಂ ಪಳಿಕುವೊಸೆದಿರ್ದ ಕಾಳಿಯಂತೆ॥
(ಚೆನ್ನಬಸವ ಪುರಾಣ-೯-೨೫.)

[ಚಂದ್ರನೆಂಬ ಮಂಡಗಿನ ಕಾಗದದ ಮೇಲೆ ಕಾಮನು ಕಸ್ತೂರಿಯ ಮಸಿಯಿಂದ ಅಕ್ಕರೆಯಿಂದ ಬರೆದ ಪ್ರೇಮ ತತ್ವದ ಓಂಕಾರವೋ, ದಿಕ್ಕುದಿಕ್ಕಿಗೆ ಹೋದರೂ ಆಶ್ರಯ ಸಿಕ್ಕದಿರಲು, ಕತ್ತಲೆಯು ಚಂದ್ರನ ಹೊಟ್ಟೆಯನ್ನೇ ಸೇರುವೆನೆಂದು ಅಲ್ಲಿಯೇ ಸೇರಿತೋ, ಇಂದ್ರನು ಚಂದ್ರನೆಂಬ ಅಮೃತ ಕಲಶಕ್ಕೆ ಲೋಭಿಸಿ ಗುರುತಿಗಾಗಿ ಅಳವಡಿಸಿದ ಅರಗಿನ ಮುದ್ರೆಯೋ ಎಂಬಂತೆ ಚಂದ್ರಬಿಂಬದಲ್ಲಿಯ (ಕಪ್ಪಾದ) ಚಿಹ್ನವು ಸ್ಫಟಿಕದಲ್ಲಿಯ ಕಪ್ಪಿನಂತೆ ಕಂಗೊಳಿಸಿತು.]

ಚಂದ್ರ ಬಿಂಬದ ಮಧ್ಯದಲ್ಲಿದ್ದ ಕಪ್ಪಿಗೆ, ಕೆಲವರು ಕಲಂಕವೆಂದು ಹೇಳುತ್ತಾರೆ. ಚಂದ್ರನು ಸಮುದ್ರದಲ್ಲಿ ಹುಟ್ಟಿದನಾದುದರಿಂದ ಮತ್ತೆ ಕೆಲವರು ಸಮುದ್ರದ ಪಂಕವೆಂದೆನ್ನುತ್ತಾರೆ. ಬೇರೆ ಕೆಲವರು ಸಾರಂಗವೆಂದು ಹೇಳುತ್ತಾರೆ. ಇನ್ನೂ ಕೆಲವರು ಭೂಮಿಯ ಛಾಯೆಯೆಂದೆನ್ನುತ್ತಾರೆ. ಕೆಲವರು ಅವನು ಕತ್ತಲೆಯನ್ನು ಕುಡಿದನಾದುದರಿಂದ ಕಪ್ಪುಂಟಾಯಿತೆಂದು ಹೇಳುತ್ತಾರೆ. ಆದರೆ ಶೃಂಗಾರ ಸಾಗರನಾದ ನಮ್ಮ ಕವಿಯು ಅದು ಇವುಗಳಲ್ಲಾವುದೂ ಅಗಿದೆ. ಮದನನು ಚಂದ್ರನಲ್ಲಿ ಕಸ್ತೂರಿಯಿಂದ ಬರೆದ ಮೋಹರಸದ (ಶೃಂಗಾರ ತತ್ವದ) ಓಂಕಾರವೆಂದು ಹೇಳಿದ್ದಾನೆ.

“ಓಂ ಇತ್ಯೇತದಕ್ಷರಮಿದಂ ಸರ್ವಂ ತಸ್ಯ ಉಪವ್ಯಾಖ್ಯಾನಂ ಭೂತಂ ಭವದ್ಭವಿಷ್ಯದಿತಿ ಸರ್ವಂ ಓಂಕಾರಃ ಏವ । ಯಚ್ಚಾನ್ಯತ್ರಿಕಾಲಾತೀತಂ ತದಪ್ಯೋಂಕಾರಃ ಏವ ॥” (ಮಾಂಡೂಕ್ಯೋಪನಿಷತ್) (ಭೂತ, ವರ್ತಮಾನ ಭವಿಷ್ಯತ್ ಇವೆಲ್ಲವುಗಳು ಓಂಕಾರವೇ. ತ್ರಿಕಾಲಾತೀತವಾದ ವಸ್ತುವೆಲ್ಲವೂ ಓಂಕಾರವೇ, ಇದೆಲ್ಲವೂ ಓಂಕಾರವೇ) ಈ ಪ್ರಕಾರವಾಗಿ ವೇದಾಂತದ ಅರ್ಥಸಾರ ಸಂಗ್ರಹವೂ ಓಂ ಶಬ್ದದಲ್ಲಿ ಅಖಂಡವಾಗಿ ಅಡಕವಾಗಿರುವಂತೆ ಪ್ರೇಮತತ್ವದ ಸಾರವೆಲ್ಲ ಚಂದ್ರನಲ್ಲಿಯೇ ಸಂಪೂರ್ಣವಾಗಿ ಅಡಕವಾಗಿರುತ್ತದೆ.

ಕವಿಗಳು ಚಂದ್ರನನ್ನು ‘ಅಖಿಲ ಕಲಾ ಪಾತ್ರ’ ‘ಕುಸುಮ ಚಾಪ ಜೈತ್ರ ಛತ್ರಂ’ ‘ಮನೋಭವಂಗೆ ಜೀವಾತು’ ‘ಶೃಂಗಾರ ರಸಾಯನಂ’ ‘ಶೃಂಗಾರ ದೀಕ್ಷಾಮಣಿ’ ‘ಪ್ರೌಢಾನಂಗ ಭುಜಂಗ ಮಸ್ತಕಮಣಿ’ ‘ಕಂದರ್ಪ ಸೀಮಂತಿನೀ ಕಾಂಚೀ ಮಧ್ಯಮಣಿ’ ‘ರತಿಕೇಲೀ ಶ್ವೇತ ಸಹಸ್ರ ಪತ್ರ’ ‘ಶೃಂಗಾರಾದ್ವೈತವಾದಿ’ ಎಂದು ಬಗೆಬಗೆಯಿಂದ ವರ್ಣಿಸಿದ್ದಾರೆ. ಇಂತಹ ಚಂದ್ರನಲ್ಲಿ ಮದನನು ಪ್ರೇಮತತ್ವದ ರಹಸ್ಯವನ್ನು ಬರೆದಿಟ್ಟನೆಂಬ ಕವಿಕಲ್ಪನೆಯು ಔಚಿತ್ಯಕರವಾದುದು.

॥ ಮತ್ತೇಭ ವಿಕ್ರೀಡಿತ ॥

ಎಲೆ ಶೀತಪ್ರಭ ನಿನ್ನ ಜನ್ಮನಿಳಯಂ ತಾನಪ್ಪ ಮದ್ಗರ್ಭಮಂ ।
ಸಲೆ ಕಾಯ್ದಿಂ ಬಿಡದಿಂತು ಶೋಷಿಸುವ ಕೀಳಾಭೀಳನಂ ಬಾಡವಾ ॥
ನಲನಂ ಬಾರಿಸು ನೀನೆನುತ್ತು ಮೆನಿತಾನುಂ ಪೇಳಲೆತ್ತಂದುದು ।
ಜ್ಜ್ವಲ ದುಗ್ಧಾಂಬುಧಿಯಂಬಿನಂ ಭುವನಮುಂ ಪರ್ವಿತ್ತು ಚಂದ್ರಾತಪಂ ॥

(ಶಾಂತೀಶ್ವರ ಪುರಾಣ ೧೧-೪೪.)

[“ಎಲೈ ಶೀತಲ ಕಿರಣನಾದ ಚಂದ್ರನೇ, ನಿನ್ನ ಜನ್ಮಸ್ಥಾನವಾದ ನನ್ನ ಉದರವನ್ನು ಉಷ್ಣತೆಯಿಂದ ಸತತವಾಗಿ ಶೋಷಿಸುವ ಈ ನೀಚವೂ, ದಾರುಣವೂ

ಆದ ವಾಡವಾಗ್ನಿಯನ್ನು ದೂಡಿಬಿಡು” ಎಂದು ಹೇಳಲಿಕ್ಕೆ ಉಜ್ವಲವಾದ ಕ್ಷೀರಸಾಗರವು ಎದ್ದು ಬಂದಿರುವುದೆಂಬಂತೆ ಬೆಳದಿಂಗಳು ಭುವನವನ್ನೆಲ್ಲ ವ್ಯಾಪಿಸಿತು.] ಕ್ಷೀರೋದಧಿಯಲ್ಲಿ ಹುಟ್ಟಿದ ಗಳ ರತ್ನಗಳಲ್ಲಿ ಚಂದ್ರನೊಬ್ಬನು. ಆದುದರಿಂದ ಆದರ ಗರ್ಭವು ಚಂದ್ರನ ಜನ್ಮಸ್ಥಾನವಾದ ಹಾಗಾಯಿತು. ಕ್ಷೀರಸಾಗರಕ್ಕೆ ಗರ್ಭದಲ್ಲಿಯ ಔರ್ವಾನಲ ಸಂತಾಪವು ಅಸಹ್ಯವಾಗಲು, ಅದನ್ನು ಹೇಗೆ ನಿವಾರಿಸಿಕೊಳ್ಳಬೇಕೆಂದು ವಿಚಾರಿಸಿ, “ ಶೀತೋಪಚಾರದಿಂದಲೇ ಇದು ಸಾಧ್ಯವು ” ಎಂದೆಂದುಕೊಂಡು ಶೀತಲ ಕಿರಣನಾದ ಚಂದ್ರನ ಕಡೆಗೆ ಬಂದಿತೆಂಬಂತೆ ಭುವನ ವ್ಯಾಪಿಯಾದ ಬೆಳದಿಂಗಳು ಶೋಭಿಸಿತು. ಕ್ಷೀರಸಾಗರವು ಬೆಳ್ಳಗಿರುತ್ತದೆ; ಮತ್ತು ಅದು ವಿಸ್ತೀರ್ಣವಾಗಿರುತ್ತದೆ. ಆದುದರಿಂದ ಶುಭ್ರ ಚಂದ್ರಿಕಾ ವಿಸ್ತಾರಕ್ಕೂ ಕ್ಷೀರ ಸಾಗರಕ್ಕೂ ಸಾದೃಶ್ಯ.

॥ ಕಂದ ॥

ಬಳ-ವೈರಿಯೆಂಬ ಸಾಧಕ ।
ನಿಳೆಯಂ ಪೊಸ ಮೂಸೆ ಮಾಡಿ ಶಶಿಮಂಡಳಮಂ ॥
ಗುಳಿಗೆಯಿಡೆ ತಿಮಿರ ಕಾಳಿಕೆ ।
ತಿಳಿದಂತಿರೆ ಜಳಕನಾಯ್ತು ಪೊಸವೆಳ್ದಿಂಗಳ್ ॥

(ಅನಂತನಾಥ ಪುರಾಣ-ಕವಿಚರಿತೆ)

[ಇಂದ್ರನೆಂಬ (ಬಲವೈರಿ) ಸಾಧಕನು ಇಳೆಯನ್ನೇ (ಚಿನ್ನ, ಬೆಳ್ಳಿ ಮೊದಲಾದುವುಗಳನ್ನು ಕರಗಿಸುವ) ಹೊಸ ಮೂಸೆ ಮಾಡಿ, ಚಂದ್ರಮಂಡಲವನ್ನು ಗುಳಿಗೆಯಿಡೆ ಕತ್ತಲೆಯೆಂಬ ಕಾಳಿಕೆಯು (ದೋಷವು) ಹಾರಿದಂತಾಗಲು ನೂತನವಾದ ಚಂದ್ರಿಕೆಯು (ನಿರ್ಮಲವಾಗಿ) ಹೊಳೆಯಹತ್ತಿತು.] ರಸವಾದಿಗಳು (ಕೀಳ ಧಾತುಗಳಿಂದ ಬೆಳ್ಳಿ ಬಂಗಾರ ಮುಂತಾದುವುಗಳನ್ನು ಸಿದ್ಧಪಡಿಸುವವರು.) ರಸಾಯನದ ಗುಳಿಗೆಗಳನ್ನು ಕಬ್ಬಿಣ ಮೊದಲಾದ ಕೀಳಧಾತುಗಳ ಮೇಲಿಟ್ಟು ಅವುಗಳನ್ನು ಶೋಧಿಸಿ ಚಿನ್ನ ಮೊದಲಾದುವುಗಳನ್ನು ಮಾಡುವರೆಂದು ಪ್ರವಾದವುಂಟು. ಇಲ್ಲಿ ಇಂದ್ರನೇ ಸಿದ್ಧನು. ಪೃಥ್ವಿಯೇ ಮೂಸೆಯು; ಕತ್ತಲೆಯೇ ಧಾತುವಿನ ದೋಷವು; ಚಂದ್ರ ಮಂಡಲವೇ ರಸಾಯನದ ಗುಳಿಗೆಯು, ಅದನ್ನಿಟ್ಟ ಕೂಡಲೆ ರಸಾಯನ ಕ್ರಿಯೆಯಿಂದ ದೋಷವು ಹರಿದು ಶುದ್ಧ ಚಿನ್ನವು ಶೋಭಿಸಹತ್ತಿತು. ಚಂದ್ರನುದಿಸಲು ಕತ್ತಲೆಯು ಹರಿಯಿತೆಂಬುದೇ ಭಾವವು.

* ॥ ಕಂದ ॥

ಇಂದು ಜಡನಿಧಿಯ ಬಸಿರೊಳ್ ।
ಬಂದುದು ಪುಸಿ ಕಾಣ ಪೂರ್ಣ ಚಂದ್ರನ ಬಸಿರೊಳ್ ॥
ಬಂದುದೊ ಪೇಳಿಂಗಡಲೆಂ ।
ಬಂದದಿನೇಂ ಪಸರಿಸಿತ್ತೊ ಪೊಸವೆಳ್ದಿಂಗಳ್ ॥

(ಲೀಲಾವತಿ ಆ. ೩-ಪ. ೨೪)

[ಚಂದ್ರನು ಸಮುದ್ರದಿಂದ ಹುಟ್ಟಿದನೆಂಬುದು ಸುಳ್ಳು; ಆ ಕ್ಷೀರಸಾಗರವೇ ಪೂರ್ಣ ಚಂದ್ರನ ಗರ್ಭದಿಂದ ಉದಯಿಸಿತೆಂದು ತಿಳಿ. ಎಂದೆನ್ನುವಂತೆ ಹೊಸದಾದ ಬೆಳದಿಂಗಳು (ಎಲ್ಲೆಲ್ಲಿಯೂ) ಹರಡಿಕೊಂಡಿತು.] ದೇವತೆಗಳೂ ದೈತ್ಯರೂ ಕೂಡಿ ಕ್ಷೀರಸಾಗರವನ್ನು ಕಡೆಯಲು ಅದರೊಳಗಿಂದ ಹೊರಟ ಹದಿನಾಲ್ಕು ರತ್ನಗಳಲ್ಲಿಯೇ ಚಂದ್ರನೊಬ್ಬನೆಂಬುದು ಸುಳ್ಳೆಂದೂ, ಕಿರಣಗಳೆಂಬ ಅಲೆಗಳಿಂದ ಎಲ್ಲೆಲ್ಲಿಯೂ ಪಸರಿಸಿರುವ ಚಂದ್ರಿಕೆಯೇ ಕ್ಷೀರಸಾಗರದಂತೆಸೆಯುವುದರಿಂದ ಆ ಕ್ಷೀರಸಾಗರವೇ ಚಂದ್ರಬಿಂಬದಿಂದ ಹುಟ್ಟಿ ಲೋಕವಲ್ಲೆಲ್ಲ ಹರಡಿದೆಯೆಂದೂ ಹೃದಯಂಗಮವಾಗಿ ಹೇಳಿರುವ ಈ ಕವಿಯ ನಲ್ನುಡಿಯು ಆವ ರಸಿಕನನ್ನು ಆನಂದಪರವಶನನ್ನಾಗಿ ಮಾಡಲಿಕ್ಕಿಲ್ಲ?

* ॥ ಕಂದ ॥

ಚಂದ್ರಿಕೆ ಸುರವರ ಕರಿಯೆನೆ ।
ಚಂದ್ರಂ ತತ್ಕರಿಯ ಕುಂಭಮೆನೆ ತಾರಗೆಗಳ್ ॥
ರುಂದ್ರ ನಯನಂಗಳೆನೆ ವಿಯ ।
ದಿಂದ್ರನದೇಂ ಭುವನ ಜನಕೆ ಕಣ್ಗೊಳಿಸಿದನೋ ॥

(ಲೀಲಾವತಿ ಆ-೨ ಪ-೧೮)

[ಬೆಳ್ದಿಂಗಳೇ ಐರಾವತವೂ, ಚಂದ್ರನೇ ಆ ಐರಾವತದ ಕುಂಭಸ್ಥಳವೂ, ನಕ್ಷತ್ರಗಳೇ (ಇಂದ್ರನ) ದಟ್ಟಾಗಿ ಹಬ್ಬಿದ ಕಣ್ಣುಗಳೂ (ಆಗಿ ಶೋಭಿಸುತ್ತಿರಲು) ಆಕಾಶವು ಜಗತ್ತಿನ ಜನರಿಗೆ ಇಂದ್ರನಂತೆ ಕಂಗೊಳಿಸಿತು] ದೇವೇಂದ್ರನ ಆನೆಯಾದ ಐರಾವತವೂ ಬೆಳ್ಳಗೆ, ಬೆಳ್ದಿಂಗಳೂ ಬೆಳ್ಳಗೆ; ಆದುದರಿಂದ ಚಂದ್ರಿಕೆಯು ಸುರವರನ ಕರಿಯಂತೆ ಶೋಭಿಸಿತೆಂದು ಹೇಳಿದುದು ಉಚಿತ. ಆನೆಗೆ

ಹೇಗೆ ಗಂಡಸ್ಥಳವು ಮುಖ್ಯವಾದುದೋ ಹಾಗೆಯೇ ಚಂದ್ರಿಕೆಗೆ ಚಂದ್ರನೇ ಮುಖ್ಯ. ಇಂದ್ರನ ಮೈಯ್ಯೆಲ್ಲ ಕಣ್ಣುಗಳಿಂದಲೇ ತುಂಬಿತ್ತು; ಇಲ್ಲಿ ಆಕಾಶವೆಂಬ ಇಂದ್ರನ ಮೈಯ್ಯೆಲ್ಲ ನಕ್ಷತ್ರಗಳೆಂಬ ಸಾಂದ್ರವಾಗಿದ್ದ ನೇತ್ರಗಳಿಂದಲೇ ವ್ಯಾಪಿಸಿದ್ದಿತು. ಆದುದರಿಂದ ಚಂದ್ರೋದಯ ಸಮಯವನ್ನು ಅಮರಾವತಿಯಲ್ಲಿ ನಡೆದಿರುವ ಇಂದ್ರನ ಮೆರೆವಣಿಗೆಗೆ ಹೋಲಿಸಿರುವುದು ಮನವೋಹಕವಾಗಿದೆ. ಕವಿಯು ಆ ಮೆರೆವಣಿಗೆಯು ಭೂಲೋಕದಲ್ಲಿಯೇ ನಡೆದಿದುವಂತೆ ಕಲ್ಪನೆ ಮಾಡಿಕೊಡುವುದು ಹೇಗೆಂದರೆ: ನೆಲದಮೇಲೆ ಎಲ್ಲೆಲ್ಲಿಯೂ ಚಂದ್ರಿಕೆಯು ಹಬ್ಬಿದೆ; ಅದು ಮುಗಿಲಲ್ಲಿ ಎಷ್ಟೋ ಎತ್ತರದ ವರೆಗೆ ಇರುವಂತೆ ನಮಗೆ ಕಾಣಿಸುತ್ತಿರುತ್ತದೆ. ಇಂತಹ ದೊಡ್ಡದಾದ ಆನೆಯ ಕುಂಭಸ್ಥಳವು ಆವ ಭಾಗದಲ್ಲಿರತಕ್ಕುದೆಂದು ನಮಗೆ ಭಾವನೆಯಾಗುವುದೋ ಅದೇ ಸ್ಥಳದಲ್ಲಿ ಪೂರ್ವ ದಿಕ್ಕಿಗೆ ಚಂದ್ರನಿದ್ದಾನೆ. ಪೂರ್ವದಿಕ್ಕಿಗಿರುವ ಚಂದ್ರನೂ ಕೆಂಪು; ಆನೆಯ ಗಂಡಸ್ಥಳವೂ ಸಿಂಧೂರ ವರ್ಣದಿಂದೊಪ್ಪುವಂತಹದು. ಇವೆಲ್ಲವುಗಳ ಮೇಲೆ ಚುಕ್ಕೆಗಳಿಂದ ತುಂಬಿದ ಆಕಾಶವು. ಆದುದರಿಂದ ಚಂದ್ರಿಕೆಯೆಂಬ ಐರಾವತವನ್ನೇರಿದ ಇಂದ್ರನಂತೆ ಆಕಾಶವು ಕಂಗೊಳಿಸಿತು. ಇಂದ್ರನ ಮೆರೆವಣಿಗೆಯಲ್ಲಿ ದೇವತೆಗಳಿಗೆ ಎಷ್ಟು ಆನಂದವಾಗಬೇಕೋ ಅಷ್ಟೇ ಆನಂದವು ಚಂದ್ರೋದಯ ಸಮಯದಲ್ಲಿ ಭೂಲೋಕದ ಜನರುಗಳಿಗಾಗದೆ ಇರದು.

ವಾರ್ಧಿಕ ಷಟ್ಪದಿ

ಪ್ರಾಚೀ ನಿತಂಬಿನಿಯ ಮುಖಬಿಂಬದೆಳೆನಗೆಯ।
ರೋಚಿಗಳೊ ಪೆಚ್ಚುಗೆಯೊಳುಬ್ಬೆದ್ದ ಪಾಲ್ಗಡಲ।
ವೀಚಿಗಳೊ ಮನ್ಮಥನ ಕೀರ್ತಿಯ ಮರೀಚಿಗಳೊ ನಿಜಕಾಂತನಂ ಕಾಣುತ॥
ನಾಚಿ ಬಿಳ್ಪೇರಿದಳೊ ರಾತ್ರಿವಧು ಚೆಲ್ಲಿದನೊ।
ಭೂಚಕ್ರಕಂಗಜಂ ಬೇಳುವೆಯ ಬೂದಿಯಂ।
ವಾಚಿಸುವೊಡರಿಪೆನೆಲ್ ಪಸರಿಸಿತು ಚಂದ್ರಕಿರಣಂಗಳೆಲ್ಲಾ ದೆಸೆಯೊಳು॥

(ಜೈಮಿನಿ ಭಾರತ ೨೬-೧೫)

[ಪೂರ್ವ ದಿಕ್ಕೆಂಬ ಲಲನೆಯ (ಪ್ರಫುಲ್ಲವಾದ ಮುಖದ ಎಳನಗೆಯ ಕಿರಣಗಳೋ, ಭರದಿಂದ ಉಕ್ಕಿಬಂದ ಕ್ಷೀರಸಾಗರದ ಅಲೆಗಳೊ, ಮನ್ಮಥನ ಕೀರ್ತಿಯ ಅಂಶು ಜಾಲವೋ, ತನ್ನ ಕಾಂತನಾದ ಚಂದ್ರನನ್ನು ನೋಡಿ ರಾತ್ರಿವಧುವು ನಾಚಿ ಬಿಳ್ಪೇರಿದಳೊ, ಕಾಮನು ಭೂಮಂಡಲದ ಮೇಲೆಲ್ಲ ಮಂಕು

ಬೂದಿಯೆನ್ನು ಚೆಲ್ಲಿದನೋ, (ನಿಜವಾಗಿ) ವರ್ಣಿಸಲು ಅಸದಳವೆನ್ನುವಂತೆ ಚಂದ್ರಿಕೆಯು ಎಲ್ಲ ದಿಕ್ಕುಗಳಲ್ಲಿಯೂ ಹಬ್ಬಿತು.]

॥ ಕಂದ ॥

ಇಳೆಯೆಲ್ಲಮು ನಿರುಳೆಂಬಾ ।
ನಳಿನಾಂಬಕೆ ನೂತ್ನ ಚಂದನದ ರಸದಿಂದಂ ॥
ತೊಳೆದೆಳ ಮಿಂಚಿನ ತಿರುಳಿಂ ।
ಬೆಳಗಿದುದೆನಳೆಸೆದುದಚ್ಚ ಪೊಸಬೆಳ್ದಿಂಗಳ್ ॥

(ಶೃಂಗಾರ ಸಾರ-೧೦-೩೭.)

[ರಾತ್ರಿಯೆಂಬ ಅಂಗನೆಯು ಇಳೆಯನ್ನೆಲ್ಲ ನೂತನವಾದ ಚಂದನ ಜಲದಿಂದ ತೊಳೆದು, ಎಳಮಿಂಚಿನ ಸಾರದಿಂದ ಉಜ್ಜಿದಳೆಂಬಂತೆ (ತಿಕ್ಕಿಬೆಳಗಿದಳೆಂಬಂತೆ) ಅಚ್ಚ ಬೆಳದಿಂಗಳು ರಮಣೀಯವಾಯಿತು.]

॥ ಸಾಂಗತ್ಯ ॥

ಮಾರನ ಬೇಳ್ವಿಯ ಬೂದಿಯೊ ಮನ್ಮಥ ।
ವೀರನು ಬೀಸಿದ ಬಲೆಯೋ ॥
ನೀರಜಶರನ ಕಠಾರಿಯ ಹೊಳಹೆನೆ ।
ಬೀರಿದ ಶಶಿ ಚಂದ್ರಿಕೆಯು ॥

(ವಿಕ್ರಮ ವಿಲಾಸ-ಕವಿಚರಿತೆ ೨)

[ಅರ್ಥವು ಸ್ಪಷ್ಟವಿದೆ]

॥ ಉತ್ಪಲ ಮಾಲಾ ॥

ಅಂಬುಜ ಪೀಠನೆಂದೆಸಿಪ ಜೋಯಿಸನಾ ರಜನೀ ಪ್ರಮಾಣಮಂ ।
ತಾಂ ಬಗೆದೀಕ್ಷಿಸಲ್ ಗಳಿಗೆ ವಟ್ಟಲನಿಕ್ಕಿದ ಬಟ್ಟಲ್ವೆಪೆ ಕಾ ॥
ಲಂ ಬಡೆದಂದು ನೀರೊಳಿರ ದಾಳ್ವಪೊಲಾಳ್ವುದು ಪಶ್ಚಿಮಾಬ್ಧಿಯೊಳ್ ।
ತಂಬೆಳಗೊಂದೆ ಜೋಡೆ ನಲಿದಾಡೆ ಸಮುಜ್ಜ್ವಲ ಚಂದ್ರಮಂಡಲಂ ॥

(ಉದ್ಭಟ ಕಾವ್ಯ-..೧೪)

[ಬ್ರಹ್ಮನೆಂಬ ಜೋಯಿಸನು ರಾತ್ರಿಯ ಪ್ರಮಾಣವನ್ನು ಅಳೆದು ನೋಡೆ ಬೇಕೆಂದು ಇಟ್ಟ ಗಳಿಗೆ ಬಟ್ಟಲವು ವೇಳೆಯು ಮುಗಿದೊಡನೆ ನೀರಲ್ಲಿ ಮುಳುಗುವಂತೆ ಉಜ್ಜ್ವಲವಾದ ಚಂದ್ರ ಮಂಡಲವು (ತಣ್ಬೆಳಗು ತಲೆದೋರಿರಲು, ಜಾರೆಯರು ನಲಿದಾಡುತ್ತಿರಲು) ಪಶ್ಚಿಮ ಸಮುದ್ರದಲ್ಲಿ ಮುಳುಗಿತು.]

ಚಂದ್ರನು ಮುಳುಗಿದನಾದುದರಿಂದ ಜಾರೆಯರಿಗೆ ಮನೆಗೆ ಹೋಗಲನುಕೂಲವಾಗಲು ಅವರು ನಲಿದಾಡಿದರು. ಚಂದ್ರಸೂರ್ಯರು ಕಾಲಕರ್ತೃಗಳಾದುದರಿಂದ ಇಲ್ಲಿ ಚಂದ್ರನಿಗೆ ಗಳಿಗೆ ಬಟ್ಟಲಿನ ಉಪಮೆಯು ಒಪ್ಪುತ್ತದೆ.

॥ ವಾರ್ಧಿಕ ಷಟ್ಪದಿ ॥

ನಲ್ಲನೇಳುವ ಮುನ್ನ ಧಾರುಣಿಗೆ ಸೀರ್ಪನಿಯ ।
ತಿಳಿಯ ತಳಿಯನು ಹಾಕಿ ಮೂಡಲಿನ ಹೊಸಲಿಂಗೆ ।
ಕೆಮ್ಮಣ್ಣ ಸಾರಣೆಯ ಪೊಂಬಣ್ಣ ಕಾರಣೆಯನಾವ ಸತಿಮಾಡುತಿಹಳೋ ।
ಹಾಲ್ಬೆಳ್ಳಿಯೊಲು ಬೆಳಗುತಿಹ ಬೆಳ್ಳಿಮೂಗುತಿಯು ।
ಹಣೆತುಂಬ ಕುಂಕುಮವು ಗಲ್ಲದಲ್ಲರಸಿಣವು ।
ಈ ಬಗೆಯ ಕರದಿ ಹಾಲ್ಬೆನೆ ತಾಳ್ದಮುತ್ತೈದೆ ಬೆಳವಲೊಕ್ಕಲಿತಿಯಿವಳೋ ॥

("ರಾಮಚಂದ್ರ"-- ಜಯಕರ್ನಾಟಕ)

[ನಲ್ಲನೇಳುವುದಕ್ಕೆ ಮೊದಲು ಭೂಮಿಗೆ ತುಂತುರ್ವನಿಗಳ ತಿಳಿಯ ತಳಿಯನ್ನು ಹಾಕಿ, ಪೂರ್ವದಿಕ್ಕೆಂಬ ಹೊಸತಿಲನ್ನು ಕೆಮ್ಮಣ್ಣಿನಿಂದ ಸಾರಿಸಿ ಹೊಂಬಣ್ಣದ ಪಟ್ಟೆಗಳಿಂದ ಆವ ಸತಿಯು ಶೃಂಗರಿಸುತ್ತಿರುವಳು? (ಉಷಾದೇವಿಯು.) ಹಾಲ್ಬೆಳ್ಳಿಯಂತೆ ಮನೋಹರವಾಗಿರುವ ಬೆಳ್ಳಿಯ ಮೂಗುತಿಯನ್ನು ಇಟ್ಟುಕೊಂಡು, ಹಣೆ ತುಂಬ ಕುಂಕುಮವನು ಹಚ್ಚಿಕೊಂಡು, ಗಲ್ಲದಲ್ಲಿ ಅರಿಸಿಣವನ್ನು ತಳೆದು, ಕೈಯ್ಯಲ್ಲಿ ಹಾಲ್ಬೆನೆಯನ್ನು ತಾಳ್ದ (ಬರುವ) ಬೆಳವಲ ಸೀಮೆಯ ಒಕ್ಕಲಿತಿಯೋ ಇವಳು?]

ರಾಮಚಂದ್ರನು ಉಷಾ ದೇವಿಯನ್ನು ಗೃಹ ಕಾರ್ಯದಕ್ಷಳಾದ ಸತಿಗೆ ಹೋಲಿಸಿದ್ದಾನೆ. ವೇದ ಕಾಲದ ಋಷಿಗಳು ಉಷಾದೇವಿಯ ಆಗಮನವನ್ನು "ಆ ಘಾ ಯೋಷೇವ ಸೂನರ್ಯುಷಾಯಾತಿ ಪ್ರಭುಂಜತೀ" ಉಷಾದೇವಿಯು ಎಲ್ಲವನ್ನು ಎಚ್ಚರಿಸುತ್ತ ಗೃಹಕೃತ್ಯ ದಕ್ಷಳಾದ ಗೃಹಿಣಿಯಂತೆ ಪ್ರತಿದಿವಸವಲ್ಲಿ ಬರುತ್ತಾಳೆ) ಎಂದು ವರ್ಣಿಸಿದ್ದಾರೆ. ಗೃಹಿಣಿಯು ತನ್ನ ಪತಿಯು ಏಳುವುದಕ್ಕಿಂತ ಮೊದಲು ಎದ್ದು ಕಸವನುಡುಗಿ ಅಂಗಣಕ್ಕೆ ತಿಳಿನೀರಿನ ತಳಿಯನ್ನು ಹಾಕಿ ಹೊಸತಿಲನ್ನು ಕುಂಕುಮರಂಗವಲ್ಲಿಗಳಿಂದ ಅಲಂಕರಿಸುತ್ತಾಳೆ. ಅದರಂತೆಯೇ (ನಮ್ಮ ರಾಮಚಂದ್ರನ) ಉಷಾ ದೇವಿಯು ತನ್ನ

ಚೆಲುವೆಯಾದ ಸೂರ್ಯನೇಳುವುದಕ್ಕೆ ಮೊದಲು ಎದ್ದು ತಮವೆಂಬ ಕಸವೆನುಡುಗಿ, ಆಗಸವೆಂಬ ಅಂಗಣಕ್ಕೆ ಇಬ್ಬನಿಯ ತಿಳಿಯ ತಳಿಯನು ಹಾಕಿ ಪೂರ್ವದಿಶೆಯೆಂಬ ಹೊಸತಿಲವನ್ನು ಸಂಧ್ಯಾರಾಗವೆಂಬ ಕೆಮ್ಮಣ್ಣಿನಿಂದ ಸಾರಿಸಿ ಹೊಂಬಣ್ಣದ ಕಿರಣಗಳೆಂಬ ಪಟ್ಟಿಗಳಿಂದ ಅಲಂಕರಿಸುತ್ತಾಳೆ «ಸೂರ್ಯೋ ದೇವಿಮುಷಸಂ ರೋಚಮಾನಾಂ ಮರ್ಯೋ ನಯೋಷಾಂ ಅಭ್ಯೇತಿ ಪಶ್ಚಾತ್» (ತರುಣಿಯ ಹಿಂದೆ ಪುರುಷನು ಹೋಗುವಂತೆ ಸೂರ್ಯದೇವನು ಅತ್ಯಂತ ತೇಜಸ್ವಿಯಾದ ಉಷಾದೇವಿಯ ಹಿಂದೆ ಬರುತ್ತಾನೆ) ಎಂಬ ವಾಕ್ಯದಿಂದಲೇ ಸೂರ್ಯನು ಪತಿಯೆಂದೂ, ಉಷೆಯು ಪತ್ನಿಯೆಂದೂ ಕಲ್ಪನೆಯು ರೂಢವಾಗಿದೆ.

ರಾಮಚಂದ್ರನು ಉಷೆಯನ್ನು ಆ ಸೋಲಿ ಮಾಗುತಿಯನ್ನಿಟ್ಟು, ಹಣೆತುಂಬ ಕುಂಕುಮವನ್ನು ಹಚ್ಚಿಕೊಂಡು ಗಲ್ಲದಲ್ಲಿ ಅರಿಸಿಣವನ್ನು ತಳೆದು ಕೈಯ್ಯಲ್ಲಿ ಹಾಲ್ಬೆನೆಯನ್ನು ತಾಳಿಬರುವ ಸೌಭಾಗ್ಯವತಿಯಾದ ಬೆಳವಲ ನಾಡಿನ ಒಕ್ಕಲತಿಗೆ ಹೋಲಿಸಿ ತನ್ನ ಪ್ರತಿಭಾಶಕ್ತಿಯನ್ನು ತೋರಿಸಿಕೊಂಡಿದ್ದಾನೆ. ಮೂಡಲಿನ ಕೆಂಪೇ ಉಷಾದೇವಿಯ ಹಣೆಯ ಕುಂಕುಮವು. ಆ ಕೆಂಪಿನ ಇಕ್ಕೆಲದಲ್ಲಿಯ ಹೊಂಬಣ್ಣದ ಕಿರಣಗಳೇ ಅವಳ ಗಲ್ಲದಲ್ಲಿಯ ಅರಿಸಿಣವು. ಮುಂಜಾವಿನಲ್ಲಿ ಮೂಡುವ ಬೆಳ್ಳಿಯೇ (ಬೆಳ್ಳೀ ಚಿಕ್ಕೆಯೇ ಶುಕ್ರನೇ) ಮೂಗುತಿಯು; ಚಿಕ್ಕೆಗಳೆಂಬ ಹಾಲುಗಾಳುಗಳಿಂದ ತುಂಬಿದ ತಾರಾಗುಚ್ಛವೇ ತೆನೆಯು. ಬೆಳವಲ ನಾಡಿನ ಒಕ್ಕಲಿತಿಯು ಆ ನಾಡಿಗೆ ಜೀವನಾಧಾರಳು. ಅವಳೇ ಸೌಭಾಗ್ಯವನ್ನೂ, ಐಶ್ವರ್ಯವನ್ನೂ, ಸಂಪತ್ತನ್ನೂ ತರುವವಳು. ಏಕೆಂದರೆ ಕೃಷಿಕರ್ಮವೇ ಈ ನಾಡಿನ ಮುಖ್ಯೋದ್ಯೋಗವು. ಇವಳನ್ನು ಜೀವನಾಧಿಷ್ಠಾತ್ರಿಯೆಂದೇ ಹೇಳಬಹುದು ‘ ಸಹ ವಾಮೇನ ನ ಉಷೋ ವ್ಯುಚ್ಛಾ ದುಹಿತರ್ದಿವಃ। ಸಹ ದ್ಯುಮ್ನೇನ ಬೃಹತಾ ವಿಭಾವರಿ ರಾಯಾದೇವಿ ದಾಸ್ವತೀ॥ ’’ (ದ್ಯುಲೋಕ ಪುತ್ರಿಯೇ, ಉಷೆಯೇ, ನಮ್ಮ ಸಲುವಾಗಿ ಧನವನ್ನು ತೆಗೆದುಕೊಂಡು ಪ್ರಕಾಶಿತಳಾಗು. ಎಲೈ ದೈದೀಪ್ಯಮಾನಳಾದ ದೇವತೆಯೇ, ನೀನು ಉದಾರಭಾವದಿಂದ ವಿಪುಲ ಸಂಪತ್ತಿಯನ್ನೂ ವೈಭವವನ್ನೂ ತೆಗೆದುಕೊಂಡು ಪ್ರಕಾಶಿತಳಾಗು) « ಆವಹಂತಿ ಪೋಷ್ಯಾ ವಾರ್ಯಾಣಿ ಚಿತ್ರಂಕೇತುಂ ಕೃಣತೇ ಚೇಕಿತಾನಾ ’’ (ಹಿತಕಾರಕವಾದ ಧನದಿಂದ ಕೂಡಿದ ಸರ್ವಸಾಕ್ಷಿಯಾದ ಉಷಾ ದೇವಿಯು ಪ್ರಕಾಶವನ್ನುಂಟು ಮಾಡಿದ್ದಾಳೆ.) « ವಿಶ್ವಸ್ಯ ಹಿ ಪ್ರಾಣನಂ ಜೀವನಂ ತ್ವೇ ವಿ ಯದುಚ್ಛಸಿ ಸೂನರಿ ’’ (ಎಲೈ ಉಷಾದೇವಿಯೇ, ಎಲ್ಲ ಪ್ರಾಣಿಮಾತ್ರಕ್ಕೂ ನೀನೇ ಜೀವನಾಧಾರಳು) ‘ ಸಂ ನೋ ರಾಯಾ ಬೃಹತಾ ವಿಶ್ವಪೇಶಸಾ ಮಿಮಿಕ್ಷ್ವಾ ಸಮಿಳಾಭಿರಾ। ಸಂ ದ್ಯುಮ್ನೇನ ವಿಶ್ವತುರೋಷೋ ಮಹಿ ಸಂ ವಾಜೈರ್ವಾಜಿನೀವತಿ॥ ’’ (ಎಲೈ ಸಾಮರ್ಥ್ಯವತಿಯಾದ ಉಷಾದೇವಿಯೇ, ನಮ್ಮನ್ನು ಎಲ್ಲ ಪ್ರಕಾರದ ಸಂಪತ್ತಿಯಿಂದಲೂ, ಸಮೃದ್ಧಿಯಿಂದಲೂ, ದಿಗಂತ ವಿಶ್ರಾಂತ ಕೀರ್ತಿಯಿಂದಲೂ ಪರಿಪೂರ್ಣರನ್ನಾಗಿ ಮಾಡು.) ಎಂದು ವೇದಕಾಲೀನರಾದ ಋಷಿಗಳು ಉಷಾದೇವಿಯನ್ನು ಸ್ತುತಿಸಿದ್ದಾರೆ. ಉಷಾದೇವಿಯು ಯಜ್ಞಕ್ಕೆ ಆಧಾರಳು. ಯಜ್ಞದಿಂದಲೇ ಜಗತ್ತಿನ ಸಂಸ್ಥಿತಿಯು. ಹೀಗಿರುವುದರಿಂದ ಉಷಾದೇವಿಯನ್ನು ಎಷ್ಟು ಸ್ತುತಿಸಿದರೂ ಸ್ವಲ್ಪವೇ. ಉಷಾದೇವಿಯ ಮಹತ್ವವು ಋಷಿಗಳಿಗಿದ್ದಂತೆ ಬೆಳವಲ ನಾಡಿನವರಿಗೆ ಆ ನಾಡಿನ ಒಕ್ಕಲತಿಯ ಮಹತ್ವವಿರುತ್ತದೆ. ಇವಳು ಉಷಾದೇವಿಯಂತೆ ಐಶ್ವರ್ಯವನ್ನೂ ಸಂಪತ್ತನ್ನೂ ತರುವವಳು.

« ಭಾಸ್ವತೀ ನೇತ್ರೀ ಸೂನೃತಾನಾಂ ’’ (ಮೃದು ವಚನವನ್ನು ನುಡಿಯಲು ಸ್ಫೂರ್ತಿಯನ್ನುಂಟು ಮಾಡುವವಳು) « ಸ್ತನ್ವಾನಾ ಸೂನೃತಾ ಈರಯಂತೀ ಸುಮಂಗಲೀ ’’ (ಮಂಗಳಕರವಾದ ಮಧುರ ವಚನಗಳನ್ನು ನುಡಿಸುವಂತಹ ಸೌಭಾಗ್ಯದಾತ್ರಿಯು) ಎಂದು ಉಷಾದೇವಿಯನ್ನು ವೇದಗಳಲ್ಲಿ ಋಷಿಗಳು ಸ್ತುತಿಸಿದ್ದಾರೆ. ಉಷಾದೇವಿಯ ಸಾಮ್ರಾಜ್ಯವನ್ನು ವಿಹರಿಸಿ ಸ್ಫೂರ್ತಿಗೊಂಡ ನಮ್ಮ ರಾಮಚಂದ್ರನ ಅಸಾಧಾರಣವಾದ ಕಾವ್ಯಸೃಷ್ಟಿಯು ನಮ್ಮನ್ನೆಲ್ಲ ರಸ ಮುಗ್ಧರನ್ನಾಗಿ ಮಾಡಿ ಬಿಟ್ಟಿದೆ.

ಕಾವ್ಯರಸನಿಷ್ಯಂದದಲ್ಲಿ ಪ್ರಾಸವು ಎಲ್ಲಿಯೋ ಅಡಗಿ ಹೋಗಿದೆ. ಇಂತಹ ರಸಭರಿತ ಕಾವ್ಯಗಳನ್ನು ಪ್ರಾಸವಿಲ್ಲದೆ ರಚಿಸಿ ಕನ್ನಡ ಕವಿತೆಗೆ ನೂತನ ಮಾರ್ಗವನ್ನು ತೋರಿಸಿ ಕೊಟ್ಟರೆ ಒಳ್ಳೆಯದೆಂಬು ನಮ್ಮ ಅಭಿಪ್ರಾಯವು.

॥ ಕಂದ ॥

ಕುಶಲಮೆ ನಿಮಗೆಂಬಂತಿರೆ।
ಕುಶೇಶಯಂಗಳ್ಗೆ ನೀಡೆ ಕರಮಂ ಮಿತ್ರಂ॥
ಕುಶಲಮೆಮಗೀಗಳೆಂಬಂ।
ತೆ ಶೋಭಿಸಿತ್ತಳಿರವಂಗಳಿಂ ಕಮಳವನಂ॥

(ಅಜಿತ ತೀರ್ಥಕರ ಪುರಾಣ ತಿಲಕ–೬–೩೭.)

[ಸೂರ್ಯನು "ನಿಮಗೆ ಕುಶಲವಷ್ಟೇ?" ಎಂದು ಕೇಳುವವನಂತೆ ಕಮಲಗಳಿಗೆ ಕರವನ್ನು (ಕಿರಣವನ್ನು) ನೀಡಲು, ಕಮಲಗಳು "ಈಗ ನಮಗೆ ಕುಶಲವು" ಎಂದು ಭ್ರಮರ ಧ್ವನಿಯಿಂದ ಉತ್ತರವನ್ನಿತ್ತವೆಂಬಂತೆ ಶೋಭಿಸಿದುವು.]

ಮಿತ್ರನು ಕೆಲಕಾಲ ಇಷ್ಟಜನರನ್ನಗಲಿ ದೂರದಲ್ಲಿದ್ದು, ಅವರ ದರ್ಶನವಾದೊಡನೆ ಪ್ರೇಮದಿಂದ ಕೈನೀಡಿ ಕುಶಲ ಪ್ರಶ್ನವನ್ನು ಕೇಳಿ ನಲಿದಾಡುವಂತೆ ಕಮಲಮಿತ್ರನಾದ ಸೂರ್ಯನು ರಾತ್ರಿಯನ್ನು ಬೇರೊಂದೆಡೆಯಲ್ಲಿ ಕಳೆದು, ಪ್ರಭಾತ ಕಾಲದಲ್ಲಿ ಬಂದು ತನ್ನ ಅಗಲುವಿಕೆಯಿಂದ ಕೊರಗಿದ ಕಮಲ ವನಕ್ಕೆ ಕುಶಲ ಪ್ರಶ್ನವನ್ನು ಕೇಳುವಂತೆ ಕೈನೀಡಿದನು. (ಕಿರಣಗಳನ್ನು ಚಲ್ಲಿದನು.)

ಮಿತ್ರಾಗಮನದಿಂದ ಸರ್ವರಿಗೂ ಸುಖವಾಗುತ್ತದೆ. ಪ್ರಾತಃಕಾಲದಲ್ಲಿ "ಸುಖಶಯನವಾಯಿತೋ?" ಎಂದು ಕೇಳುವ ರೂಢಿಯುಂಟು. ಕಾಲಿದಾಸನು ಇದರ ಕಾರಣವನ್ನು ಹೀಗೆ ಹೇಳುತ್ತಾನೆ:—— ....ನಿನ್ನ ಕ್ಷೇಮಂಗೇಳ್ವ ನಗಲಿಯುಂ। ಸುಲಭಾಪದಂದಾಳ್ವ ಪ್ರಾಣಿಗಿದು ಪ್ರಥಮದೊಳ್ ಕೇಳುತಿಹ ಸುಪ್ರಶ್ನೆಯು॥ (ಮೇಘದೂತ)

ಕುಶೇಶಯ=ಕಮಲ (ಕುಶೇ=ನೀರಿನಲ್ಲಿ, ಶೇತೇ=ವಾಸಿಸುತ್ತದೆ, ಇತಿ=ಎಂದು, ಕುಶೇಶಯ. ಅಲುಕ್ ಸಮಾಸ. ಕುಶಂ ಅಪ್ಸು ಚ=ಕುಶವೆಂಬುದು ನೀರೆಂಬರ್ಥವಲ್ಲಿ)

॥ ಕಂದ ॥

ಎನೆಗಾಗದ ವನ ರುಹನುಂ ।
ಮನೆ ಮಾಡಿದಳೆಂದು ಕಂಡು ಮುಳಿವಂ ಶಶಿಯೆಂ ॥
ದೆನುತಿರುಳೆ ಮುಚ್ಚಿಸಿರಿಯಾ ।
ತನ ಭಾವದೆ ಬಿಚ್ಚಿದಂತಿರಲರ್ದುದು ಕಮಲಂ ॥

(ರಾಜಶೇಖರ ವಿಳಾಸ—೧೨-೧೯)

[ತನಗೆ ಶತ್ರುವಾದ ಕಮಲದಲ್ಲಿ ಮನೆ ಮಾಡಿದಳೆಂದು ಚಂದ್ರನು ಸಿಟ್ಟಾಗುವನೆಂದು ಲಕ್ಷ್ಮಿಯು ರಾತ್ರಿಯಲ್ಲಿ (ತನ್ನ ಮನೆಯಾದ ಕಮಲದ ಬಾಗಿಲನ್ನು) ಮುಚ್ಚಿಕೊಂಡಿದ್ದು, ಅವನು ಹೋದೊಡನೆ ಆದನ್ನು ತೆರೆದಳೆಂಬಂತೆ ಕಮಲವು ಅರಳಿತು.]

ಕಮಲವು ಲಕ್ಷ್ಮಿಯವಾಸಸ್ಥಾನವು. ಇವಳು ಚಂದ್ರನ ಒಡಹುಟ್ಟಿದ ತಂಗಿಯು. ಚಂದ್ರನು ಕಮಲ ವೈರಿಯು. ತನ್ನ ಶತ್ರುವಾದ ಕಮಲದಲ್ಲಿ ತನ್ನ ತಂಗಿಯಾದ ಲಕ್ಷ್ಮಿಯು ವಾಸಿಸುವುದು ಚಂದ್ರನಿಗೆ ರುಚಿಸದಿರುವುದು ಆಶ್ಚರ್ಯಕರವಲ್ಲ. ಆದುದರಿಂದಲೇ ಚಂದ್ರನು ಇರುವ ವರೆಗೆ ಕಮಲದಲ್ಲಿಯ ಲಕ್ಷ್ಮಿಯು ತನ್ನ ಅಣ್ಣನಿಗೆ ಸಿಟ್ಟು ಬರಬಾರದೆಂದು ಕಮಲದ ಬಾಗಿಲವನ್ನು ತೆರೆಯಲಿಲ್ಲ. (ಕಮಲವು ಮುಚ್ಚಿಕೊಂಡಿದ್ದಿತು.) ಚಂದ್ರನು ಅಸ್ತನಾದೊಡನೆ ಲಕ್ಷ್ಮಿಯು ತನ್ನ ಮನೆಯು ಬಾಗಿಲನ್ನು ತೆರೆದಿಟ್ಟಳು. (ಕಮಲವು ವಿಕಸಿತವಾಯಿತು.)

॥ ಉತ್ಪಲ ಮಾಲೆ ॥

ಕೇಳ್ವನಜಾನನೇ ಶಫರ ಲೋಚನೆ ಪದ್ಮಿನಿ ಪದ್ಮ ಬಾಂಧವಂ ।
ಬಳ್ವಳ ನೀಡಿದಂ ಕರ ಸಹಸ್ರಮನೆಂದು ಕಳಸ್ವನಂ ಮನಂ ॥
ಗೊಳ್ವಿನೆಗಂ ತಳತ್ತಳಿಸಿ ಸಂತಸವಾತಿನ ಪೂರ್ಣಪಾತ್ರಮಂ ।
ಕೊಳ್ವವೊಲೀಳ್ದು ಕೊಂಡುವಳಿಗಳ್ ಸುಮನೋ ಮಕರಂದಗಂಧವಂ ॥

(ಅಜಿತನಾಥ ಪುರಾಣ—೬-೬೯)

[“ ಕಮಲ ಮುಖಿಯೂ, ಮೀನಾಕ್ಷಿಯೂ ಆದ ಪದ್ಮಿನಿಯೇ ಕೇಳು. ಸೂರ್ಯನು ಬಂದು ರಭಸದಿಂದ ಸಾವಿರಾರು ಕರಗಳನ್ನು ಪ್ರೇಮಪೂರ್ವಕವಾಗಿ ನೀಡಿರುವನೆಂ”ದು ತಿಳುಹಿಸುವಂತೆ ಭ್ರಮರಗಳು ಮನೋಹರವಾಗಿ ಮಧುರ

ಝೇಂಕಾರವನ್ನು ಮಾಡಿ ಸಂತೋಷ ವಾರ್ತೆಯನ್ನು ಹೇಳುವುದಕ್ಕಾಗಿ (ಪದ್ಮಿನಿಯಿಂದ) ಪಾರಿತೋಷಕವನ್ನು ಸೆಳೆಯುವಂತೆ ಪುಷ್ಪದಲ್ಲಿಯ ಮಕರಂದವನ್ನು ಹೀರಿದುವು.]

ಪದ್ಮಿನಿಯು ಪ್ರಕೃತಿಪೇಲವಳು, ವಿರಹದಿಂದ ಕೊರಗಿದವಳು. ವಿರಹಾರ್ತಳಾದ ನಾಯಕಿಗೆ ತನ್ನ ನಾಯಕನು ಬಂದನೆಂಬ ವಾರ್ತೆಯು ಸಂತೋಷಕರವಾಗಿ ಪರಿಣಮಿಸುವುದು. ಅವಳ ಅಂತಃಕರಣದಲ್ಲಿ ಹರ್ಷ, ಕೌತುಕ, ಔತ್ಸುಕ್ಯ ಮೊದಲಾದ ಭಾವಗಳು ಜನಿಸುವುವು. ಈ ಭಾವಗಳೆಲ್ಲ ಸ್ನಿಗ್ಧ ಮುಗ್ಧ ಮಧುರವಾದ ನಸುನಗೆಗಳಿಂದ ವ್ಯಕ್ತವಾಗುವುವು. ಭ್ರಮರಗಳು "ಸೂರ್ಯನು ಬಂದನೆಂ"ದು ಪದ್ಮಿನಿಗೆ ಹೇಳಿದೊಡನೆ ಅವಳ ಅಂತಃಕರಣವು ಹರ್ಷೌತ್ಸುಕ್ಯದಿಂದ ತರಲಿತವಾಗಲು, ಅವಳು "ಎಲ್ಲಿ-ಎಲ್ಲಿ?" ಎಂದು ಕೌತುಕದಿಂದ ಕಟಾಕ್ಷ ವಿಲಾಸವನ್ನು (ಮೀನಗಳೇ ಅವಳ ಕಟಾಕ್ಷಗಳು) ವಿಸ್ತರಿಸಲು, ಭ್ರಮರಗಳು "ಬಂದಿರುವನೆಂಬುದಿಷ್ಟೇ ಅಲ್ಲ. ಅದೋ ನೋಡು-ಕೈನೀಡಿರುವನು. ಈ ಸಂಭ್ರಮದಲ್ಲಿ ನಮಗೆ ಪಾರಿತೋಷಕವು ಬೇಡವೇ?" ಎಂದು ಅವಳ ಹೂ ಬಂಡನ್ನು ಹರಣ ಮಾಡಿದುವು.

ಮೀನಗಳು ಚಪಲವಿರುವುವು; ಲಲನೆಯರ ಕಟಾಕ್ಷಗಳಿಗೆ ಚಾಂಚಲ್ಯದಿಂದ ವಿಲಾಸವುಂಟಾಗುವುದು ಆದುದರಿಂದ ಸ್ತ್ರೀಯರಿಗೆ ಶಫರಲೋಚನೆ, ಮೀನಾಕ್ಷಿ ಎಂಬ ಹೆಸರುಗಳು ಬಂದಿರುತ್ತವೆ. ಇಲ್ಲಿ ಪದ್ಮಿನಿಯೆಂಬ ಸ್ತ್ರೀಗೆ ಶಫರಗಳೇ ಲೋಚನಗಳು "ನಿನ್ನ ನೀಕ್ಷಿಸಲು ಮೇಲಕ್ಕೆ ಪಾರುವ ತರುಣಿಯ ವಾಮನೇತ್ರಂ......ಶಫರ ಚಲನವಲನಂಗಳಂ ಕಂಪಿಸುತಿ ಚೆಲ್ವುವಡೆವ ನೈವಿಲಿಯಂತೆ ರಾಜಿಸುವುದು..——(ಮೇಘದೂತ)"

ಪೂರ್ಣಪಾತ್ರಃ---ಉತ್ಸವೇಷು ಸುಹೃದ್ಭಿರ್ಯತ್ ಬಲಾದಾಕೃಷ್ಯ ಗೃಹ್ಯತೇ। ವಸ್ತ್ರಂ ಮಾಲ್ಯಂಚ ತತ್ಪೂರ್ಣಪಾತ್ರಂ ಪೂರ್ಣಾನಕಂ ಚ ತತ್।' ಉತ್ಸವ ಕಾಲದಲ್ಲಿ ಗೆಳೆಯರು ವಸ್ತ್ರ, ಮಾಲೆ ಮೊದಲಾದುವುಗಳನ್ನು ಬಲಾತ್ಕಾರದಿಂದ ಸೆಳೆದುಕೊಳ್ಳುವುದಕ್ಕೆ ಪೂರ್ಣ ಪಾತ್ರ ಇಲ್ಲವೆ ಪೂರ್ಣಾನಕ ಎಂಬ ಹೆಸರು.)

ನಂದನ ಜನೋತ್ಸವದೊಳ ।
ಎಂದಂ ಪರಿತಂದು ಪೂರ್ಣಪಾತ್ರಮನತ್ತಾ ॥
ನಂದವೊದವಲ್ಕೆ ಪರಿಜನ ।
ಮೆಂದೆಳೆಕುಳಿಗೊಳ್ವ ನ್ಯಪು ಸಮನಿಸಿದಪುದೋ ॥

(ಕಾದಂಬರಿ—ಪೂರ್ವಭಾಗ.)

[ಪೂರ್ಣಪಾತ್ರ=ಉಡುಗೊರೆ]

॥ ಕಂದ ॥

ಕನಕ ಕರಂಡಕದಿಂದಂ।
ದಿನ ಲಕ್ಷ್ಮಿ ಸರಾಗಮಿಂದ್ರ ನೀಲದ ಸರಮಂ ॥
ದಿನಪಂಗೀಯಲ್ ತೆಗೆದಪ।
ಳೆನೆ ಮಧುಕರ ಮಾಲೆ ನಳಿನದಿಂ ನೆಗೆದೆಸೆಗುಂ ॥

ರಾಜಶೇಖರ ವಿಲಾಸ ೧೨-೨೧

[ದಿವಸ ಲಕ್ಷ್ಮಿಯು ದಿನ ಮಣಿಯಾದ ಸೂರ್ಯನಿಗೆ ಪ್ರೇಮದಿಂದ ಕೊಡಲಿಕ್ಕೆಂದು ಬಂಗಾರದ ಕರಡಿಗೆಯೊಳಗಿಂದ ತೆಗೆದ ಇಂದ್ರ ನೀಲ ಮಣಿ ಮಾಲೆಯೆಂಬಂತೆ ಭ್ರಮರ ರಾಜಿಯು ಕಮಲಗಳಿಂದ ನೆಗೆದು ಶೋಭಿಸಿತು] ಭ್ರಮರಗಳು ಒಂದರ ಹಿಂದೊಂದು ಕಮಲೋದರದಿಂದ ಕ್ರಮದಿಂದ ನೆಗೆಯಲು ಇಂದ್ರ ನೀಲ ಮಣಿ ಮಾಲೆಯುಂತೆ ಕಾಣುವುದು ಸ್ವಾಭಾವಿಕ.

ತಿಮ್ಮ ಕವಿಯು ಮುಂದಣ ಪದ್ಯವನ್ನು ಇದರೊಡನೆ ಹೋಲಿಸಿ ನೋಡತಕ್ಕುದು. "ಮಿಸುನಿಯ ಕರಡಗೆಯೊಳ್ ಬಿಂ। ಬಿಸುತಿರ್ಪಾಮರೇಂದ್ರ ನೀಲ ಸರವಂ ಭರದಿಂ॥ ಬಿಸಜಿನಿ ಪತಿಗೀವಂತೆವೊ। ಲೆಸೆಗುಂ ವಿಕಚಾಬ್ಜದಿಂದೆ ನೆಗೆವಳಿವಿಸರಂ ॥" (ಯಾದವಗಿರಿ ಮಾಹಾತ್ಮ್ಯ—ಕವಿಚರಿತೆ. ೨.)

॥ ಉತ್ಪಲ ಮಾಲಾ ॥

ವಾಸವ ದಿಕ್ತಟಂ ಸಮೆದ ಮೂಷೆ ತಮಂ ಸುರಿದಿರ್ದಲಬ್ಜ ಸಂ।
ವಾಸಿ ಸಮಿರಾರ ನೇರಣಿಗನಾಗೆ ನಿದಾಘದ ದೀಪವರ್ತಿಯೊಳ್ ॥
ಕಾಸೆ ತೆರಳ್ದ ಪಿಂಜರಿಯವೋಲ್ ಕಿಸು ಸಂಜೆ ತೆರಳ್ವಿನಂ ಪಳಂ।
ಗಾಸಿನ ಪೊನ್ನ ಗಂಟಿಯವೊಲೊಪ್ಪಿದುದುದ್ಗತ ಭಾನು ಮಂಡಲಂ ॥

(ಅಜಿತನಾಥ ಪುರಾಣ—೬—೭೦.)

(ಪಾಠಾಂತರ—ಪೊನ್ನ ಗಟ್ಟಿ—ಶ್ರೀ. ಆರ್. ನರಸಿಂಹಾಚಾರ್ಯರು.)

[ಪೂರ್ವ ದಿಶೆಯೇ ಮೂಸೆಯು. ಕತ್ತಲೆಯೇ ಸುರಿದ ಇದ್ದಲು. ಕಮಲ ವನಗಳಲ್ಲಿ ಸುಳಿದು ಬರುವ ವಾಯುವೇ ಏರಣಿಗನು (ಅಕ್ಕಸಾಲಿಗನು) ಹೀಗಿರಲಾಗಿ ಬೇಸಿಗೆಯೆಂಬ ಅಗ್ನಿಯಲ್ಲಿ ಕಾಸಲು, ಹರಿದ ಬಂಗಾರ ಬಣ್ಣದ ಪರಿಯಂತೆ ಮುಂಜಾವಿನ ಕೆಂಬೆಳಗು ಹಾರಲು, ಶುದ್ಧ ಕಾಂತಿಯಿಂದೊಪ್ಪುವ ಬಂಗಾರದ ಗಟ್ಟಿಯಂತೆ ಉದಿತವಾದ ಸೂರ್ಯಬಿಂಬವು ಕಂಗೊಳಿಸಿತು.] ಅಕ್ಕಸಾಲಿಗನು ಬಂಗಾರವನ್ನು ಮುಸಿಯಲ್ಲಿಟ್ಟು, ಅಗ್ಗಿಷ್ಟಿಗೆಯಲ್ಲಿರಿಸಿ, ಅದರ

ಮೇಲೆ ಇದ್ದಲುಗಳನ್ನು ಹಾಕಿ ಊದುತ್ತಾನೆ. ಆ ಬಂಗಾರವು ಕರಗುವಾಗ ಅದರ ಮೇಲಣ ಪರೆಯು ಹರಿಯುತ್ತದೆ. ಆಗ ಗಟ್ಟಿಯು ಉಜ್ಜ್ವಲವಾದ ಕಾಂತಿಯಿಂದೊಪ್ಪುತ್ತದೆ.

——— ಎಳ ಹುಲ್ಲು ———

ಮ॥ ಧುರದೊಳ್ ಶಕ್ರನನೊಕ್ಕಲಿಕ್ಕಿ ಸೆರೆ ಕಪ್ಪಂಗೊಂಡ ಪಿಯೂಷಮಂ।
ಭರದಿಂ ಮೀಂಟುವಲಂಪಿನಿಂ ಗರುಡನಂತಶ್ಶುದ್ಧಿಯಂ ಮಾಡಲೆಂ ॥
ದಿರದುಮ್ಮಾರಿಸಿದೊಂದು ಪಿತ್ತರಸಮೆತ್ತಂ ತಳ್ತಪೋಲ್ ಪಚ್ಚನಾ।
ಗಿ ರಸಾವೇಷ್ಟಿತ ಮುಷ್ಟಿಮಾತ್ರದೆಳವುಲ್ಲಲ್ಲಲ್ಲಿ ವಿಭ್ರಾಜಿಕುಂ ॥

(ದೇವಕವಿಯ ಕುಸುಮಾವಳೀ ಕಾವ್ಯ-೨-೪೭.)

[ಯುದ್ಧದಲ್ಲಿ ಇಂದ್ರನನ್ನು ಸೋಲಿಸಿ ಕಾಣಿಕೆಗೊಂಡ ಅಮೃತವನ್ನು ಉತ್ಸಾಹದಿಂದ ಕುಡಿಯಬೇಕೆಂಬ ಉತ್ಕಟ ಪ್ರೇಮದಿಂದ ಗರುಡನು ಅಂತಃ ಶುದ್ಧಿಯನ್ನು ಮಾಡಲೆಳಸಿ ಹೊರಗೆ ಹಾಕಿದ ಪಿತ್ತರಸವೇ ಬಂತೆ ರಸಭರಿತವಾಗಿ ಹಚ್ಚಗಿನ ಎಳೆಗರಿಕೆಯು ಮುಷ್ಟಿಯುದ್ದ ಬೆಳೆದು ಅಲ್ಲಲ್ಲಿ ಶೋಭಿಸುತ್ತಲಿದ್ದಿತು.]

ಕಥಾಭಾಗಃ--ಕದ್ರು-ವಿನತೆಯರು ಅಕ್ಕತಂಗಿಯರು. ಒಂದು ದಿವಸ "ಇಂದ್ರನ ಕುದುರೆಯ ಬಾಲವು ಕರಿದೋ, ಬಿಳಿದೋ?" ಎಂದು ಅವರಿಬ್ಬರಲ್ಲಿ ವಾದ ಹುಟ್ಟಲು, ಕದ್ರುವು ಕಪಟದಿಂದ ವಿನತೆಯನ್ನು ಸೋಲಿಸಿದಳು. ಆದುದರಿಂದ ವಿನತೆಯು ಕದ್ರುವಿನ ದಾಸಿಯಾಗಿ ಸೇವೆಗೆ ನಿಂತಳು. ವಿನತೆಯ ಮಗನಾದ ಗರುಡನು ದೊಡ್ಡವನಾದ ಮೇಲೆ "ಈ ದಾಸ್ಯತ್ವದಿಂದ ಮುಕ್ತರಾಗಲು ಏನು ಉಪಾಯವು?" ಎಂದು ತನ್ನ ತಾಯಿಗೆ ಕೇಳಿದನು. ವಿನತೆಯು ಕದ್ರುವಿಗೆ ಇದೇ ಪ್ರಶ್ನೆ ಮಾಡಲು "ಅಮೃತವನ್ನು ತಂದು ಕೊಟ್ಟರೆ ನೀನು ದಾಸ್ಯದಿಂದ ಮುಕ್ತಳಾಗುವಿ" ಎಂದು ಅವಳು ಹೇಳಿದಳು. ಆದುದರಿಂದ ಗರುಡನು ತನ್ನ ತಾಯಿಯ ಉದ್ಧಾರಕ್ಕಾಗಿ ಇಂದ್ರಲೋಕಕ್ಕೆ ಹೋಗಿ, ಇಂದ್ರಾದಿ ದೇವತೆಗಳನ್ನು ಸೋಲಿಸಿ ಅಮೃತವನ್ನು ತಂದನು.

ಈ ಕಥೆಯನ್ನು ಮುಂದಿಟ್ಟುಕೊಂಡು ಕವಿಯು ಎಳಹುಲ್ಲನ್ನು ವರ್ಣಿಸಿದ್ದಾನೆ. ಗರುಡನು ಅಮೃತವನ್ನು ಕುಡಿಯಲೆಳಸಿ "ಒಳಗೆ ಮಲವಿದ್ದರೆ ಅಹಿತಕರವೆಂದು ಬಗೆದು ವಾಂತಿಯನ್ನು ಮಾಡಿಕೊಂಡನೆಂದೂ, ವಾಂತಿಯಿಂದ ಹೊರಬಿದ್ದ ಪಿತ್ತರಸವು ಹಸುರಿರುವುದರಿಂದ ಹುಲ್ಲುಹಾಗೆ ಕಂಡಿತೆಂದೂ ಕವಿಯು ಹೇಳುತ್ತಾನೆ. ವೈದ್ಯರು ಔಷಧೋಪಚಾರಗಳನ್ನು ಮಾಡುವ ಮೊದಲು ಮಲಶುದ್ಧಿ ಮಾಡುವುದುಂಟು.

—— ಮೇರು ನಗೇಂದ್ರ ——

॥ಕಂ॥ ಶರಧಿ ಸರೋವರಮನಳಂ।
ಕರಿಸಿದ ಧರಣೀ ಸರೋಜ ಕರ್ಣಿಕೆಯೆಂಬಂ॥
ತಿರೆ ಕಪಿಳ ಕಿರಣದಂತಂ।
ಬರಮಂ ಪಜ್ಜಳಿಸಿದತ್ತು ಮೇರು ನಗೇಂದ್ರಂ ॥ ೧೯ ॥

(ವಿಜಾಪುರದ ಶಿಲಾಶಾಸನ.)

[ಸಮುದ್ರವೆಂಬ ಸರೋವರಕ್ಕೆ ಅಲಂಕಾರ ಭೂತವಾದ ಭೂಮಂಡಲವೆಂಬ ಕಮಲದ ಕರ್ಣಿಕೆ (ಕೋಶ) ಯೆಂಬಂತೆ ಮೇರು ಪರ್ವತವು ಹೊಂಬಣ್ಣದ ಕಿರಣಗಳಿಂದ ಆಕಾಶವನ್ನು ಕಾಂತಿಮಯವಾಗಿ ಮಾಡಿತು.]

ಸಪ್ತ ಶರಧಿ ಪರಿವೃತವಾದ ಭೂಮಂಡಲವನ್ನು ಕಮಲದಂತೆಯೂ, ಮೇರು ಪರ್ವತವನ್ನು (ಸುವರ್ಣಾದ್ರಿಯನ್ನು) ಆದರ ಕರ್ಣಿಕೆಯಂತೆಯೂ ವರ್ಣಿಸಿರುವುದು ಒಳ್ಳೇ ಮನೋಹರವಾದುದು.

ವಿಶೇಷಃ — ಈ ಹೊತ್ತಿಗೆಯಲ್ಲಿ * ಹೀಗೆ ನಕ್ಷತ್ರ ಚಿಹ್ನವಿರುವ ಪದ್ಯಗಳಿಗೆ ಟೀಕೆಯನ್ನು ಬರೆದಿರುವ ನಮ್ಮ ಪ್ರಿಯ ಶಿಷ್ಯರಾದ **ಚೆನ್ನಮಲ್ಲಪ್ಪ ಗಲಗಲಿಯವರು** ಬಹಳ ಪರಿಶ್ರಮ ಮಾಡಿ ವಿಜಾಪುರದ ವಸ್ತುಸಂಗ್ರಹಾಲಯದಲ್ಲಿದ್ದ ಶಿಲಾಶಾಸನ ಪದ್ಯಗಳನ್ನು ಸಂಗ್ರಹಿಸಿದ್ದಾರೆ. ಈ ಪದ್ಯಗಳು **ಅಭಿನವ ಪಂಪ ಮಹಾ ಕವಿಯಿಂದ** ರಚಿತವಾದುವುಗಳು. ಇವುಗಳನ್ನೆಲ್ಲ ನಾವು ಕೆಲವು ದಿವಸಗಳಲ್ಲಿಯೇ ವಿಸ್ತಾರವಾದ ವಿಷಯ ವಿವೇಚನೆಯೊಂದಿಗೆ ಅಚ್ಚು ಹಾಕಿಸುವೆವು ಈ ಶಿಲಾ ಶಾಸನವು ಅಭಿನವ ಪಂಪನದೇ ಎಂಬುದು ಕೆಳಗಣ ಪದ್ಯಗಳಿಂದ ಸಿದ್ಧವಾಗುವದುಃ —

ಮ॥ ಪಿರಿದಾಯಾಸದಿನಿನ್ನೆಗಂ ತಳೆದ ಧಾತ್ರೀಭಾರಮಂ ವಿಕ್ರಮಾ।
ಭರಣಂಗೊಪ್ಪಿಸಿ ಬೇಳ್ಪುದಂ ಪಡೆದೆವೆಂತಾನುಂ ದಿಶಾದಂತಿದಿ॥
ಕ್ಕರಿಣೀ ಪೇಚಕ ಚುಂಬನೈಕ ಸುಖಮಂ ಶೇಷೋರಗಂ ಭೋಗಿನೀ।
ಪರಿರಂಭೋತ್ಸವಮಂ ಪುರಾಣ ಕಮಠಂ ನಿದ್ರಾಂಗನಾ ಸಂಗಮಂ ॥ ೨ ॥

ಈ ಪದ್ಯದ ಕಡೆಯ ಮೂರುಚರಣಗಳು ಪಂಪ ರಾಮಾಯಣದ ಸಪ್ತಮಾಶ್ವಾಸದ ೮೪ ನೆಯ ಪದ್ಯದಲ್ಲಿ ಸಿಕ್ಕುತ್ತವೆ. ಮತ್ತು—

॥ ಕಂ ॥ ಆ ಕ್ಷೋಣೀಧರ ವಧುವಂ।
ದಕ್ಷಿಣ ದಿಗ್ ಮುಖದೊಳೆಸೆವ ಶಶಿಖಂಡದವೋ॥
ಲೀಕ್ಷಣ ಸುಖಮಯ ಮಿರ್ಪುದು॥
ದಕ್ಷಿಣ ಭರತ ತ್ರಿಖಂಡದಾರ್ಯಾಖಂಡಂ ॥ ೨೦॥

ಎಂಬ (ಶಾಸನ) ಪದ್ಯವು ಪಂಪ ರಾಮಾಯಣದ ಪ್ರಥಮಾಶ್ವಾಸದಲ್ಲಿ ೬೫ ನೆಯ ಪದ್ಯವಾಗಿದೆ ಈ ಶಾಸನವನ್ನು ಒಂದು ಖಂಡಕಾವ್ಯವೆಂದೇ ಹೇಳಬಹುದು. ಪಂಪನ ವಾಕ್ಸರಣಿಯ ವೈಭವವನ್ನು ವರ್ಣಿಸುವುದು ಬೇರೆ ಬೇಡ.

—— ವನೋನ್ಮೂಲನ ——

ಮ ॥ ನೆಲನುಳ್ತಂತೆವೊಲಾಗೆ ಕಿತ್ತು ಬನಮುಂ ಮಾರಾಂತರುರ್ವೆಳ್ದಸೃ ।
ಗ್ಜಲದಿಂ ತಾಯ್ವದೆಗೂಡೆ ಬಿತ್ತಿ ಪೆಣನಂ ಬೇರೊಂದು ಶೌರ್ಯಾಂಕುರಂ ॥
ತಲೆದೋರಿತ್ತದು ಕೊರ್ವಿ ಕೀರ್ತಿಲತೆಯಾಯ್ತಾ ವಲ್ಲಿಯಿಂದಂಬರ ।
ಸ್ಥಲಮಂ ಮುದ್ರಿಸಿ ರಾವಣಾಂಗಮುಳಲಂ ತಂದಂ ಮರುನ್ನಂದನಂ ॥

(ಪಂಪರಾಮಾಯಣ-೧೧-೧೨೭.)

‘ ದಶಾನನನ ಕೀರ್ತಿಸ್ತಂಭಮಂ ಕೀಳ್ವವೋಲ್ ’ ಅಶೋಕವನವನ್ನು ಕಿತ್ತು ಹಾಕಿದ ಪವಮಾನ ನಂದನನ ಪರಾಕ್ರಮ ವರ್ಣನೆಯಿದು.

[ಅಶೋಕವನದಲ್ಲಿಯ ಗಿಡಗಳನ್ನೆಲ್ಲ ಕಿತ್ತಲು ನೆಲವೆಲ್ಲ ನೇಗಿಲು ಹೊಡೆದಂತೆ (ಪೊಳ್ಳಾಗಲು) ಶತ್ರುಗಳ ಉಷ್ಣ ರಕ್ತ ಜಲದಿಂದ ಭೂಮಿಗೆ ಸೇಚನೆ ಮಾಡಿ, ಹೆಣಗಳೆಂಬ (ಬೀಜಗಳನ್ನು) ಬಿತ್ತಲು ‘ ಅಭೂತ ಪೂರ್ವವಾದ ’ ಶೌರ್ಯಾಂಕುರವು ಮೊಳೆದೋರಿತು. ಅದು ಬೆಳೆದು ಕೀರ್ತಿಲತೆಯಾಯಿತು. ಮಾರುತಿಯು ಆ ಬಳ್ಳಿಯಿಂದ ಆಕಾಶ ತಲವನ್ನು ಮುದ್ರಿಸಿ (ಎಂದರೆ ಮಾರುತಿಯ ಕೀರ್ತಿಯು ದಿಂಗತವನ್ನೆಲ್ಲ ವ್ಯಾಪಿಸಿತೆಂಬ ತಾತ್ಪರ್ಯವು.) ರಾವಣನಿಗೆ ದುಃಖದ ಎಡೆಯನ್ನು ಬಿತ್ತಿಸಿದ್ದನು. (ಅವನಿಂದ ರಾವಣನ ಅಳಿಗಾಲಕ್ಕೆ ಪ್ರಾರಂಭವಾಯಿತು.)]

ವಾಲ್ಮೀಕಿ ರಾಮಾಯಣದಲ್ಲಿಯೂ ಕೂಡ ಮಾರುತಿಯ ಪರಾಕ್ರಮದ ವರ್ಣನೆಯು ಇಷ್ಟು ಹೃದಯಂಗಮವಾಗಿಲ್ಲ.

—— ಲಂಕಾದಹನ ——

॥ ಚಂ ॥ ಅಣುವನ ವಹ್ನಿ ವಿದ್ಯೆ ಸುಡೆ ಲಂಕೆಯನಲ್ಲಿ ಛಟಚ್ಛಟೆಂಬ ಭೀ ।
ಷಣ ರವಮುಣ್ಮೆ ನೀಳ್ದುರಿಯ ನಾಲಗೆಗಳ್ ದಶಕಂಠರಕ್ತದಿಂ ॥
ತಣಿವ ದಿನಂಗಳಾದಪುವು ರಾಮ ಶರಂಗಳಿನೆಂದು ರಾಗದಿಂ ।
ಕುಣಿವ ಕುಕಿಲ್ವ ಭೈರವಿಯ ರಕ್ತಜಟಾ ಪಟಲಂಗಳೆಂಬಿನಂ ॥
ಪುರಹರನೊಡೆ ಮುನ್ ತ್ರಿಪುರಮಂ ಪಲಕಾಲಮುಪೋಷಿತ ವ್ರತಾ ।
ಚರಣದೊಳಿರ್ದನೀಗಳುಪವಾಸದ ಪಾರಣೆ ವಾಯುಪುತ್ರನಿಂ ॥
ದೊರೆಕೊಳೆ ಲಂಕೆಯಂ ಶಿಖಿ ಶಿಖಾವಧಿಯುಪ್ಪಿನಮುಂಡು ತೇಗುವಂ ।
ತಿರೆ ಪೊರಪೊಣ್ಮಿದತ್ತು ಧಗಿಲೆಂಬ ಧಗದ್ಧಗಿಲೆಂಬ ನಿಸ್ವನಂ ॥

(ಪಂಪರಾಮಾಯಣ-೧೧-೧೪೩, ೧೪೪.)

[ಹನುಮಂತನ ಅಗ್ನಿವಿದ್ಯೆಯು ಲಂಕೆಯನ್ನು ಸುಡಲು ‘ ಛಟ್ ಛಟ್ ’ ಎಂಬ ಘೋರ ರವವು ಉಂಟಾಗಲಾಗಿ “ ರಾಮಬಾಣಾಹತನಾದ ದಶಕಂಠನ ರಕ್ತದಿಂದ ಸಂತುಷ್ಟವಾಗುವ ದಿವಸಗಳು ಬರುವವು ” ಎಂದು ಸಂಭ್ರಮಾ

ವೇಗದಿಂದ ಕುಣಿವ ಕೂಗುವ ಕ್ರೂರ ಕಾಪಾಲಿಕನ ಕೆಂಜಡೆಗಳೆಂಬಂತೆ, ದೂರದ ವರೆಗೆ ಪಸರಿಸಿದುರಿಯ ನಾಲಗೆಗಳು (ಜ್ವಾಲೆಗಳು) ಕಾಣಿಸಿದವು. ಈಶ್ವರನು ಪೂರ್ವದಲ್ಲಿ (ಮಯನಿಂದ ನಿರ್ಮಿತವಾದ) ಮೂರು ಪಟ್ಟಣಗಳನ್ನು ಸುಡಲು (ಆದಿನಿಂದ) ಅಗ್ನಿಯು ಎಷ್ಟೋ ಕಾಲದ ವರೆಗೆ ಉಪೋಷಣ ವ್ರತವನ್ನಾಚರಿಸಿ, ಅದರ ಪಾರಣೆಯ ಯೋಗವು ಹನುಮಂತನಿಂದ ಪ್ರಾಪ್ತವಾಗಲು ಲಂಕಾ ಪಟ್ಟಣವನ್ನು ಯಥೇಚ್ಛವಾಗಿ ಉಂಡು ತೇಗುವಂತೆ "ಧಗಿಲ್-ಧಗಿಲ್-ಧಗದ್ಧಗಿಲ್" ಎಂಬ ಧ್ವನಿಯು (ದಶದಿಕ್ಕುಗಳಲ್ಲಿಯೂ) ಹೊರಡುತ್ತಲಿದ್ದಿತು] ಮಯನು ಪೂರ್ವದಲ್ಲಿ ತಾರಕನ ಮಕ್ಕಳ ಸಲುವಾಗಿ ಆಕಾಶ-ಅಂತರಿಕ್ಷ-ಭೂಲೋಕಗಳಲ್ಲಿ ಮೂರು ಪುರಗಳನ್ನು ನಿರ್ಮಿಸಿದ್ದನು. ದೇವತೆಗಳಿಗೆ ರಾಕ್ಷಸರ ಉಪಟಳವು ಹೆಚ್ಚಾಗಲು ಅವರು ಈಶ್ವರನಿಗೆ ಮರೆಹೊಕ್ಕರು. ಆಗ ವಿಶ್ವೇಶನು ಅವುಗಳನ್ನು ಸುಟ್ಟು ಬಿಟ್ಟನು ಆದುದರಿಂದ ಆತನಿಗೆ ಪುರಹರ, ತ್ರಿಪುರಾರಿ, ಪುರಭಿತ್ ಮೊದಲಾದ ಹೆಸರುಗಳುಂಟಾಗಿರುತ್ತವೆ. ಇಲ್ಲಿ ಕವಿಯು ಅಗ್ನಿ ಜ್ವಾಲೆಗಳನ್ನು ಕುಣಿವ ಕುಕಿಲ್ವ ಭೈರವಿಯ ರಕ್ತಜಟಾಪಟಲಂಗಳಿಂದೂ ಲಂಕಾ ಪಟ್ಟಣವು ಸುಡುತ್ತಲಿರುವಾಗ ಹೊರಟ ಧಗದ್ಧಗಿಲೆಂಬ ನಿಸ್ವನವನ್ನು ಅಗ್ನಿಯ ತೇಗುಗಳಿಂದೂ ವರ್ಣಿಸಿ "ವಿದ್ಯಾ ನಟ ನಾಟಕಂ ನಲಿಗೆ ಮತ್ಕಾವ್ಯಸ್ಥಲೀ ರಂಗದೊಳ್" ಎಂಬ ತನ್ನ ಉಕ್ತಿಯನ್ನು ಯಥಾರ್ಥಗೊಳಿಸಿದ್ದಾನೆ.

— — ಭೀಮನ ವೀರಶ್ರೀಯು ———

॥ ಕಂ ॥ ರಸೆಗಿಳಿದನೊ ಮೇಣ್ ನಾಲ್ಕುಂ।
ದೆಸೆಗಳ ಕೋಣೆಗಳೊಳುಳಿದನೋ ಖಳನಿಲ್ಲೀ ॥
ವಸುಮತಿಯೊಳ್ ಗಾಂಧಾರಿಯ।
ಬಸಿರಂ ಮೇಣ್ ಮಗುಳೆ ಪೋಗಿ ಪೊಕ್ಕಿರ್ದಪನೋ ॥ ೧೯ ॥
ಚರಮಚರವೆಂಬ ಜಗದಂ।
ತರದೊಳ್ ಖಳನೆಲ್ಲಿ ಪೊಕ್ಕೊಡಂ ತದ್ಭುಜಪಂ ॥
ಜರದೊಳಗಿರ್ದೊಡೆ ಹರಿಹರ।
ಹಿರಣ್ಯಗರ್ಭರ್ಕಳಲ್ಲಿಯುಂ ಕೊಲ್ಲದಿರೆಂ ॥ ೨೧ ॥
ಎತ್ತುವೆನೊ ಮಂದರಾದ್ರಿಯ।
ನೊತ್ತುವೆನೊ ರಸಾತಳಕ್ಕೆ ನೆಲನಂ ದೆಸೆಯಂ ॥
ಪತ್ತುವೆನೊ ಪಗೆಯ ಬೆನ್ನಂ।
ಪತ್ತುವೆನೊ ದಿಶಾಗಜಂಗಳಂ ತುತ್ತುವೆನೋ ॥ ೧೭ ॥
ದಾಂಟುವೆನೊ ಕುಲನಗಂಗಳ।
ನೀಂಟುವೆನೊ ಚತುಸ್ಸಮುದ್ರಮಂ ರವಿಶಶಿಯಂ ॥
ಮೀಂಟುವೆನೊ ಗಗನ ತಳಮಂ।
ಗಂಟಲನೊತ್ತುವೆನೊ ಸಕಲ ದಿಕ್ಪಾಲಕರಂ ॥ ೧೮ ॥

ಮ॥ ಚತುರಂತಕ್ಷಿತಿಕಾಂತೆ ಕೇಳ್ ಜಲಧಿ ಕೇಳ್ ಸಪ್ತಾರ್ಚಿ ಕೇಳ್ ತಾತಪೂ॥
ರುತಕೇಳ್ ಮಾರುತಮಾರ್ಗಕೇಳ್ ಪಗೆವನಂ ಕೊಂದೆನ್ನ ಕೋಪಾಗ್ನಿಗಾ॥
ಹುತಿಮಾಳ್ಪೆಂ ಕೊಲಲಾರದಂದು ತರಿಸಂದಾನೆನ್ನ ಸಂದಗ್ನಿಗಾ।
ಹುತಿಮಾಳ್ಪೆಂ ಗಡಮೆಂದು ಪೂಣ್ದೊದರಿದಂ ಕೌರವ್ಯ ಕೋಳಾಹಳಂ॥೨೨॥
(ಗದಾಯುದ್ಧ-೬)

ಕಡಲಂ ಪೊಕ್ಕೊಡೆ ಪೀರ್ದಪೆಂ ಕಡಲನಾ ಪಾತಾಳಮಂ ಪೊಕ್ಕನ।
ಪ್ಪೊಡೆ ಶೇಷಾಹಿಯ ಪಲ್ಗಳಂ ಮುರಿದಪೆಂ ಬ್ರಹ್ಮಾಂಡಮಂ ಪೊಕ್ಕನ॥
ಪ್ಪೊಡಮಾ ಬ್ರಹ್ಮನ ಗಂಟಲಂ ಮುರಿದಪೆಂ **ದುರ್ಯೋಧನಂ** ತಾಂಪುಗ॥
ಲ್ಕೆಡೆಯಾ ತ್ರೈಭುವನಂಗಳಿಂ ಪೊರಗೆ ಮತ್ತೆಲ್ಲಿತ್ತೊ ಬಾಣಾಂತಕಾ॥
(ಪಂಪಭಾರತ ೧೩-೭೬)

[ರಸೆ=ಪಾತಾಳ, ಚರಂ+ಅಚರಂ, ತುತ್ತು=ನುಂಗು, ಸಪ್ತಾರ್ಚಿ=ಅಗ್ನಿ (ಸಪ್ತ=ಏಳು, ಅರ್ಚಿಷಃ=ಜ್ವಾಲೆಗಳು, ಅಸ್ಯ=ಇವನವು) ತರಿಸಂದು+ಆಂ+ಎನ್ನಂ=ನಿಶ್ಚಯಿಸಿ ನಾನು ನನ್ನನ್ನು, ಪೂಣ್ದು=ಪ್ರತಿಜ್ಞಾಪೂರ್ವಕವಾಗಿ]

——— ರತಿ ಪ್ರಲಾಪ ———

ಮ. ಪ್ರ॥ ತನಿವಣ್ಣಂ ಲಂಚಮಾವೆಂ ಪುರುಳಿ ನಿನಗೆ ಪೂಗೊಂಚಲಂಬೇಗೆದಿಂದಂ
ನಿನಗೀವೆಂ ತುಂಬಿ ಕೆಂದಾವರೆಯ ಮಿಸುಪಮೆಲ್ಮೊಗ್ಗೆಯಂ ಮಾಣದೆಂದುಂ॥
ನಿನಗೀವೇನಂಚೆ ಕಂಪಂ ನಿನಗೆ ಸಲಿಸುವೆಂ ಕೂಡೆ ತಣ್ಗಾಳಿಯೆನ್ನೋ।
ಪನನಿಂದಾರಯ್ದು ತಂದೆನ್ನೊಡನಿರಿಸಿದೊಡೊಂದಾಕೆ ಮಾತಾಡುತಿರ್ಪಳ್॥
(ಕಬ್ಬಿಗರಕಾವ—೩೧೮)

["ನನ್ನ ನಲ್ಲನಾದ ಮನ್ಮಥನನ್ನು ಹುಡುಕಿಕೊಂಡು ಬಂದರೆ,ಎಲೈ ಗಿಳಿಯೇ! ನಿನಗೆ ಸವಿಯಾದ ಹಣ್ಣನ್ನು ಲಂಚ ಕೊಡುವೆನು. ಎಲೈತುಂಬಿಯೇ, ನಿನಗೆ ಹೂವಿನ ಗೊಂಚಲವನ್ನು ಕೊಡುವೆನು. ಎಲೈ ಹಂಸವೇ ನಿನಗೆ ಸುಂದರವಾದ ಕೆಂದಾವರೆಯ ಮಧುರವಾದ ಮೊಗ್ಗೆಯನ್ನು ಕೊಡುವೆನು. ಎಲೈ ಶೀತಲವಾದ ಗಾಳಿಯೇ, ನಿನಗೆ ಪರಿಮಳವನ್ನು ಸಲ್ಲಿಸುವೆನು" ಎಂದು ರತಿಯು ಪ್ರಲಾಪಿಸುತ್ತಲಿದ್ದಳು.]

ಇಲ್ಲಿ ರತಿಯು ಕಾಮನನ್ನು ಕಾಣದೆ ಪ್ರಲಾಪ ಮಾಡುತ್ತಲಿರುವಳು-ಅವಳು ತನಗಾದ ಶೋಕಾಗ್ನಿಯ ನಿವಾರಣೆಗಾಗಿ ಶೀತಲವಾದ ಸರೋವರಗಳಲ್ಲಿಯೂ, ಎಳ ಮಾವಿನ ಬನಗಳಲ್ಲಿಯೂ, ತಳಿರ ಹಂದರಗಳಲಿ ಯೂ ಬಳ್ಳಿ ಮಲ್ಲಿಗೆಯ ಮಂಡಪಗಳಲ್ಲಿಯೂ, ಸುಳಿದಾಡಿದಳು. ಅವರಿಂದೇನೂ ಪ್ರಯೋಜನವಾಗಲಿಲ್ಲ. ಅವಳು ಶೋಕಪರವಶಳಾಗಿ, ಗಿಳಿ ಮೊದಲಾದುವುಗಳ ಕೂಡ ಮಾತಾಡಹತ್ತಿದಳು. ಶೋಕಾರ್ತರು ಚೇತನಾಚೇತನವೆಂಬ ಭೇದವನ್ನು

ಎಣಿಸಲಾರರು. ಈ ಪದ್ಯದ ಸೊಬಗನ್ನು ಶಬ್ದಗಳಿಂದ ತಿಳಿಸುವುದು ಅಸಾಧ್ಯ. ಗಿಳಿಯು ಮದನನ ವಾಹನವು. ಆದುದರಿಂದ ಗಿಳಿಗೆ ಅವನಿರುವ ಸ್ಥಳವು ಗೊತ್ತಿರಲೇಬೇಕೆಂದು ಮೊದಲು ಅದಕ್ಕೆ ಪ್ರಶ್ನೆ ಮಾಡುತ್ತಾಳೆ "ಗಿಳಿಗೆ ಪಕ್ವವಾದ ಹಣ್ಣಿನ ಮೇಲೆ ಪ್ರೀತಿ ಬಹಳ ಹಾಗೆಯೇ ಕೇಳಿದರೆ ಹೇಳಲಿಕ್ಕಿಲ್ಲ" ಎಂದೆಂದುಕೊಂಡು "ಎಲೈ ಗಿಳಿರಾಯನೇ, ನಿನಗೆ ಒಂದು ಹಣ್ಣನ್ನು— ಸವಿಯಾದ ಹಣ್ಣನ್ನು-ಕೊಡುವೆನು. ನನ್ನ ಪತಿಯನ್ನು ಕರೆದುಕೊಂಡು ಬರಬಾರದೇ" ಎಂದು ನುಡಿದಳು- ಅದರಿಂದ ಏನೂ ಉತ್ತರ ಸಿಕ್ಕದಿರುವುದನ್ನು ನೋಡಿ ಮದನ ಚಾಪದ ಹೆದೆಯಾದ ತುಂಬಿಯ ಕಡೆಗೆ ತಿರುಗಿದಳು.ಅದೂ ಉತ್ತರವನ್ನೀಯಲಿಲ್ಲ. ಆ ಮೇಲೆ ಉತ್ಕಂಠಾಪರವಶಳಾಗಿ ಹಂಸನಿಗೂ, ಮಾರುತನಿಗೂ, ಬೇಡಿಕೊಂಡಳು. ಈ ಪ್ರಕಾರ ಕವಿಯು ರತಿಯ ಕೋಮಲಾಂತ:ಕರಣವು ಶೋಕಾನಲದಿಂದ ಸಂತಪ್ತವಾಗಿತ್ತೆಂದು **ಲಲಿತ ಸರಣಿಯಿಂದ ವರ್ಣಿಸಿದ್ದಾನೆ.**

—ಒರ್ವ ನಲ್ಲಳ ಪ್ರಲಾಪ--

॥ ಕಂ ॥ ಮಲ್ಲಿಗೆಯೇ ಮಾಮರನೇ।
ಪಲ್ಲವದಿಂದೊಪ್ಪಿ ತೋರ್ಪಶೋಕೆಯ ಮರನೇ।
ನಲ್ಲನ ಕಂಡಿರೆ ಪೇಳಿಂ।
ಮೆಲ್ಲಡಿಗಳ್ ನೋಯೆ ಬಂದ ಮನಸಿಜ ನಿಭನಂ॥
(ಜೀವಸಂಬೋಧನೆ—ಲೋಕತ್ವಾನುಪ್ರೇಕ್ಷೆ-೪೪)

—ಗಿಳಿಗಳ ಪ್ರಲಾಪ—

॥ ಮ ॥ ದ್ವಿಜರೊಳ್ ಪಂಡಿತ ಕಾಮವಾಜಿ ಮುನಿನಾಮಾನಂದ ಸಂತಾನ ಹಾ।
ಸುಜನ ಶ್ರೀನಗವಾಸ ಚೆಂಗುಡಿಯ ಮೂಗೆನ್ನಾತ್ಮ ಚೈತನ್ಯಮೇ ॥
ಭುಜ ಶೌರ್ಯಾತುಳ ಕಾಲ ವಿಕ್ರಮನ ದೂತರ್ ಬಂದುಕೊಂಡೊಯ್ದರೋ।
ನಿಜದಿಂ **ಕನ್ನಡವಕ್ಕಿ ಕೈಪಿಡಿಯೆ** ನೀನೆಂತಿರ್ದು ಕಯ್ಗಾದೆಯೈ ॥
॥ ಕಂ ॥ ಎಳೆಯನೆ ಗಿಳಿರಾಯನೆ ಪ।
ಜ್ಜಳಿಸುವ ನವಕಾಂತಿಕಾಯ ನಗೆಮೊಗದಣುಗಾ॥
ತಿಳಿವಿನ ಮತಿ ಚದುರನೆ ಕಳೆ।
ವಳಮಂ ಮಿಗೆ ಮಾಣಿಸೆನ್ನ ಮುದ್ದಿನ ರಾಮಾ ॥
(ಹವ್ಯಾರ ಕಾವ್ಯ-ಸಾಹಿತ್ಯಪರಿಷತ್ ಪತ್ರಿಕಾ)

[ದ್ವಿಜ=ಪಕ್ಷಿ, ಕಾಮವಾಜಿ=ಮದನನ ವಾಹನ, ಮುನಿನಾಮ= 'ಶುಕ' ಎಂಬ ಹೆಸರು, ಕೈಪಿಡಿ=ಕನ್ನಡಿ,]

ಮ॥ ಗಿಡುಗಂ ಕೊಂದುದೊ ಬೇಡರಿಟ್ಟ ಬಲೆಯೊಳ್ ಮೇಣ್ ಬಿಳ್ದನೋ ಪಕ್ಕವೇ।
ಸುಡಿಪತ್ರೋ ಪಿಪಿಪಸ್ರ ಶಾರಿಕೆ ರತವ್ಯಾಪಾರದೊಳ್ ಪೊಯ್ದಳೋ ॥

ಕಾರ ನಾಡಿದನೆಂದು ಗೋಪಿಯುತಾಡಿಸುತ್ತ ಪಿರಲ್ಕೆ ಸಂ।
ಸಾರ ನಾಟಕ ಸೂತ್ರಧಾರಿ ಮುರಾರಿ ಕೈಪರೆಗಾಡಿದಂ ॥
(ಜಗನ್ನಾಥ ವಿಜಯ—೩—೫೩, ೫೪.)

—— ಸೃಷ್ಟಿಕರ್ತನು ——

॥ಮತ್ತೇಭ॥ ಸಿರಿಯಂ ಕೌಸ್ತುಭ ರತ್ನಮಂ ಹರಿಯನಂತಾ ಶಂಖಮಂ ಚಕ್ರಮಂ
ಭರದಿಂ ಪೇರಿ ಬಹಿತ್ರದಂತಿರೆಸೆದಿರ್ದ್ದಂ ಶೇಷನಾಕ್ಷೀರ ಸಾ ॥
ಗರದೊಳ್ ದೇವನ ನಾಭಿ ಪದ್ಮದ ಮೃಣಾಳಂ ಕೂಪ ಕಂಭಂಬೊಲ ।
ಚ್ಚರಿಯಾಗಿರ್ದುದು ಕರ್ಣಧಾರನವೊಲಿರ್ದಂ ಪುಟ್ಟಿ ಪದ್ಮೋದ್ಭವಂ ॥
(ಜನ್ನ-ತರೀಕೆರೆ ಶಾಸನ-ಪದ್ಯ-೫.)

[ಲಕ್ಷ್ಮಿಯನ್ನೂ, ಕೌಸ್ತುಭ ಮಣಿಯನ್ನೂ, ಶ್ರೀ ವಿಷ್ಣುವನ್ನೂ ಆ ಶಂಖ ಚಕ್ರಗಳನ್ನೂ ಹೇರಿದ ಹಡಗನಂತೆ ಶೇಷನು ಕ್ಷೀರಸಾಗರದಲ್ಲಿ ಶೋಭಿಸುತ್ತಿದ್ದನು. (ಶೇಷಶಾಯಿಯಾದ) ಶ್ರೀ ವಿಷ್ಣುವಿನ ನಾಭಿ ಕಮಲದ ದೇಟು ಕೂಪಸ್ತಂಭದಂತೆ ಆಶ್ಚರ್ಯಕರವಾಗಿ ಇರಲು, ಅದರಲ್ಲಿ ಹುಟ್ಟಿದ ಬ್ರಹ್ಮದೇವನು ಕರ್ಣಧಾರ (ಹಡಗನಡೆಯಿಸುವವ)ನಂತೆ ಇದ್ದನು.] ಕವಿಲೀಲೆಯು ಪರಮಾತ್ಮನ ಲೀಲೆಯಂತೆಯೇ ಅಗಾಧವಾದುದಲ್ಲವೇ? ಅಪಾರವಾದ ಕಾವ್ಯ ಸಂಸಾರದಲ್ಲಿ ಕವಿಯೇ ಪ್ರಜಾಪತಿಯು.

ವಿ. ಟಿ.—'ಪೀತ ವಸನಂ...ರಂಜಿಕುಂ " (ಪುಟ ೬೪) ಎಂಬ ಸಂದರ್ಭದಲ್ಲಿ ' ಪೀತ ರಕ್ತವರ್ಣಂಗಳ್ಗೆ ವರ್ಣೈಕ್ಯಂ' ಎಂದು ತಿಳಿದುಕೊಳ್ಳತಕ್ಕುದು. ಚಂದ್ರನ ಕಲಂಕದ ವಿಷಯದಲ್ಲಿದ್ದ ಕವಿಸಮಯಕ್ಕಾಗಿ ಕಾವ್ಯಾವಲೋಕನದ ೨೪೯ ನೆಯ ಸೂತ್ರವನ್ನು ನೋಡತಕ್ಕುದು.

ಒಪ್ಪೋಲೆ--(ಪುಟ ೭ ಪಂಕ್ತಿ ೨೨) ಷಟದ-ಷಟ್ಪದ, (೧೬-೨೦) ಕೀರಟ-ಕಿರೀಟ,(೧೭-೧೭) ವೃತ್ಯಪ್ತಿ-ವ್ಯುತ್ಪತ್ತಿ, (೩೦-೮) ಪಾಡವಪ-ಪಾಡಿದಪ(ಮತ್ತು) ವರಾಗ-ಪರಾಗ, (೩೭-೩) ಕೋಕಿಲಿ-ಕೋಕಿಳ, (೩೯-೧೧) ಸಂತೇತ-ಸಂಕೇತ, (೪೦-೨೦) ಕೊಡ-ಕೂಡ. (೫೬-೩೧) ಪೊಕ್ಕ-ಪೊಕ್ಕಂ, (೫೭-೨೩) ನಳೀನೀ-ನಳಿನೀ, (೭೪-೨೨) ಪಣ್-ಪೆಣ್.

ಕೋರಿಕೆ—ಈ ಆಯ್ದ ಕವಿತೆಗಳಿಗೆ ನಾವು ಯಥಾಮತಿ ಅರ್ಥ ಬರೆದಿದ್ದೇವೆ. ಪಂಡಿತರು ತಪ್ಪುಗಳನ್ನು ಅಂತಃಕರಣ ಪೂರ್ವಕವಾಗಿ ತಿಳುಹಿಸುವರೆಂದು ನಮ್ಮ ಪ್ರಾರ್ಥನೆ. ಅರ್ವಾಚೀನ ಕವಿಗಳ ಕವಿತೆಗಳನ್ನಾಯ್ದು ಟೀಕೆಯನ್ನು ಬರೆಯಬೇಕೆಂದು ನಮ್ಮ ಇಚ್ಛೆಯಿದೆ; ಕನ್ನಡಿಗರು ನಮ್ಮ ಕಡೆಯಿಂದ ಸೇವೆಯನ್ನು ತೆಗೆದುಕೊಳ್ಳುವರೆಂದು ಹಾರೈಸುತ್ತೇವೆ. ಕನ್ನಡ ಕಾವ್ಯಗಳನ್ನು(೧)ಕಾವ್ಯಕಲಾನಿಧಿ ಕಾರ್ಯಾಲಯ ಮೈಸೂರು, (೨) ಎಂ. ಎಸ್ ರಾವ್ ಕಂಪನಿ-ಬೆಂಗಳೂರು,(೩) ಶಂಕರ ಕರ್ನಾಟಕ ಪುಸ್ತಕ ಭಾಂಡಾರ-ಧಾರವಾಡ, ಇವುಗಳಲ್ಲಾವ ವಿಳಾಸಿಗಾದರೂ ಬರೆದು ತರಿಸಿಕೊಳಬಹುದು.

ಪಂಪನ ಸ್ವದೇಶ ಪ್ರೀತಿ.

ಉ॥ ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪೊಗೆ।
ಳ್ಗಾಗರಮಾದ ಮಾನಸರ ಮಾನಸದಂತವರಾಗಿ ಪುಟ್ಟಲೇ ॥
ನಾಗವುಮೇನ್ನೊ ತೀರ್ದಪುದೊ ತೀರದೊಡಂ
ಮರಿದುಂಬಿಯಾಗಿ ಮೇ।
ಣ್ಕೋಗಿಲೆಯಾಗಿ ಪುಟ್ಟುವುದು ನಂದನದೊಳ್
ಬನವಾಸಿ ದೇಶದೊಳ್ ॥

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರ.
ಪ್ರಕಾಶಕರೂ, ಪುಸ್ತಕ ವ್ಯಾಪಾರಿಗಳು.
ಮಾಳಮಡ್ಡಿ ಧಾರವಾಡ.

''ಗ್ರಾಮಾಧಿಕಾರೀ'' ಮುದ್ರಣಾಲಯದಲ್ಲಿ ವಿ. ಹ. ರಾ. ಸೋಹರೆ ಇವರು ಮುದ್ರಿಸಿದರು.
ೀ ಹಣಮಂತ, ಬಳವಂತರಾವ್ ಕೊಣ್ಣೂರು ಇವರು ಇಲ್ಲಿಯೇ ಪ್ರಸಿದ್ಧ ಮಾಡಿದರು.